ಸಂಪಾದಕರು :
ಎಂ.ಎಸ್. ವಿಕಾಸ್

ಶುಕ್ರವಾರ, ನವೆಂಬರ್ 17, 2023
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 185 RNI : 27369/75

# ಜನತಾ ವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

50 1974 2023

janathavani@mac.com
www.janathavani.com
08192 254736 91642 99999



## ಮುರುಘಾ ಶರಣರ ಬಿಡುಗಡೆ

ಚಿತ್ರದುರ್ಗ, ನ. 16 – ಚಿತ್ರದುರ್ಗ ಮುರುಘಾ ಮಠದ ಶ್ರೀಗಳಾದ ಶಿವಮೂರ್ತಿ ಶರಣರಿಗೆ ಚಿತ್ರದುರ್ಗ ನ್ಯಾಯಾಲಯ ಜಾಮೀನು ನೀಡಿದೆ. ಮಕ್ಕಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಹಾಗೂ ಜಾತಿ ನಿಂದನೆ ಪ್ರಕರಣಗಳಲ್ಲಿ ಸಿಲುಕಿದ್ದ ಅವರು, ಕಳೆದ ವರ್ಷ ಸೆಪ್ಟೆಂಬರ್‌ನಿಂದ ಬಂಧನದಲ್ಲಿದ್ದರು.

ಕಳೆದ ನವೆಂಬರ್ 8ರಂದು ಶರಣರಿಗೆ ಹೈಕೋರ್ಟ್ ಜಾಮೀನು ನೀಡಿತ್ತು. ಈ ಬಗ್ಗೆ ಪರಿಶೀಲಿಸಿದ ನಂತರ ಎರಡನೇ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಅವರಿಗೆ ಜಾಮೀನು ಮಂಜೂರು ಮಾಡಿದೆ.

ಆರೋಪಿ ಚಿತ್ರದುರ್ಗದಿಂದ ಹೊರಗಿರಬೇಕು ಎಂದು ಜಾಮೀನು ನೀಡುವಾಗ ನ್ಯಾಯಾಲಯ ಷರತ್ತು ವಿಧಿಸಿದೆ. ಅದರಂತೆ, ಶರಣರು ದಾವಣಗೆರೆಯ ವಿರಕ್ತ ಮಠಕ್ಕೆ ಬಂದಿದ್ದಾರೆ.

**ಚಿತ್ರದುರ್ಗದಿಂದ ಹೊರಗಿರುವಂತೆ ಜಾಮೀನಿನಲ್ಲಿ ಷರತ್ತು, ದಾವಣಗೆರೆಯಲ್ಲಿ ಉಳಿದುಕೊಳ್ಳಲು ಶರಣರ ನಿರ್ಧಾರ**

ಚಿತ್ರದುರ್ಗ ಬಂಧೀಖಾನೆಯಿಂದ ಹೊರ ಬಂದ ನಂತರ ತಮ್ಮನ್ನು ಭೇಟಿ ಮಾಡಿದ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ನಾನು ಯಾವುದೇ ಪ್ರತಿಕ್ರಿಯೆ ನೀಡದೇ ಮೌನವಾಗಿರುತ್ತೇನೆ. ನಿಮ್ಮ ಸಹಕಾರ ಬೇಕು. ನ್ಯಾಯಾಲಯದ ಪ್ರಕ್ರಿಯೆಗಳು ನಡೆಯುವಾಗ, ನಾನು ಯಾವುದೇ ಹೇಳಿಕೆ ನೀಡುವುದಿಲ್ಲ ಎಂದು ತಿಳಿಸಿದ್ದಾರೆ.

ಆರೋಪಿ ವಿರುದ್ಧ ಎರಡು ಪೋಕ್ಸೋ ಪ್ರಕರಣಗಳು ದಾಖಲಾಗಿವೆ. ಇವುಗಳ ವಿಚಾರಣೆ ಪೂರ್ಣಗೊಳ್ಳುವವರೆಗೂ ಚಿತ್ರದುರ್ಗಕ್ಕೆ ಬರದಂತೆ ಹೈಕೋರ್ಟ್ ಷರತ್ತು ವಿಧಿಸಿತ್ತು. ಎರಡು ಲಕ್ಷ ರೂ.ಗಳ ವೈಯಕ್ತಿಕ ಬಾಂಡ್ ಹಾಗೂ ಎರಡು ಶ್ಯೂರಿಟಿಗಳನ್ನು ಸಲ್ಲಿಸಬೇಕು ಹಾಗೂ ಪುರಾವೆಗಳನ್ನು ತಿರುಚುವುದು, ಇಲ್ಲದೇ ಸಾಕ್ಷಿಗಳ ಮೇಲೆ ಪ್ರಭಾವ ಬೀರುವುದನ್ನು ಮಾಡಬಾರದು ಎಂದು ತಿಳಿಸಲಾಗಿದೆ.

ಇದಕ್ಕೂ ಮುಂಚೆ ಅಕ್ಟೋಬರ್ 13ರಂದು ನ್ಯಾಯಾಲಯ ಮೊದಲ ಪ್ರಕರಣದಲ್ಲಿ ಶರಣರಿಗೆ ಜಾಮೀನು ನೀಡಿತ್ತು.

ಮೈಸೂರಿನ ಸರ್ಕಾರೇತರ ಸಂಸ್ಥೆಯಾದ (4ನೇ ಪುಟಕ್ಕೆ)

### ಜಯಘೋಷಗಳ ಸ್ವಾಗತ

ಚಿತ್ರದುರ್ಗದ ಜೈಲಿನಿಂದ ಜಾಮೀನಿನ ಮೇಲೆ ಬಿಡುಗಡೆಯಾಗಿ ದಾವಣಗೆರೆಯ ಶಿವಯೋಗಾಶ್ರಮಕ್ಕೆ ಬಂದ ಮುರುಘಾ ಶರಣರಿಗೆ ಮಠದ ಭಕ್ತರು ಜಯಘೋಷಗಳೊಂದಿಗೆ ಸ್ವಾಗತಿಸಿದರು.

ಕಾರಿನಿಂದ ಇಳಿದು ಬಂದ ಶರಣರಿಗೆ ಮಾಲಾರ್ಪಣೆ ಮಾಡಿ, ಕಾಲಿಗೆ ನಮಸ್ಕರಿಸಿ ಆಶೀರ್ವಾದ ಪಡೆದರು. ಜಯಘೋಷಗಳ ನಂತರ ಸಿಹಿ ಹಂಚಿ ಸಂಭ್ರಮಿಸಿದರು.

ನಂತರ ಶರಣರು ಶಿವಯೋಗಾಶ್ರಮದ ಆವರಣದಲ್ಲಿರುವ ಜಯದೇವ ಮುರುಘರಾಜೇಂದ್ರ ಮಹಾಸ್ವಾಮಿಗಳವರ ಆಲಯ ಹಾಗೂ ಅಥಣಿ ಶಿವಯೋಗಿಗಳವರ ಕರ್ತೃ ಗದ್ದುಗೆಗೆ ತೆರಳಿ ನಮನ ಸಲ್ಲಿಸಿದರು. ನಂತರ ದಾವಣಗೆರೆಯ ಹಳೆ ಪೇಟೆಯ ವಿರಕ್ತಮಠಕ್ಕೆ ತೆರಳಿದರು.

ಈ ಸಂದರ್ಭದಲ್ಲಿ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮೀಜಿ, ಶ್ರೀ ತಿಪ್ಪೇರುದ್ರ ಸ್ವಾಮೀಜಿ, ಮಾಜಿ ಶಾಸಕ ಹೆಚ್.ಎಸ್. ಶಿವಶಂಕರ್, ಮಠದ ಭಕ್ತರಾದ ಎಂ. ಜಯಕುಮಾರ್, ಎಸ್.ಓಂಕಾರಪ್ಪ, ಕುಂಟೋಜಿ ಚನ್ನಬಸಪ್ಪ, ಶಶಿಧರ ಬಸಾಪುರ, ಬಾಡದ ಆನಂದರಾಜ್, ಜೆ.ಸಿ ಬಸವರಾಜ್, ಮಂಜುನಾಥಸ್ವಾಮಿ, ಚಿಗಟೇರಿ ಜಯಪ್ರಕಾಶ್, ಸಿ.ಆರ್. ನಸೀರ್ ಅಹ್ಮದ್, ಭರಮಸಾಗರ ಪ್ರದೀಪ್, ವಕೀಲರಾದ ಸಂದೀಪ್ ಪಾಟೀಲ್, ಉಮೇಶ್ ಮತ್ತಿತರರು ಉಪಸ್ಥಿತರಿದ್ದರು.

## ಹಣಕಾಸು ಹಗರಣಗಳು ಸಂಘಟಿತ ಅಪರಾಧ ವ್ಯಾಪ್ತಿಗೆ ಸಂಸದೀಯ ಸಮಿತಿ ಸ್ವಾಗತ

ನವದೆಹಲಿ, ನ. 16 – ಪ್ರಮುಖ ಹಣಕಾಸು ಹಗರಣಗಳು, ಪೊಂಜಿ ಹಗರಣಗಳು, ಸೈಬರ್ ಅಪರಾಧ, ವಾಹನಗಳ ಕಳವು, ಜಮೀನು ಕಬಳಿಕೆ ಹಾಗೂ ಸುಪಾರಿ ಹತ್ಯೆಗಳನ್ನು ಸಂಘಟಿತ ಅಪರಾಧಗಳ ವ್ಯಾಪ್ತಿಗೆ ತರಲು ನೂತನ ಅಪರಾಧಿಕ ಶಾಸನದಲ್ಲಿ ಪ್ರಸ್ತಾಪಿಸಿರುವುದನ್ನು ಸಂಸದೀಯ ಸಮಿತಿ ಸ್ವಾಗತಿಸಿದೆ.

ಸರ್ಕಾರದ ಉದ್ದೇಶಿತ ಕ್ರಮದಿಂದ ಸಂಘಟಿತ ಅಪಹರಣ, ಭೂ ಕಬಳಿಕೆ, ಸುಪಾರಿ ಇತ್ಯಾದಿಗಳನ್ನು ತಡೆಯಲು ನೆರವಾಗಲಿದೆ ಎಂದು ಬಿಜೆಪಿ ಸಂಸದ ಬ್ರಿಜ್‌ಲಾಲ್ ಅವರ ನೇತೃತ್ವದ ಗೃಹ ವ್ಯವಹಾರ ಕುರಿತ ಸಂಸದೀಯ ಸಮಿತಿ ಹೇಳಿದೆ.

ಈ ರೀತಿ ಅಪರಾಧಗಳಲ್ಲಿ ತೊಡಗುವವರಿಗೆ ಮರಣ ದಂಡನೆ ಇಲ್ಲವೇ ಜೀವಾವಧಿಯವರೆಗೆ ಶಿಕ್ಷೆ ವಿಧಿಸಲು ಭಾರತೀಯ ನ್ಯಾಯ ಸಂಹಿತೆ (ಬಿ.ಎನ್.ಎಸ್.) ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ಅಪಹರಣ, ದರೋಡೆ, ವಾಹನ ಕಳ್ಳತನ, ಹಣ ವಸೂಲಿ, ಭೂ ಕಬಳಿಕೆ, ಸುಪಾರಿ, ಆರ್ಥಿಕ ಅಪರಾಧ, ಸೈಬರ್ ಅಪರಾಧಗಳು, ಮಾನವ ಕಳ್ಳಸಾಗಣೆ, ಮಾದಕ, ಅಕ್ರಮ ಸರಕು ಸಾಗಣೆ, ಮಾನವ ಕಳ್ಳಸಾಗಣೆಗಳನ್ನು ಸಂಘಟಿತವಾಗಿ ನಡೆಸಿದ ಸಂದರ್ಭದಲ್ಲಿ ಕಠಿಣ ಕ್ರಮ ತೆಗೆದುಕೊಳ್ಳಲು ಮಸೂದೆಯಲ್ಲಿ ಪ್ರಸ್ತಾಪಿಸಲಾಗಿದೆ.

ನಂಬಿಕೆ ದ್ರೋಹ, ಫೋರ್ಜರಿ, ನಕಲಿ ನೋಟು, ಹಣಕಾಸು ಹಗರಣ, ಪೊಂಜಿ ವ್ಯವಹಾರಗಳು, ಸಮೂಹ ವಂಚನೆ ಇತ್ಯಾದಿಗಳನ್ನು ಆರ್ಥಿಕ ಅಪರಾಧಗಳೆಂದು (4ನೇ ಪುಟಕ್ಕೆ)

## ವರ್ಗಾವಣೆಯಲ್ಲಿ ಯತೀಂದ್ರ ಹಸ್ತಕ್ಷೇಪ

ಬೆಂಗಳೂರು, ನ. 16 - ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಸರ್ಕಾರಿ ನೌಕರರ ವರ್ಗಾವಣೆ ವಿಷಯದಲ್ಲಿ ಹಸ್ತಕ್ಷೇಪ ಮಾಡಿ, ವಸೂಲಿಯಲ್ಲಿ ತೊಡಗಿದ್ದಾರೆಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಆರೋಪಿಸಿದ್ದಾರೆ.

ಕಾಸಿಗಾಗಿ ಹುದ್ದೆ ದಂಧೆಯಲ್ಲಿ ತೊಡಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ತಕ್ಷಣವೇ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು ಎಂದು ಕುಮಾರಸ್ವಾಮಿ ಒತ್ತಾಯಿಸಿದ್ದಾರೆ.

ಸಿದ್ದರಾಮಯ್ಯ ಅವರ ಪುತ್ರ ಯತೀಂದ್ರ ಅವರ ಕುರಿತ ವಿಡಿಯೋ ಬಹಿರಂಗವಾದ ಬೆನ್ನಲ್ಲೇ ತುರ್ತು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಿದ್ದರಾಮಯ್ಯ ಅವರ ಸಚಿವಾಲಯ, ವರ್ಗಾವಣೆ ದಂಧೆಯಲ್ಲಿ ಆರಂಭದಿಂದಲೂ ಎಡೆಬಿಡದೆ ತೊಡಗಿದೆ ಎಂದು ನಾನು ಅನೇಕ ಸಲ ಆರೋಪ ಮಾಡಿದ್ದೆ. ಈಗ ಆ ಆರೋಪ ಸತ್ಯವಾಗಿದೆ ಎಂದು ಅವರು ಹೇಳಿದರು.

ಶಾಲೆಗಳ ಉದ್ಧಾರಕ್ಕಾಗಿ ಸಿಎಸ್‌ಆರ್ ಫಂಡ್ ಬಗ್ಗೆ ಅಪ್ಪ ಮುಖ್ಯಮಂತ್ರಿ, ಮಗ ಮಾಜಿ ಶಾಸಕ ಫೋನ್‌ನಲ್ಲಿ ಮಾತನಾಡುತ್ತಿದ್ದರು ಎಂದು ವಿಡಿಯೋಗೆ ತೇಪೆ ಹಾಕುವ ಕೆಲಸ ಮಾಡುತ್ತಿದ್ದಾರೆ. ಆದರೆ, ತೇಪೆ ಹಾಕುವ ಮೊದಲೇ ಇವರ ಮಾನ ಹಾದಿಬೀದಿಯಲ್ಲಿ ಹರಾಜಾಗಿದೆ ಎಂದು ಜೆಡಿಎಸ್ ನಾಯಕ ಕುಮಾರಸ್ವಾಮಿ ಕೆಣಕಿದ ಮಾಜಿ ಮುಖ್ಯಮಂತ್ರಿಗಳು, ಯಾವ ಯಾವ ಸ್ಕೂಲ್‌ಗೆ ಹಣ ಕಳಿಸಬೇಕು ಅಂತ ಮಗನ ಬಳಿ ಕೇಳಿದ್ದಾರೆ ಅನಿಸುತ್ತದೆ. ಜನರು ದಡ್ಡರಲ್ಲ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದರು.



### ಕುಮಾರಸ್ವಾಮಿ ಆರೋಪ

ಹಿಂದೆ ಇದೇ ಸಿದ್ದರಾಮಯ್ಯ ಅವರು ಯಡಿಯೂರಪ್ಪ ಮುಖ್ಯಮಂತ್ರಿ ಆಗಿದ್ದಾಗ ವಿಜಯೇಂದ್ರ ಸೂಪರ್ ಸಿಎಂ ಎಂದು ದೂರಿದ್ದರು, ವಿಎಸ್‌ಟಿ ಟ್ಯಾಕ್ಸ್ ಎಂದು ಸಿದ್ದರಾಮಯ್ಯ ಅವರು ನೀಡಿದ್ದ ಹೇಳಿಕೆಯ ವಿಡಿಯೋ ತುಣುಕನ್ನು ಟಿವಿಯಲ್ಲಿ ಹಾಕಿ ಮಾಧ್ಯಮ ವರದಿಗಾರರಿಗೆ ತೋರಿಸಿದರು.

ಅಲ್ಲದೆ, ಈಗ ಸಿದ್ದರಾಮಯ್ಯ ನಡೆಸುತ್ತಿರುವ ವೈಎಸ್‌ಟಿ ದಂಧೆಯ ಕತೆ ಏನು, ಆಗೊಂದು ಮಾತು, ಈಗೊಂದು ಮಾತೇ ಎಂದು ತೀವ್ರ ತರಾಟೆಗೆ ತೆಗೆದುಕೊಂಡರು.

ಯತೀಂದ್ರ ಅವರಿಗೆ (4ನೇ ಪುಟಕ್ಕೆ)

### ಯತೀಂದ್ರ ತಮ್ಮ ಕ್ಷೇತ್ರಕ್ಕೆ ಅಧಿಕಾರಿಗಳ ವರ್ಗಾವಣೆ ಮಾಡಿಸಿಕೊಂಡರೆ ತಪ್ಪಲ್ಲ

ಬೆಂಗಳೂರು, ನ. 16 - ಮಾಜಿ ಶಾಸಕ ಯತೀಂದ್ರ ಅವರು ತಂದೆಯ ಜವಾಬ್ದಾರಿ ತೆಗೆದುಕೊಂಡು, ತಮ್ಮ ಕ್ಷೇತ್ರದ ಶಾಲೆಗಳ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ. ಮಾಜಿ ಶಾಸಕರಾಗಿ ಯತೀಂದ್ರ ಅವರು ಒಂದು ವೇಳೆ ತಮ್ಮ ಕ್ಷೇತ್ರಕ್ಕೆ ಬೇಕಾದ 4-5 ಅಧಿಕಾರಿಗಳನ್ನು ವರ್ಗಾವಣೆ ಮಾಡಿಸಿಕೊಂಡರೆ ಅದರಲ್ಲಿ ತಪ್ಪೇನಿದೆ ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥಿಸಿಕೊಂಡಿದ್ದಾರೆ.

ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾ ಬಳಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮಾಜಿ ಶಾಸಕ ತಂದೆಯ ಜವಾಬ್ದಾರಿ ತೆಗೆದುಕೊಂಡು ತಮ್ಮ ಕ್ಷೇತ್ರದ ಶಾಲೆಗಳ ಅಭಿವೃದ್ಧಿ ಬಗ್ಗೆ ಮಾತನಾಡಿದ್ದಾರೆ. ನಾನು ಬೆಳಿಗ್ಗೆಯೇ ಆ ವಿಡಿಯೋ ನೋಡಿದೆ. ವರ್ಗಾವಣೆ ದಂಧೆ ಎನ್ನಲು ಅವರು ಯಾವ ಅಧಿಕಾರಿ, ಯಾವ ಹುದ್ದೆ ಎಂದು ಉಲ್ಲೇಖವನ್ನೇ ಮಾಡಿಲ್ಲವಲ್ಲ ಎಂದರು.

ಯತೀಂದ್ರ ಅವರು ಆಶ್ರಯ ಸಮಿತಿ ಅಧ್ಯಕ್ಷರು. ಒಂದಷ್ಟು ಶಾಲೆಗಳಿಗೆ ಸಿಎಸ್‌ಆರ್ ಅನುದಾನದ ಅಡಿಯಲ್ಲಿ ಮೂಲ ಸೌಕರ್ಯಗಳನ್ನು ಒದಗಿಸಲು ವಿವೇಕಾನಂದ ಅಥವಾ ಮಹದೇವಪ್ಪ (4ನೇ ಪುಟಕ್ಕೆ)

## ಹಿರಿಯರ ವಿಶ್ವಾಸಕ್ಕೆ ತೆಗೆದುಕೊಂಡು ಜನಪರ ಕೆಲಸ ಮಾಡಿ

### ನೂತನ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರಗೆ ತರಳಬಾಳು ಶ್ರೀ ಕಿವಿಮಾತು

ಸಿರಿಗೆರೆ, ನ.16- ತಂದೆಯ ಗರಡಿಯಲ್ಲಿ ಬೆಳೆದು, ರಾಜಕೀಯದಲ್ಲಿ ಅನುಭವ ಇರುವ ನೀವು ಉನ್ನತ ಮಠಕ್ಕೆ ಏರುತ್ತೀರಿ ಎಂಬ ಪೂರ್ಣ ಭರವಸೆ ಇದೆ ಎಂದು ತರಳಬಾಳು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಅವರು ಬಿಜೆಪಿ ನೂತನ ರಾಜ್ಯಾಧ್ಯಕ್ಷ ವಿಜಯೇಂದ್ರ ಅವರನ್ನುದ್ದೇಶಿಸಿ ಹೇಳಿದರು.

ಗುರುವಾರ ಬಿ.ವೈ.ವಿಜಯೇಂದ್ರ ಸಿರಿಗೆರೆಗೆ ಮಠಕ್ಕೆ ಆಗಮಿಸಿದಾಗ ಶ್ರೀಗಳು ಅವರನ್ನು ಸತ್ಕರಿಸಿದರು.

ದೇಶದಲ್ಲಿ ಇಂದು ರಾಜಕಾರಣಿಗಳು ಪರಸ್ಪರ ನಿಂದನೆಗೆ ಇಳಿಯುತ್ತಿದ್ದಾರೆ. ಇದಕ್ಕೆ ಇತಿಶ್ರೀ ಹಾಡಬೇಕು. ವೈಯಕ್ತಿಕ ಆರೋಪ, ಪ್ರತ್ಯಾರೋಪ ದೊಡ್ಡ ತಪ್ಪು. ಅವಾಚ್ಯ ಶಬ್ದಗಳನ್ನು ಬಳಸಿ ದೋಷಾರೋಪ ಮಾಡುವುದು ಸರಿಯಲ್ಲ. ಇದಕ್ಕೆ ನ್ಯಾಯಾಲಯಗಳಿವೆ. ಹೀಗೆ ಮಾಡುವುದರಿಂದ ಮನಸ್ಸು ಕಲುಷಿತವಾಗಿ ಶಾಂತಿ ಕದಡುತ್ತದೆ ಎಂದರು.



ಸಾರ್ವಜನಿಕ ಸಭೆಗಳಲ್ಲಿ ಯಾರನ್ನೂ ನಿಂದಿಸದೆ, ಜವಾಬ್ದಾರಿ ಸ್ಥಾನದಲ್ಲಿದ್ದಾಗ ಸಾಮಾಜಿಕವಾಗಿ ಜನರಿಗಾಗಿ, ರೈತರ ಕಲ್ಯಾಣಕ್ಕಾಗಿ ಉತ್ತಮ ಕೆಲಸ ಕಾರ್ಯಗಳನ್ನು ಮಾಡಬೇಕು. ಪಕ್ಷದ, ರಾಜ್ಯದ ಹಿತದೃಷ್ಟಿಯಿಂದ ಎಲ್ಲ ಹಿರಿಯರನ್ನು ವಿಶ್ವಾಸಕ್ಕೆ ತೆಗೆದುಕೊಂಡು ಉತ್ತಮ ಜನಪರ ಕೆಲಸಗಳನ್ನು ಮಾಡಿ ಎಂದರು.

ಯಡಿಯೂರಪ್ಪನವರು ಹಾಗೂ ನಮ್ಮ ಮಠದ ಸಂಬಂಧ ಶಿಕಾರಿಪುರದಲ್ಲಿ ನಡೆದ ತರಳಬಾಳು ಹುಣ್ಣಿಮೆಯಿಂದ ಗಟ್ಟಿಗೊಂಡು ಬಂದಿದೆ. ಅವರು ನಾವು ಸೂಚಿಸಿದ ಸಮಾಜದ ಯೋಜನೆಗಳಿಗೆ ಹಣ ಮಂಜೂರು ಮಾಡಿದ್ದು ಉತ್ತಮ ಕೆಲಸ ಎಂದು ಶ್ರೀಗಳು ಹೇಳಿದರು.

ಸಿರಿಗೆರೆಯ ಬೃಹನ್ಮಠದ ಐಕ್ಯಮಂಟಪದಲ್ಲಿ ಲಿಂ.ಶಿವಕುಮಾರ ಶ್ರೀಗಳು ಹಾಗೂ ಗುರುಶಾಂತೇಶ್ವರ ಸ್ವಾಮೀಜಿಯವರ ಕರ್ತೃ ಗದ್ದಿಗೆಗೆ ಪುಷ್ಪ ನಮನ ಸಲ್ಲಿಸಿ ಮಾತನಾಡಿದ ಬಿ.ವೈ.ವಿಜಯೇಂದ್ರ, ರೈತರ, (4ನೇ ಪುಟಕ್ಕೆ)

## ರಾಣೇಬೆನ್ನೂರು - ಶಿಕಾರಿಪುರ ರೈಲು ಮಾರ್ಗದ ಕೆಲಸ ಆರಂಭ



ರಾಣೇಬೆನ್ನೂರು, ನ.16- ಸ್ವಾತಂತ್ರ್ಯ ಬಂದ ಮೇಲೆ ಪ್ರಥಮ ಬಾರಿಗೆ ರಾಣೇಬೆನ್ನೂರಿನಿಂದ ಶಿಕಾರಿಪುರಕ್ಕೆ 2 ಸಾವಿರ ಕೋಟಿ ವೆಚ್ಚದಲ್ಲಿ ರೈಲು ಮಾರ್ಗ ನಿರ್ಮಿಸಲಾಗುತ್ತಿದ್ದು, ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿ.ಎಸ್. ಯಡಿಯೂರಪ್ಪ ಅವರು ತಲಾ ಒಂದೊಂದು ಸಾವಿರ ಕೋಟಿ ಹಣ ನೀಡಿದ್ದು, ಕಾರ್ಯಾರಂಭ ಮಾಡಲಾಗಿದೆ ಎಂದು ಸಂಸದ ಬಿ.ವೈ.ರಾಘವೇಂದ್ರ ಹೇಳಿದರು.

ಇಲ್ಲಿನ ಗಂಗಾಜಲ ತಾಂಡಾ ಬಳಿ ನೂತನವಾಗಿ ನಿರ್ಮಾಣಗೊಂಡ ಶ್ರೀ ಶಿವಾನಂದ ತಪೋವನ ಉದ್ಘಾಟನೆ ಮಾಡಿ ಅವರು ಮಾತನಾಡಿದರು.

170 ಕೋಟಿ ರೂ. ವೆಚ್ಚದಲ್ಲಿ ರಾಣೇಬೆನ್ನೂರಿನಿಂದ ಶಿಕಾರಿಪುರ, ಆನಂದಪುರ ಮಾರ್ಗವಾಗಿ ಮಲೆನಾಡು ಸೇರುವ ರಸ್ತೆಯನ್ನು ರಾಷ್ಟ್ರೀಯ ಹೆದ್ದಾರಿಯಾಗಿ ಮಾರ್ಪಡಿಸುವ ಯೋಜನೆ ಕುರಿತು ಸಂಬಂಧಿಸಿದ ಅಧಿಕಾರಿಗಳು ಈಗಾಗಲೇ ಕಾರ್ಯೋನ್ಮುಖರಾಗಿದ್ದು, ಶೀಘ್ರವಾಗಿ ಕಾರ್ಯಾರಂಭ ಮಾಡಲಾಗುವುದು. ಈ ಎರಡೂ ಕಾಮಗಾರಿಗಳಿಂದ ಔದ್ಯೋಗಿಕ ಬೆಳವಣಿಗೆಯೊಂದಿಗೆ ಇಲ್ಲಿನ ವ್ಯಾಪಾರ ವಹಿವಾಟು, ಉದ್ಯೋಗ ಹೆಚ್ಚಳವಾಗಲಿದೆ ಎಂದು ರಾಘವೇಂದ್ರ ವಿವರಿಸಿದರು.

ಯಡಿಯೂರಪ್ಪ ಮುಖ್ಯಮಂತ್ರಿ ಇದ್ದಾಗ ಪ್ರತಿ ಕುಟುಂಬದ ಮೊದಲ ಹೆಣ್ಣು ಮಗುವಿಗೆ ಒಂದು ಲಕ್ಷ ರೂ. ಕೊಡುವ ಭಾಗ್ಯಲಕ್ಷ್ಮಿ ಯೋಜನೆ ಜಾರಿಗೆ ತಂದಿದ್ದರು. ಆ ಯೋಜನೆ ಅವಧಿ ಪೂರ್ಣಗೊಂಡಿದ್ದು, ಬರುವ ಜನವರಿಯಿಂದ ಒಂದು ಕೋಟಿ ಮಹಿಳೆಯರಿಗೆ ಬಡ್ಡಿ (4ನೇ ಪುಟಕ್ಕೆ)

## ಅಡಮಾನ ರಹಿತ ಸಾಲಗಳಿಗೆ ಕಡಿವಾಣ

ಮುಂಬೈ, ನ. 16 – ಅಡಮಾನ ರಹಿತ ವೈಯಕ್ತಿಕ ಸಾಲಗಳಿಗೆ ಕಡಿವಾಣ ಹಾಕುವಂತೆ ಬ್ಯಾಂಕುಗಳು ಹಾಗೂ (4ನೇ ಪುಟಕ್ಕೆ)

|| ಶ್ರೀ ಮಲ್ಲಿಕಾರ್ಜುನ ಪ್ರಸನ್ನ ||

**ಕೈಲಾಸ ಸಮಾರಾಧನೆ ಆಹ್ವಾನ ಪತ್ರಿಕೆ**



ಜನನ : 20-8-1960 ಮರಣ : 14-11-2023

ದಾವಣಗೆರೆ ಸಿಟಿ ಆಂಜನೇಯ ಬಡಾವಣೆ 14ನೇ ಕ್ರಾಸ್ # 3038/14 ವಾಸಿಗಳಾದ
ಶ್ರೀಮತಿ ಪ್ರೇಮಾ ಆರ್. ಮಾಕನೂರು ಮತ್ತು ಮಕ್ಕಳು
ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ : 14-11-2023ನೇ ಮಂಗಳವಾರ ಬೆಳಗಿನ ಜಾವ 5.45ಕ್ಕೆ ನನ್ನ ಪೂಜ್ಯ ಪತಿಯವರಾದ
**ಶ್ರೀ ರಾಜಶೇಖರ್ ಬಿ. ಮಾಕನೂರು**
ಇವರು ದೈವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
'ಕೈಲಾಸ ಸಮಾರಾಧನೆ'ಯನ್ನು
ದಿನಾಂಕ : 18-11-2023ನೇ ಶನಿವಾರ ಬೆಳಿಗ್ಗೆ 10.30 ಗಂಟೆಗೆ
ದಾವಣಗೆರೆ ಆಂಜನೇಯ ಬಡಾವಣೆ 14ನೇ ಕ್ರಾಸ್‌ನಲ್ಲಿರುವ ಮೃತರ ಸ್ವಗೃಹದಲ್ಲಿ
ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ, ಮೃತರ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

ಇಂತಿ ದುಃಖತಪ್ತರು : ಮೃತರ ಧರ್ಮಪತ್ನಿ ಶ್ರೀಮತಿ ಪ್ರೇಮಾ ಆರ್. ಮಾಕನೂರು ಮತ್ತು ಮಕ್ಕಳು, ಸಹೋದರರು, ಮಾಕನೂರು ವಂಶಸ್ಥರು ಹಾಗೂ ಬಂಧು-ಮಿತ್ರರು. ಮೊ. : 9886370445, 9482159565, 8867292191.

ವಿ.ಸೂ.: ಆಹ್ವಾನ ಪತ್ರಿಕೆ ತಲುಪದೇ ಇರುವವರು ಇದನ್ನೇ ಆಹ್ವಾನವೆಂದು ಭಾವಿಸಿ ಆಗಮಿಸಬೇಕಾಗಿ ವಿನಂತಿ.

**ಪುಣ್ಯಸ್ಮರಣೆ**

**ಲಿಂ|| ಎಂ.ಜಿ. ಮಹೇಶ್ವರಪ್ಪ**

ನೀವು ನಮ್ಮನ್ನಗಲಿ ದಿನಾಂಕ 17.11.2023ಕ್ಕೆ ಏಳು ವರ್ಷಗಳಾದವು. ಪ್ರತಿ ಕ್ಷಣವೂ ನಿಮ್ಮ ನೆನಪಿನಲ್ಲಿದ್ದು, ನೀವು ಹಾಕಿಕೊಟ್ಟ ಮಾರ್ಗದಲ್ಲಿ ಮುನ್ನಡೆಯುತ್ತಿರುವ

ಸಹೋದರರು : ಎಂ.ಜಿ. ರಾಜಣ್ಣ, ಎಂ.ಜಿ. ಬಸವರಾಜ್, ಎಂ.ಜಿ. ಬಾಬಣ್ಣ
ಧರ್ಮಪತ್ನಿ : ಶ್ರೀಮತಿ ಎಂ.ಎಂ. ಲಲಿತಾ ಮತ್ತು ಮಕ್ಕಳು ಹಾಗೂ ಕುಟುಂಬ ವರ್ಗದವರು, ಬಂಧು-ಮಿತ್ರರು.

ಉಮಾ ಟ್ರೇಡರ್ಸ್, ದಾವಣಗೆರೆ, ಚಿತ್ರದುರ್ಗ.
ಉಮಾ ಟ್ರೇಡಿಂಗ್ ಕಂಪನಿ,
ಉಮಾ ಮಹೇಶ್ವರ ಇಂಡಸ್ಟ್ರೀಸ್
ಹರಿಹರ ರಸ್ತೆ, ದಾವಣಗೆರೆ.





# ಅಬಲ ವರ್ಗದ ಸಬಲೀಕರಣಕ್ಕೆ ಯೋಜನೆ ರೂಪಿಸಬೇಕು

## ಹರಪನಹಳ್ಳಿ ಸಹಕಾರ ಸಪ್ತಾಹ ಕಾರ್ಯಕ್ರಮದಲ್ಲಿ ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಸ್ವಾಮೀಜಿ ಆಶಯ

ಹರಪನಹಳ್ಳಿ, ನ.16- ಯುವ ಜನರು, ಮಹಿಳೆಯರು ಮತ್ತು ಸಮಾಜದ ಅಬಲ ವರ್ಗದವರನ್ನು ಸಬಲೀಕರಣ ಗೊಳಿಸಲು ಅನುಕೂಲಕರವಾದ ನೀತಿಗಳು ಮತ್ತು ಪರಿಣಾಮ ಕಾರಿ ಕಾರ್ಯ ಯೋಜನೆಗಳನ್ನು ರೂಪಿಸಬೇಕಿದೆ ಎಂದು ತೆಗ್ಗಿನ ಮಠದ ಶ್ರೀ ವರಸದ್ಯೋಜಾತ ಶಿವಚಾರ್ಯ ಸ್ವಾಮೀಜಿ ಆಶಿಸಿದರು.



ಪಟ್ಟಣದ ರೇಣುಕಾಚಾರ್ಯ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ಸಹಕಾರ ಮಹಾ ಮಂಡಳಿ, ರಾಜ್ಯ ಸಹಕಾರ ಮಾರಾಟ ಮಹಾ ಮಂಡಳಿ, ಸಹಕಾರ ಇಲಾಖೆ ಬಳ್ಳಾರಿ, ಬಳ್ಳಾರಿ ಜಿಲ್ಲಾ ಸಹಕಾರ ಯೂನಿಯನ್, ರಾಯಚೂರು, ಬಳ್ಳಾರಿ, ಕೊಪ್ಪಳ, ಸಹಕಾರ ಹಾಲು ಒಕ್ಕೂಟ ಬಳ್ಳಾರಿ, ಇಫ್ಕೋ ಸಂಸ್ಥೆ ಹಾಗೂ ಕ್ರಿಬ್ಕೋ ಲಿ.,ಬಳ್ಳಾರಿ ಮತ್ತು ಹರಪನಹಳ್ಳಿ ತಾಲ್ಲೂಕಿನ ಸಹಕಾರ ಸಂಘಗಳ ಸಂಯುಕ್ತ ಆಶ್ರಯದಲ್ಲಿ ಇಂದು ಹಮ್ಮಿಕೊಳ್ಳಲಾಗಿದ್ದ 70ನೇ ಅಖಿಲ ಭಾರತ ಸಹಕಾರ ಸಪ್ತಾಹ ವನ್ನುಉದ್ಘಾಟಿಸಿ ಶ್ರೀಗಳು ಮಾತನಾಡಿದರು.

ಬಡವರ, ವಿದ್ಯಾರ್ಥಿಗಳ ಸಂಜೀವಿನಿಯಾಗಿ ಸಹಕಾರ ಸಂಘಗಳು ಕೆಲಸ ನಿರ್ವಹಿಸಬೇಕು. ಆದರೆ, ಸಾಲವನ್ನು ತೆಗೆದುಕೊಳ್ಳುವಾಗ ಇರುವಂತಹ ಉತ್ಸಾಹ ಸಾಲ ತೀರಿಸುವಾಗ ಇರುವುದಿಲ್ಲ. ಬಹು ಮುಖ್ಯವಾಗಿ ಯಶಸ್ವಿನಿ ಯೋಜನೆಯನ್ನು ಎಲ್ಲಾ ವರ್ಗದ ಜನರು ಉಪಯೋಗಿಸಿಕೊಳ್ಳ ಬೇಕು.

ಭಾರತ ಹಾಲು ಉತ್ಪಾದನೆಯಲ್ಲಿ ಮೊದಲನೇ ಸ್ಥಾನದಲ್ಲಿದೆ. ಸಹಕಾರ ಸಂಘಗಳು ಅಭಿವೃದ್ಧಿ ಮಾನದಂಡವಲ್ಲ. ರಾಜ್ಯ ಬರಗಾಲದಿಂದ ತತ್ತರಿಸಿದ್ದು, ಕೃಷಿಕರ ಬದುಕು ದುಸ್ತರವಾಗಿದೆ. ಈ ನಿಟ್ಟಿನಲ್ಲಿ ಸಹಕಾರ ಸಂಘಗಳು ಬಡವರ, ರೈತರ ಪಾಲಿಗೆ ವರದಾನವಾಗಬೇಕು. ಡಿಜಿಟಲೀಕರಣದ ವ್ಯವಸ್ಥೆಯಲ್ಲಿ ಸಹಕಾರ ಸಂಘಗಳು ಉತ್ತಮ ದಾರಿಯಲ್ಲಿ ಸಾಗುತ್ತಿವೆ ಎಂದರು.

ಬಳ್ಳಾರಿ ಜಿಲ್ಲಾ ಕೇಂದ್ರ ಸಹಕಾರ ಬ್ಯಾಂಕ್ ನಿರ್ದೇಶಕ ವೈ.ಡಿ ಅಣ್ಣಪ್ಪ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಯೂನಿಯನ್ ಬ್ಯಾಂಕ್ ನಿರ್ದೇಶಕ ಶ್ರೀಧರ ಗೋಸಾಲೆ ಮಾತನಾಡಿದರು.

ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ್ ಮಾತನಾಡಿ, ಸಹಕಾರಿ ಚಳುವಳಿ 19ನೇ ಶತಮಾನದಲ್ಲಿ ಪ್ರಾರಂಭವಾಗಿ ಜನತೆಯ ಆರ್ಥಿಕ, ಸಾಮಾಜಿಕ ಬೆಳವಣಿಗೆಗೆ ಶ್ರಮಿಸುತ್ತಾ ಬಂದಿದೆ. ಗಾತ್ರದಲ್ಲಿ, ವ್ಯಾಪ್ತಿಯಲ್ಲಿ ಸಾಧನೆಯಲ್ಲಿ ವಿಶ್ವದಲ್ಲಿಯೇ ಬೃಹತ್ತಾದುದು, ಮಹತ್ತರವಾದುದೂ ಆಗಿದೆ. ಜನಸಾಮಾನ್ಯರ ಕಾಮಧೇನು ಕಲ್ಪವೃಕ್ಷ ಎನಿಸಿಕೊಂಡಿದ್ದು, ಇಂದು ಹೆಮ್ಮರವಾಗಿ ಬೆಳೆದಿದೆ ಎಂದರು.

ಬಳ್ಳಾರಿ ಜಿಲ್ಲಾ ಸಹಕಾರಿ ಯೂನಿಯನ್ ಉಪಾಧ್ಯಕ್ಷ ಬಿ.ಕೆ ಕೆರೆಕೋಡಪ್ಪ, ಬಳ್ಳಾರಿ ಜಿಲ್ಲಾ ಸಹಕಾರಿ ಯೂನಿಯನ್ ನಿರ್ದೇಶಕ ಗಿಡ್ಡಳ್ಳಿ ನಾಗರಾಜ, ಯೂನಿಯನ್‌ನ ಹೆಚ್. ತಿಮ್ಮಾನಾಯ್ಕ, ಟಿಎಪಿಸಿಎಂಎಸ್ ಅಧ್ಯಕ್ಷರಾದ ನೇತ್ರಾವತಿ, ಪಿ.ಎಲ್.ಡಿ ಬ್ಯಾಂಕ್ ಅಧ್ಯಕ್ಷರಾದ ಎಚ್.ವಿಶಾಲಾಕ್ಷಮ್ಮ, ಮುಖಂಡರಾದ ಪುಷ್ಪಾ ದಿವಾಕರ, ಚಂದ್ರಶೇಖರ ಪೂಜಾರ್, ಮಂಜುಳಾ ಗುರುಮೂರ್ತಿ, ಅರಸಿಕೇರಿ ಬಿಡಿಸಿಸಿ ಬ್ಯಾಂಕ್ ಕ್ಷೇತ್ರ ಅಧಿಕಾರಿ ಹೆಚ್.ಅಂಜಿನಪ್ಪ. ಟಿಎಪಿಸಿಎಂಎಸ್ ಕಾರ್ಯನಿರ್ವಹಣಾಧಿಕಾರಿ ಹೆಚ್.ತಿರುಪತಿ, ನಿಚ್ಚವನಹಳ್ಳಿ ವೈ.ಗೋಣಿಬಸಪ್ಪ, ಹರಪನಹಳ್ಳಿಯ ಡಿ. ಬಸವರಾಜ, ಬಾಣದ ಯಂಕಪ್ಪ ಸೇರಿದಂತೆ ಇತರರು ಇದ್ದರು.

# ಪೊಲೀಸ್ ಇಲಾಖೆಯಿಂದ 'ಕನ್ನಡಾಂಬೆಗೆ ನುಡಿ ನಮನ'



ದಾವಣಗೆರೆ, ನ.16- ಸುವರ್ಣ ಕರ್ನಾಟಕ 50ರ ಸಂಭ್ರಮ ಹಾಗೂ ಕರ್ನಾಟಕ ರಾಜ್ಯೋತ್ಸವದ ಅಂಗವಾಗಿ ಜಿಲ್ಲಾ ಪೊಲೀಸ್ ಇಲಾಖೆ ವತಿಯಿಂದ ಕಛೇರಿ ಆವರಣದಲ್ಲಿಂದು 'ಕನ್ನಡಾಂಬೆಗೆ ನುಡಿ-ನಮನ' ಗೀತ ಗಾಯನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಐದು ಕನ್ನಡ ಹಾಡುಗಳನ್ನು ಹಾಡಲಾಯಿತು. ಕಾರ್ಯಕ್ರಮದಲ್ಲಿ ಹೆಚ್ಚುವರಿ ಪೊಲೀಸ್ ಅಧೀಕ್ಷಕ ವಿಜಯ ಕುಮಾರ್ ಎಂ.ಸಂತೋಷ್, ಡಿವೈಎಸ್ಪಿಗಳಾದ ಬಸವರಾಜ ಬಿ.ಎಸ್, ಮಲ್ಲೇಶ್ ದೊಡ್ಮನಿ, ಕೃಷ್ಣಮೂರ್ತಿ, ಬಿ. ನಾಗಪ್ಪ ಹಾಗೂ ರುದ್ರೇಶ್ ಸೇರಿದಂತೆ ನಗರದ ಪೊಲೀಸ್ ಅಧಿಕಾರಿ ಮತ್ತು ಸಿಬ್ಬಂದಿಗಳು, ಪೂರ್ವ ವಲಯ ಕಛೇರಿ, ಜಿಲ್ಲಾ ಪೊಲೀಸ್ ಕಛೇರಿ ಅಧಿಕಾರಿ ಮತ್ತು ಸಿಬ್ಬಂದಿಗಳು ಭಾಗವಹಿಸಿದ್ದರು.

# ನಗರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ಪಿ.ಬಿ. ರಸ್ತೆ, ಸಂಗೊಳ್ಳಿ ರಾಯಣ್ಣ ಸರ್ಕಲ್, ಬಿ.ಎಸ್.ಎನ್.ಎಲ್ ಕಛೇರಿ, ಶಂಕರ್ ವಿಹಾರ್ ಬಡಾವಣೆ, ಶಾಂತಿನಗರ ಮತ್ತು ವಿನಾಯಕ ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ವಿದ್ಯುತ್ ಸರಬರಾಜು ಇರುವುದಿಲ್ಲ.

# ಹೊಳೆಸಿರಿಗೆರೆ ಶಾಲೆಯಲ್ಲಿ ಆರೋಗ್ಯ ಶಿಬಿರ

## ಟಿ.ಹೆಚ್.ಓ. ಡಾ. ಪ್ರಶಾಂತ್, ವೈದ್ಯಾಧಿಕಾರಿ ಡಾ. ಚೇತನ್ ಉದ್ಘಾಟನೆ



ಮಲೇಬೆನ್ನೂರು, ನ. 16 - ಹೊಳೆಸಿರಿಗೆರೆ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ಶ್ರೀ ಮಾಗೋಡ್ ಹಾಲಪ್ಪ ಪ್ರೌಢ ಶಾಲೆಯಲ್ಲಿ ಗುರುವಾರ ಹಮ್ಮಿಕೊಂಡಿದ್ದ ತೀವ್ರ ತರವಾದ ಅತಿಸಾರ ಭೇದಿ ನಿಯಂತ್ರಣ ಕಾರ್ಯಕ್ರಮವನ್ನು ಟಿ.ಹೆಚ್.ಓ. ಡಾ. ಪ್ರಶಾಂತ್ ಮತ್ತು ವೈದ್ಯಾಧಿಕಾರಿ ಡಾ. ಚೇತನ್ ಭಿತ್ತಿಪತ್ರ ಅನಾವರಣದ ಮೂಲಕ ಉದ್ಘಾಟಿಸಿದರು.

ನಂತರ ಮಾತನಾಡಿದ ಡಾ. ಪ್ರಶಾಂತ್, ಕುಡಿಯುವ ನೀರಿನ ಮೂಲಗಳ ಸುತ್ತ-ಮುತ್ತ ಮತ್ತು ಓವರ್ ಹೆಡ್ ಟ್ಯಾಂಕ್‌ಗಳನ್ನು ಸ್ವಚ್ಛಗೊಳಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಅತಿಸಾರ ಭೇದಿಯ ನಿಯಂತ್ರಣಕ್ಕೆ ಮುಂದಾಗುವಂತೆ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಇತರೆ ಸಮನ್ವಯ ಇಲಾಖೆ ಗಳ ಅಧಿಕಾರಿಗಳಿಗೆ ಸೂಚನೆ ನೀಡಿದರು. ಇಂದಿನಿಂದ ಇದೇ ದಿನಾಂಕ 28 ರವರೆಗೆ ಈ ಕಾರ್ಯಕ್ರಮವನ್ನು ಆಶಾ ಕಾರ್ಯಕರ್ತೆಯರು ಮತ್ತು ಆರೋಗ್ಯ ಸಿಬ್ಬಂದಿ ಗಳು ಮನೆ ಮನೆಗೆ ಭೇಟಿ ಮಾಡಿ ಅತಿಸಾರದಿಂದ ಉಂಟಾಗುವ ಸಮಸ್ಯೆಗಳ ಬಗ್ಗೆ ಜನರಿಗೆ ತಿಳಿಸಿ ಎಂದರು.

ಡಾ. ಚೇತನ್ ಮಾತನಾಡಿ, 5 ವರ್ಷದೊಳಗಿನ ಮಕ್ಕಳಿಗೆ ನಿರ್ಜಲೀಕರಣವನ್ನು ತಪ್ಪಿಸಲು ಓಆರ್‌ಎಸ್ ಅನ್ನು ಭೇದಿ ನಿಲ್ಲುವವರೆಗೂ ನೀಡಬೇಕೆಂದರು. ಜಿಂಕ್ ಮಾತ್ರೆಯನ್ನು ದಿನಕ್ಕೆ ಒಂದರಂತೆ 14 ದಿನಗಳವರೆಗೆ ಮಗುವಿನ ತೂಕ ಮತ್ತು ವಯಸ್ಸಿಗೆ ಅನುಗುಣವಾಗಿ ನೀಡಬೇಕು. ಇದರಿಂದ ರೋಗ ನಿರೋಧಕ ಶಕ್ತಿ ಹೆಚ್ಚುತ್ತದೆ ಮತ್ತು 3 ತಿಂಗಳ ವರೆಗೆ ಭೇದಿಯಾಗದಂತೆ ತಡೆಯುತ್ತದೆ. ಈ ಚಿಕಿತ್ಸೆಯು ಪರಿಣಾಮಕಾರಿಯಾಗಿ ರುತ್ತದೆ ಎಂದು ತಿಳಿಸಿದರು.

ತಾ. ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ. ಉಮ್ಮಣ್ಣ ಮಾತನಾಡಿ, ಮಕ್ಕಳಿಗೆ ಓಆರ್‌ಎಸ್ ಹೇಗೆ ಉಪಯೋಗಿಸಬೇಕು ಎನ್ನುವುದರ ಬಗ್ಗೆ ಮಾಹಿತಿ ನೀಡಿದರು. ಹಿರಿಯ ಆರೋಗ್ಯ ಸುರಕ್ಷಣಾಧಿಕಾರಿ ಸುಧಾ ಅವರು ಕೈ ತೊಳೆಯುವ 6 ವಿಧಾನಗಳ ಬಗ್ಗೆ ಮಾಹಿತಿ ನೀಡಿದರು. ಆಶಾ ಕಾರ್ಯಕರ್ತೆಯರಾದ ಮಾಲಾಶ್ರೀ, ಕರಿಬಸಮ್ಮ, ಪುಷ್ಪವತಿ, ಶಾಲಾ ಶಿಕ್ಷಕರಾದ ಶಂಕರ್, ತಿಪ್ಪೇಶ್, ಪ್ರಕಾಶ್, ರೂಪ, ಜ್ಯೋತಿ ಮತ್ತು ಇತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

# ಕೊಠಡಿ ನಿರ್ಮಾಣ ಕಾರ್ಯಕ್ಕೆ 26,000 ರೂ. ದೇಣಿಗೆ

ದಾವಣಗೆರೆ, ನ. 16 - ನಗರದ ಯೂರೋ ಶಾಲೆಯಲ್ಲಿ ಮಕ್ಕಳ ದಿನಾಚರಣೆ ಅಂಗವಾಗಿ ಬಾಡ ರಸ್ತೆಯಲ್ಲಿರುವ ವೀರೇಶ್ವರ ಪುಣ್ಯಾಶ್ರಮದ ಮಕ್ಕಳ ವಾಸ್ತವ್ಯಕ್ಕಾಗಿ ಕೊಠಡಿ ನಿರ್ಮಾಣದ ಕಾರ್ಯಕ್ಕೆ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕ ವೃಂದ, ಪ್ರಾಂಶುಪಾಲರು ಹಾಗೂ ಆಡಳಿತ ಮಂಡಳಿಯವರು (26,000 ರೂ.) ಧನ ಸಹಾಯ ಮಾಡಿದ್ದಾರೆ. ಪುಣ್ಯಾಶ್ರಮದ ಮಕ್ಕಳನ್ನು ಶಾಲೆಗೆ ಆಹ್ವಾನಿಸಿ ಎಲ್ಲರ ಸಮ್ಮುಖದಲ್ಲಿ 26,000 ರೂ.ಗಳನ್ನು ದೇಣಿಗೆ ನೀಡಲಿದ್ದಾರೆ.

# ನಕಲಿ ಸುದ್ದಿ ವಿರುದ್ಧ ಪಿ.ಸಿ.ಐ. ಕ್ರಮಕ್ಕೆ ಜಗದೀಪ್ ಧನಕರ್ ಆಗ್ರಹ

ನವದೆಹಲಿ, ನ. 16 – ಉದ್ದೇಶಪೂರ್ವಕವಾಗಿ ನಕಲಿ ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳುವಂತೆ ಪ್ರೆಸ್ ಕೌನ್ಸಿಲ್ ಆಫ್ ಇಂಡಿಯಾ (ಪಿ.ಸಿ.ಐ.)ಗೆ ಉಪ ರಾಷ್ಟ್ರಪತಿ ಜಗದೀಪ್ ಧನಕರ್ ಆಗ್ರಹಿಸಿದ್ದಾರೆ.

ರಾಷ್ಟ್ರೀಯ ಮಾಧ್ಯಮ ದಿನಾಚ ರಣೆ ಸಂದರ್ಭದಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ನಕಲಿ ಹಾಗೂ ತಿರುಚಿದ ಸುದ್ದಿಗಳ ಬಗ್ಗೆ ಕಳವಳ ವ್ಯಕ್ತಪಡಿಸಿದ್ದಾರೆ.

ನಕಲಿ ಸುದ್ದಿಗಳನ್ನು ಉದ್ದೇಶಪೂರ್ವಕವಾಗಿ ಹರಡುವವರ ವಿರುದ್ಧ ಪಿ.ಸಿ.ಐ. ತ್ವರಿತ ಕ್ರಮ ತೆಗೆದುಕೊಳ್ಳಬೇಕು. ಕೇವಲ ಎಚ್ಚರಿಕೆ ನೀಡಿದರಷ್ಟೇ ಸಾಲದು, ಕ್ರಮಕ್ಕೂ ಮುಂದಾಗಬೇಕು ಎಂದವರು ಹೇಳಿದ್ದಾರೆ.

# ಮಲೇಬೆನ್ನೂರು : ಹೈಟೆಕ್ ಶೌಚಾಲಯ ನಿರ್ಮಾಣ ಸ್ಥಳ ಪರಿಶೀಲನೆ



ಮಲೇಬೆನ್ನೂರು, ನ. 16- ಪಟ್ಟಣದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ವಿದ್ಯಾರ್ಥಿಗಳಿಗಾಗಿ ಹೈಟೆಕ್ ಶೌಚಾಲಯ ನಿರ್ಮಾಣಕ್ಕೆ ಸ್ಥಳ ನಿಗದಿ ಮಾಡುವ ವಿಚಾರದಲ್ಲಿ ಈ ಹಿಂದೆ ಉಂಟಾಗಿದ್ದ ಗೊಂದಲದ ಹಿನ್ನೆಲೆಯಲ್ಲಿ ಗುರುವಾರ ಶಾಸಕ ಬಿ.ಪಿ. ಹರೀಶ್ ಎಸ್‌ಬಿಸಿ ಸಮಿತಿಯವರೊಂದಿಗೆ ಚರ್ಚಿಸಿ, ಸ್ಥಳ ಪರಿಶೀಲಿಸಿದರು. ಶೀಘ್ರವೇ ಕಾಮಗಾರಿ ಆರಂಭಿಸುವುದಾಗಿ ಈ ವೇಳೆ ಶಾಸಕರು ತಿಳಿಸಿದರು.ಕಾಲೇಜ್ ಎಸ್‌ಬಿಸಿ ಕಮಿಟಿ ಉಪಾಧ್ಯಕ್ಷ ಆನಂದ ಚಾರ್, ಪುರಸಭೆ ಸದಸ್ಯರಾದ ಗೌಡ್ರ ಮಂಜಣ್ಣ, ಬೆಣ್ಣೆಹಳ್ಳಿ ಸಿದ್ದೇಶ್, ಪಿ.ಆರ್. ರಾಜು, ಎ.ಕೆ. ಲೋಕೇಶ್, ಪ್ರೌಢ ಶಾಲೆ ವಿಭಾಗದ ಎಸ್‌ಡಿಎಂಸಿ ಅಧ್ಯಕ್ಷ ಓ.ಜಿ. ಮಂಜುನಾಥ್ ಹಾಗೂ ಶಿಕ್ಷಕರು ಈ ವೇಳೆ ಹಾಜರಿದ್ದರು.

# ಚಿತ್ರಕಲೆ ಸೃಜನಶೀಲತೆ, ಏಕಾಗ್ರತೆಗೆ ಪೂರಕ

## ಹರಿಹರ: ಚಿತ್ರ ಬಿಡಿಸುವ ಸ್ಪರ್ಧೆಗೆ ಶಿಕ್ಷಣಾಧಿಕಾರಿ ಹನುಮಂತಪ್ಪ ಚಾಲನೆ



ಹರಿಹರ, ನ.16- ಮಕ್ಕಳು ಚಿತ್ರಕಲೆಯಲ್ಲಿ ತೊಡಗುವುದರಿಂದ ಅವರಲ್ಲಿ ಸೃಜನಶೀಲತೆ ಹೆಚ್ಚಾಗಿ ಏಕಾಗ್ರತೆ ಉಂಟಾಗುವುದು ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಎಂ.ಹನುಮಂತಪ್ಪ ತಿಳಿಸಿದರು.

ನಗರದ ಡಾ.ಬಿ.ಆರ್ ಅಂಬೇಡ್ಕರ್ ಉದ್ಯಾನವನದಲ್ಲಿ ಹರಿಹರದ ಚಿಂತನ ಪ್ರತಿಷ್ಠಾನ, ಕಸಾಪ ತಾಲ್ಲೂಕು ಘಟಕ ಮತ್ತು ಕ.ರಾ.ಮ.ಸಾ ಪರಿಷತ್ತು ಜಿಲ್ಲಾ ಘಟಕ ಆಯೋಜಿಸಿದ್ದ 'ಚಿಣ್ಣರ ಚಿತ್ತಾರ' ಸ್ಥಳದಲ್ಲಿಯೇ ಚಿತ್ರ ಬಿಡಿಸುವ ಸ್ಪರ್ಧೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಚಿತ್ರಕಲೆ ಎಂದರೆ ಮಕ್ಕಳಿಗೆ ಬಹು ಪ್ರೀತಿ. ತಮಗೆ ತಿಳಿದ ಚಿತ್ರ ಬಿಡಿಸಿ, ಬಣ್ಣ ತುಂಬಿ ಆನಂದ ಪಡುವ ಮಕ್ಕಳಲ್ಲಿ ನವ ಚೈತನ್ಯ ಉಂಟಾಗುತ್ತದೆ ಎಂದರು. ಹೆತ್ತವರು ಮಕ್ಕಳಿಗೆ ಓದುವ ಜೊತೆ ಚಿತ್ರಬಿಡಿಸುವ ಕಲೆಗೆ ಪ್ರೋತ್ಸಾಹ ನೀಡುವುದು ಅವಶ್ಯವಾಗಿದೆ ಎಂದು ತಿಳಿಸಿದರು. ಡಾ.ಜಿ.ಜೆ. ಮೆಹೆಂದಳೆ ಅವರು ರಚಿಸಿರುವ ಚಿತ್ರಗಳು ನಿಮಗೆ ಪ್ರೇರಣೆಯಾಗಲಿ, ನೀವೂ ಕೂಡಾ ಮೆಹೆಂದಳೆ ಅವರಂತೆ ಚಿತ್ರ ಬಿಡಿಸುವುದರಲ್ಲಿ ಸಾಧನೆ ಮಾಡಿ ಎಂದು ಮಕ್ಕಳಿಗೆ ಶುಭ ಹಾರೈಸಿದರು. ಮೂರೂ ಸಂಸ್ಥೆಗಳು ಮಕ್ಕಳಿಗಾಗಿ ಒಳ್ಳೆಯ ಕಾರ್ಯ ಮಾಡಿವೆ ಎಂದು ಶ್ಲಾಘನೆ ವ್ಯಕ್ತಪಡಿಸಿದರು.

ಆರೋಗ್ಯ ಮಾತೆ ಬಸಿಲಿಕದ ಪ್ರಧಾನ ಗುರುಗಳಾದ ಕೆ.ಎ. ಫಾದರ್ ಜಾರ್ಜ್ ಮಾತನಾಡಿ, ಮಕ್ಕಳು ಹೆಚ್ಚಿನ ಸಂಖ್ಯೆಯಲ್ಲಿ ಚಿತ್ರಕಲೆ ಸ್ಪರ್ಧೆಯಲ್ಲಿ ಭಾಗವಹಿಸಿರುವುದು ತುಂಬಾ ಸಂತಸ ತಂದಿದೆ ಎಂದರು. ಚಿತ್ರಕಲೆ ಮಕ್ಕಳ ಪ್ರಗತಿಗೆ ಪೂರಕವಾದುದು. ಮಕ್ಕಳಿಗೆ ಪೋಷಕರು, ಶಿಕ್ಷಕರು ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದರು.

ಕಾರ್ಮಿಕ ಮುಖಂಡ ಹೆಚ್.ಕೆ ಕೊಟ್ರಪ್ಪ, ಸಮಾಜ ಸೇವಕ ಸನಾಉಲ್ಲಾ, ಕಾಂಗ್ರೆಸ್ ಯುವ ಮುಖಂಡ ಸಿ.ಎನ್. ಹುಲಿಗೇಶಿ, ದಾದಾಪೀರ್, ಕ.ಕಾ.ನಿ.ಪ.ಸಂಘದ ತಾಲ್ಲೂಕು ಘಟಕದ ಅಧ್ಯಕ್ಷರಾದ ಶ್ರೀಮತಿ ಡಿ.ಎನ್.ಶಾಂಭವಿ ಮಕ್ಕಳಿಗೆ ಶುಭ ಕೋರಿದರು.

ಈ ಸಂದರ್ಭದಲ್ಲಿ ದ್ರೋಣಾಚಾರ್ಯ ಪ್ರಶಸ್ತಿ ವಿಜೇತ ಕಲಾವಿದ ಡಾ.ಜಿ.ಜೆ ಮೆಹೆಂದಳೆ ಅವರನ್ನು ಸನ್ಮಾನಿಸಿ, ಗೌರವಿಸಲಾಯಿತು. ಕನ್ನಡಕ್ಕಾಗಿ ಹೋರಾಡಿದ ಮಹನೀಯರ ಭಾವಚಿತ್ರಗಳನ್ನು ಪ್ರದರ್ಶಿಸಲಾಗಿತ್ತು.

ಶ್ರೀಮತಿ ಮಂಜಮ್ಮ ಹೊಳೆಸಿರಿಗೆರೆ ಪ್ರಾರ್ಥಿಸಿದರು. ಚಿಂತನ ಪ್ರತಿಷ್ಠಾನದ ಅಧ್ಯಕ್ಷ ಸುಬ್ರಹ್ಮಣ್ಯ ನಾಡಿಗೇರ್ ಸ್ವಾಗತಿಸಿದರು. ಕ.ರಾ.ಮ.ಸಾ.ಪ.ನ ಜಿಲ್ಲಾಧ್ಯಕ್ಷ ಡಾ.ಡಿ.ಫ್ರಾನ್ಸಿಸ್ ಕಾರ್ಯಕ್ರಮ ನಿರೂಪಿಸಿದರು.

ಕಸಾಪ ತಾಲ್ಲೂಕು ಘಟಕದ ಅಧ್ಯಕ್ಷ ಡಿ.ಎಂ. ಮಂಜುನಾಥಯ್ಯ, ಚಿತ್ರ ಕಲಾವಿದರಾದ ಪ್ರವೀಣ್, ರಾಘವೇಂದ್ರ ನಾಯ್ಕ, ರಾಮು, ಶ್ರೀಮತಿ ನಾಗರತ್ನ, ಶ್ರೀಮತಿ ಅಂಜಲಿ, ಶ್ರೀಮತಿ ಸೌಮ್ಯ ರಾಮಕೃಷ್ಣ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

# ವರ್ಗಾವಣೆ ದಂಧೆಯಿಂದ ವರ್ಚಸ್ಸಿಗೆ ಕುಂದು : ಬಿಜೆಪಿ

ಬೆಂಗಳೂರು, ನ. 16 - ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಅವರ ಪುತ್ರ ಯತೀಂದ್ರ ಹಾದಿ-ಬೀದಿಯಲ್ಲಿ ವರ್ಗಾವಣೆ ದಂಧೆ ಮಾಡಿ ಕರ್ನಾಟಕದ ವರ್ಚಸ್ಸನ್ನು ಕಳೆಗುಂದಿಸಿದ್ದಾರೆ ಎಂದು ಬಿಜೆಪಿ ಟೀಕಿಸಿದೆ.

ಮಾಜಿ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ವರ್ಗಾವಣೆಗೆ ಸಂಬಂಧಿಸಿದಂತೆ ಡಾ.ಯತೀಂದ್ರ ಅವರ ಆಡಿಯೋ-ವಿಡಿಯೋ ಬಿಡುಗಡೆ ಆಗುತ್ತಿದ್ದಂತೆ, ಅರ್ಥಗರ್ಭಿತವಾದ ರೇಖಾ ಚಿತ್ರವನ್ನು ಜಾಲತಾಣದಲ್ಲಿ ಹಾಕಿ 'ಶ್ಯಾಡೋ ಸಿಎಂ' ಎಂದು ಶೀರ್ಷಿಕೆ ನೀಡಿದೆ.

# ಹಿರೇಮಲ್ಲನಹೊಳೆ ವ್ಯಾಪ್ತಿಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ನ. 16- ಹಿರೇಮಲ್ಲನಹೊಳೆ ವಿ.ವಿ ಕೇಂದ್ರದಲ್ಲಿ ತ್ರೈಮಾಸಿಕ ಕಾಮಗಾರಿ ಹಮ್ಮಿಕೊಂಡಿರುವುದರಿಂದ ನ.18 ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹಿರೇಮಲ್ಲನಹೊಳೆ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳು ಮತ್ತು ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ತಿಳಿಸಿದೆ.

# ಹೈಕೋರ್ಟ್ ಜಡ್ಜ್ ಆಗಿ ಗೌರಿ ನೇಮಕಕ್ಕೆ ಸಿಜೆಐ ಸಮರ್ಥನೆ

ನವದೆಹಲಿ, ನ. 16 – ವಕೀಲೆ ಲಕ್ಷ್ಮಣ ಚಂದ್ರ ವಿಕ್ಟೋರಿಯ ಗೌರಿ ಅವರನ್ನು ಮದ್ರಾಸ್ ಹೈಕೋರ್ಟ್ ನ್ಯಾಯಮೂರ್ತಿಯಾಗಿ ನೇಮಿಸಿರುವುದನ್ನು ಸಮರ್ಥಿಸಿಕೊಂಡಿರುವ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರ ಚೂಡ್, ವಕೀಲರಾಗಿ ಅವರು ಹೊಂದಿದ್ದ ನಿಲುವುಗಳು ನ್ಯಾಯ ಮೂರ್ತಿಯಾಗಲು ಅಡ್ಡಿಯಾಗಬಾರದು ಎಂದಿದ್ದಾರೆ.

ಗೌರಿ ಅವರು ಬಿಜೆಪಿ ಜೊತೆ ಗುರುತಿಸಿಕೊಂಡಿದ್ದಾರೆ, ಹೀಗಾಗಿ ಅವರನ್ನು ನ್ಯಾಯಮೂರ್ತಿಯಾಗಿ ನೇಮಿಸಬಾರದು ಎಂದು ಆಕ್ಷೇಪಿಸಲಾಗಿತ್ತು. ಹೈಕೋರ್ಟ್‌ನ ಕೆಲ ವಕೀಲರು ಈ ಬಗ್ಗೆ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿಗೂ ಪತ್ರ ಬರೆದಿದ್ದರು. ಕ್ರಿಶ್ಚಿಯನ್ನರು ಹಾಗೂ ಮುಸ್ಲಿಮರ ವಿರುದ್ಧ ಗೌರಿ ದ್ವೇಷ ಭಾಷಣ ಮಾಡಿದ್ದಾರೆ ಎಂದೂ ಆರೋಪಿಸಿದ್ದರು. ಆದರೆ, ನ್ಯಾಯಮೂರ್ತಿ ಯಾಗಿ ಗೌರಿ ಪ್ರಮಾಣ ವಚನ ಸ್ವೀಕರಿಸುವುದನ್ನು ತಡೆ ಯಲು ಸುಪ್ರೀಂ ಕೋರ್ಟ್ ನಿರಾಕರಿಸಿತ್ತು.



ಹಾರ್ವರ್ಡ್ ಲಾ ಸ್ಕೂಲ್ ಸೆಂಟರ್ ನಲ್ಲಿ ಆಯೋಜಿಸಲಾಗಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ (ಸಿ.ಜೆ.ಐ.) ಚಂದ್ರಚೂಡ್, ಆಕ್ಷೇಪಿಸಲಾದ ಭಾಷಣದ ಸ್ವರೂಪವನ್ನು ಸುಪ್ರೀಂ ಕೋರ್ಟ್ ಕೊಲೀಜಿಯಂ ಎಚ್ಚರಿಕೆಯಿಂದ ಪರಿಶೀಲಿಸಿದೆ. ಕೇಂದ್ರ ಸರ್ಕಾರ ಸೇರಿದಂತೆ ಸಂಬಂಧಿಸಿದ ಎಲ್ಲರಿಂದ ಅಭಿಪ್ರಾಯ ಪಡೆಯಲಾಗಿದೆ ಎಂದು ಹೇಳಿದರು.

ನ್ಯಾಯ ಮೂರ್ತಿಗಳ ನೇಮಕ ಅತ್ಯಂತ ಸಂಕೀರ್ಣವಾದ ಪ್ರಕ್ರಿಯೆ. ಹಲವು ಹಂತಗಳಲ್ಲಿ ಪರಿಶೀಲಿಸಲಾಗುತ್ತದೆ. ವಿಸ್ತೃತವಾದ ಚರ್ಚೆಯ ನಂತರವೇ ಕ್ರಮ ವಹಿಸಲಾಗುತ್ತದೆ. ಯಾವುದೇ ಒಂದು ಅಂಗ ಈ ಬಗ್ಗೆ ನಿರ್ಧಾರ ತೆಗೆದುಕೊಳ್ಳುವುದಿಲ್ಲ ಎಂದು ಸಿ.ಜೆ.ಐ. ತಿಳಿಸಿದ್ದಾರೆ.

ವಕೀಲರು ವಿವಿಧ ರಾಜಕೀಯ ವರ್ಗದವರನ್ನು ಪ್ರತಿನಿಧಿಸುತ್ತಾರೆ. ಈ ಹಿನ್ನೆಲೆಯಿಂದ ಬಂದವರು ಅದ್ಭುತ ನ್ಯಾಯಮೂರ್ತಿಗಳೂ ಆಗಿದ್ದಾರೆ. ನ್ಯಾಯಮೂರ್ತಿ ಕೃಷ್ಣ ಅಯ್ಯರ್ ಇದಕ್ಕೆ ಉದಾಹರಣೆ ಎಂದವರು ಹೇಳಿದರು.

ಹಲವಾರು ಅತ್ಯುತ್ತಮ ತೀರ್ಪುಗಳನ್ನು ನೀಡಿರುವ ಅಯ್ಯರ್ ಅವರು ರಾಜಕೀಯ ಪಕ್ಷವೊಂದರ ಹಿನ್ನೆಲೆಯಿಂದ ಬಂದವರು. ಹೀಗಾಗಿ ವ್ಯಕ್ತಿಗತವಾಗಿ ಕೆಲವು ನಿಲುವುಗಳನ್ನು ಹೊಂದಿರುವ ಮಾತ್ರಕ್ಕೆ ಅವರನ್ನು ಕಡೆಗಣಿಸಲಾಗದು. ನ್ಯಾಯಮೂರ್ತಿಯಾಗಿ ಅಧಿಕಾರ ವಹಿಸಿಕೊಂಡ ನಂತರ ಅವರು ನಿಷ್ಪಕ್ಷಪಾತವಾಗಿರಬೇಕು ಎಂದು ಸಿಜೆಐ ಚಂದ್ರಚೂಡ್ ಹೇಳಿದ್ದಾರೆ.

ವಕೀಲರು ತಮ್ಮ ಕಕ್ಷಿದಾರರನ್ನು ಆಯ್ಕೆ ಮಾಡಲಾಗದು. ಯಾರೇ ಕಾನೂನು ನೆರವು ಕೋರಿ ಬಂದರೂ ಸಹಕಾರ ನೀಡಬೇಕು ಎಂಬುದು ನನ್ನ ನಿಲುವು. ವೈದ್ಯರು ತಮ್ಮ ಕ್ಲಿನಿಕ್‌ಗೆ ಬರುವ ಎಲ್ಲರಿಗೂ ನೆರವು ನೀಡುವಂತೆ, ವಕೀಲರೂ ಕಾರ್ಯನಿರ್ವಹಿಸಬೇಕು ಎಂದವರು ತಿಳಿಸಿದರು.

# ತರಬೇತಿ ವೇಳೆ ಅಸ್ವಸ್ಥ : ಪೈಲಟ್ ಸಾವು

ನವದೆಹಲಿ, ನ. 16 – ದೆಹಲಿ ವಿಮಾನ ನಿಲ್ದಾಣದಲ್ಲಿ ತರಬೇತಿ ಅವಧಿಯಲ್ಲಿ ಏರ್ ಇಂಡಿಯಾದ ಪೈಲಟ್ ಅಸ್ವಸ್ಥರಾಗಿ ಸಾವನ್ನಪ್ಪಿದ ಘಟನೆ ನಡೆದಿದೆ.

30ರ ಹರೆಯದ ಹಿಮ್ನಾನಿಲ್ ಕುಮಾರ್ ಅವರು ಏರ್ ಇಂಡಿಯಾದ ಮೂರನೇ ಟರ್ಮಿನಲ್‌ನಲ್ಲಿ ತರಬೇತಿ ಪಡೆಯುತ್ತಿದ್ದರು. ಹಠಾತ್ತನೆ ಅವರು ಅಸ್ವಸ್ಥರಾದರು. ತಕ್ಷಣವೇ ಅವರನ್ನು ವಿಮಾನ ನಿಲ್ದಾಣದ ಆಸ್ಪತ್ರೆಗೆ ಕರೆದೊಯ್ಯಲಾಯಿತು. ಅಲ್ಲಿ ಅವರು ಸಾವನ್ನಪ್ಪಿದ್ದಾರೆ.

ಹಿರಿಯ ಕಮಾಂಡರ್ ಆಗಿರುವ ಕುಮಾರ್ ಅವರಿಗೆ, ದೊಡ್ಡ ಗಾತ್ರದ ವಿಮಾನಗಳ ತರಬೇತಿ ನೀಡಲಾಗುತ್ತಿತ್ತು. ಅಕ್ಟೋಬರ್ 3ರಿಂದ ಅವರು ತರಬೇತಿ ಪಡೆಯುತ್ತಿದ್ದರು. ಹೃದಯಾಘಾತದಿಂದ ಸಾವು ಸಂಭವಿಸಿದೆ ಎಂದು ಶಂಕಿಸಲಾಗುತ್ತಿದೆ.


## ಸೋಮಣ್ಣ ಕುದುರಿ ನಿಧನ



ದಾವಣಗೆರೆ ನಗರದ ಕುಂಬಾರ ಪೇಟೆಯ
ದೇವರಾಜ್ ಅರಸ್ ಬಡಾವಣೆ, 'ಬಿ' ಬ್ಲಾಕ್, 7ನೇ ಕ್ರಾಸ್ ನಿವಾಸಿ
ಸಂಕಪ್ಪ ಕುದುರಿ ಇವರ ಪುತ್ರನಾದ **ಶ್ರೀ ಸೋಮಣ್ಣ ಕುದುರಿ**
ಇವರು ದಿನಾಂಕ : 16.11.2023ರ ಗುರುವಾರ ರಾತ್ರಿ 11 ಗಂಟೆಗೆ
ನಿಧನರಾಗಿರುತ್ತಾರೆ. ಮೃತರಿಗೆ 63 ವರ್ಷ ವಯಸ್ಸಾಗಿರುತ್ತದೆ.
ಮೃತರ ಪತ್ನಿ, ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಮಕ್ಕಳು, ಮೊಮ್ಮಕ್ಕಳು
ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯ
ಕ್ರಿಯೆಯನ್ನು ದಿನಾಂಕ : 17.11.2023ರ ಶುಕ್ರವಾರ ಮಧ್ಯಾಹ್ನ 12.30 ಗಂಟೆಗೆ
ಗಾಂಧಿನಗರದ ಹಿಂದೂ ರುದ್ರಭೂಮಿಯಲ್ಲಿ ನೇರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ :**
**99016 07507, 97385 85884**


**ನೇತ್ರ ದಾನ ಶ್ರೇಷ್ಠ ದಾನ**


## ಹುಣಸೇಕಟ್ಟೆ ಗ್ರಾಮದ ಚೇತನ್ ಎಂ.ಬಿ. ನಿಧನ



ದಾವಣಗೆರೆ ತಾಲ್ಲೂಕು, ಹುಣಸೇಕಟ್ಟೆ ಗ್ರಾಮದ ವಾಸಿ ದಿ. ಮೇಗಳಮನೆ ಬಸವರಾಜಪ್ಪವರ ಪುತ್ರ ಚೇತನ್ ಎಂ.ಬಿ. (25) ಇವರು ದಿನಾಂಕ 16.11.2023ರ ಗುರುವಾರ ಸಂಜೆ 7.30ಕ್ಕೆ ನಿಧನರಾದರು. ಮೃತರು ತಾಯಿ, ಸಹೋದರ ಹಾಗೂ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 17.11.2023ರ ಶುಕ್ರವಾರ ಮಧ್ಯಾಹ್ನ 12ಕ್ಕೆ ಮೃತರ ಸ್ವಗ್ರಾಮ ದಾವಣಗೆರೆ ತಾಲ್ಲೂಕು ಹುಣಸೇಕಟ್ಟೆ ಗ್ರಾಮದ ಜಮೀನಿನಲ್ಲಿ ನೆರವೇರಲಿದೆ.


# ಕನ್ನಡಿಗರಿಂದಲೇ ಕನ್ನಡ ಕಡೆಗಣನೆಯ ಕೆಲಸವಾಗುತ್ತಿದೆ

ದಾವಣಗೆರೆ, ನ. 5- ಕನ್ನಡವನ್ನು ಕಡೆಗಣಿಸುವ ಕೆಲಸ ಬ್ರಿಟಿಷರಿಂದ ಆಗಲಿಲ್ಲ. ನಮ್ಮಗಳ ತಪ್ಪಿನಿಂದ, ಕನ್ನಡಿಗರೇ ಕನ್ನಡವನ್ನು ಕಡೆಗಣಿಸುವಂತಹ ಕೆಲಸ ಆಗುತ್ತಿದೆ. ಎಲ್ಲರೂ ಕನ್ನಡ ಮಾತನಾಡಿದಾಗ ಮಾತ್ರ ಕರ್ನಾಟಕದ ಸಂಸ್ಕಾರ ಉಳಿಯಲು ಸಾಧ್ಯ ಎಂದು ಹಿರಿಯ ಪತ್ರಕರ್ತ ಎಚ್. ಬಿ. ಮಂಜುನಾಥ್ ಹೇಳಿದರು.

ಕರ್ನಾಟಕ ರಕ್ಷಣಾ ವೇದಿಕೆ ಜಿಲ್ಲಾ ಘಟಕದ ವತಿಯಿಂದ ಆಯೋಜಿಸಿದ್ದ 68ನೇ ಕರ್ನಾಟಕ ರಾಜ್ಯೋತ್ಸವ ಹಾಗೂ 50ನೇ ಸುವರ್ಣ ಸಂಭ್ರಮ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ನಮ್ಮ ಭಾಷೆಯನ್ನು ಬಿಟ್ಟು ಪರ ಭಾಷೆಯ ವ್ಯಾಮೋಹ ಜಾಸ್ತಿಯಾಗಿದೆ. ಆದ ಕಾರಣ ಕನ್ನಡಕ್ಕೆ ಇಂತಹ ಸ್ಥಿತಿ ಬಂದಿದೆ ಎಂದರು.

ಡಾ. ಮೋದಿ ವೃತ್ತದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಕನ್ನಡ ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷ ಕುರ್ಕಿ ಮಂಜುನಾಥ್, 1956ರಿಂದ ಕರ್ನಾಟಕದ ಏಕೀಕರಣಕ್ಕಾಗಿ ದುಡಿದ ಮಹನೀಯರನ್ನು ಇಂದಿನ ಯುವ ಪೀಳಿಗೆ ಮರೆಯಬಾರದು. ರಾಜ್ಯದಲ್ಲಿ ಕನ್ನಡ ಭಾಷೆ ಸದೃಢವಾಗಿದೆ ಎಂದರೆ ಸಾಹಿತಿ, ಬರಹಗಾರರು ಮತ್ತು



ಕರ್ನಾಟಕ ರಕ್ಷಣಾ ವೇದಿಕೆ ಅಂತಹ ಸಂಘಟನೆಗಳು ಕಾರಣ. ಭಾಷೆಗೆ ಕುತ್ತು ಬರದ ಹಾಗೆ ನೋಡಿಕೊಳ್ಳುತ್ತಿರುವ ಹೋರಾಟಗಾರರನ್ನು ನಾವು ಮರೆಯಬಾರದು ಎಂದು ತಿಳಿಸಿದರು.

**ಪತ್ರಕರ್ತ ಎಚ್.ಬಿ. ಮಂಜುನಾಥ್**

ಅಧ್ಯಕ್ಷತೆಯನ್ನು ಕರವೇ ಜಿಲ್ಲಾಧ್ಯಕ್ಷ ಎಂ.ಎಸ್. ರಾಮೇಗೌಡ ವಹಿಸಿದ್ದರು ಈ ಸಂದರ್ಭದಲ್ಲಿ ಮಹಿಳಾ ಘಟಕದ ಅಧ್ಯಕ್ಷೆ ಶ್ರೀಮತಿ ಬಸಮ್ಮ, ಮಂಜುಳಾ ಗಣೇಶ್, ಸಾಕಮ್ಮ, ಮಲ್ಲಿಕಾರ್ಜುನ್, ಗಿರೀಶ್ ಕುಮಾರ್, ಹನುಮಂತಪ್ಪ, ಸಂತೋಷ್, ಗಜೇಂದ್ರ, ಜೈನ್ ಭಾರತಿ, ಶ್ರೀನಿವಾಸ್ ಚಿನ್ನಿಕಟ್ಟಿ, ಓ ಮಹೇಶ್ವರಪ್ಪ, ಕೋಮಲ್ ಜೈನ್, ವಾಸುದೇವ್ ರಾಯ್ಕರ್, ಕೆ.ಜಿ. ಬಸವರಾಜ್, ಸುರೇಶ್, ತುಳಸಿರಾಮ್, ಈಶ್ವರ್, ಧೀರೇಂದ್ರ, ಗೋಪಾಲ್ ದೇವರಮನಿ, ಉಮೇಶ್, ಗೋಪಾಲ್ ರಾಜ್, ನಾಗರಾಜು, ಬಸವರಾಜ್, ಅಕ್ಷಯ್ ದಾದಾಪೀರ್, ಆಟೋ ರಫೀಕ್, ತನ್ವೀರ್ ಮೊದಲಾದವರು ಉಪಸ್ಥಿತರಿದ್ದರು

KA/SK/CTA-275/2021-2023. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ನಗರದ ಯುಬಿಡಿಟಿಯಲ್ಲಿ ಇಂದು ಕೈಗಾರಿಕೋದ್ಯಮ ಸಭೆ

ವಿಶ್ವವಿದ್ಯಾಲಯದ ಬಿಡಿಟಿ ಇಂಜಿನಿಯರಿಂಗ್ ಕಾಲೇಜು ಹಾಗೂ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ ಬೆಳಗಾವಿಯ, ಸಂಶೋಧನಾ ಮತ್ತು ಅಡಿಪಾಯದ ಸಂಯುಕ್ತ ಆಶ್ರಯದಲ್ಲಿ ಇಂದು ಬೆಳಿಗ್ಗೆ 11 ಗಂಟೆಗೆ ಒಂದು ದಿನದ ಮಧ್ಯ ಕರ್ನಾಟಕ ಕೈಗಾರಿಕೋದ್ಯಮ ಸಭೆಯನ್ನು ಹಮ್ಮಿಕೊಳ್ಳಲಾಗಿದೆ.

ಈ ಕೈಗಾರಿಕೋದ್ಯಮ ಸಭೆಯಲ್ಲಿ ದಾವಣಗೆರೆ, ಚಿತ್ರದುರ್ಗ, ಶಿವಮೊಗ್ಗ ಹಾಗೂ ಹಾವೇರಿ ಜಿಲ್ಲೆಗಳಿಂದ ಸುಮಾರು 50 ಕ್ಕು ಹೆಚ್ಚು ಕೈಗಾರಿಕೋದ್ಯಮಿಗಳು ಭಾಗವಹಿಸುತ್ತಿದ್ದು, ಯಾಂತ್ರಿಕ, ಸಿವಿಲ್, ವಿದ್ಯುತ್, ಎಲೆಕ್ಟ್ರಾನಿಕ್ಸ್, ಮತ್ತು ಕಂಪ್ಯೂಟರ್ ಸೈನ್ಸ್ ವಿಭಾಗಕ್ಕೆ ಸಂಬಂಧಪಟ್ಟ ಉದ್ಯಮಿಗಳು ಪಾಲ್ಗೊಳ್ಳಲಿದ್ದಾರೆ.

ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಡಾ.ಎಸ್. ವಿದ್ಯಾಶಂಕರ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಕುಲಸಚಿವ ಡಾ. ಬಿ.ಇ. ರಂಗಸ್ವಾಮಿ, ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಇಲ್ಲಿ ಪ್ರಾದೇಶಿಕ ಅಧಿಕಾರಿಗಳಾದ ಡಾ.ಹೆಚ್. ಲಕ್ಷ್ಮೀಕಾಂತ, ಮತ್ತು ಜಿಲ್ಲಾ ಕೈಗಾರಿಕಾ ಮಂಡಳಿ, ದಾವಣಗೆರೆಯ ನಿರ್ದೇಶಕ ರಾಜೇಂದ್ರ ನಾಮದೇವ್ ಕದಮ್ ಮುಖ್ಯ ಅತಿಥಿಗಳಾಗಿ ಆಗಮಿಸುತ್ತಿದ್ದಾರೆ.

ಬಿಡಿಟಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಚಾರ್ಯ ಡಾ. ಡಿ.ಪಿ. ನಾಗರಾಜಪ್ಪ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ಕಾಲೇಜಿನ ಯಾಂತ್ರಿಕ ವಿಭಾಗದ ಪ್ರಾಧ್ಯಾಪಕ ಡಾ. ಶೇಖರಪ್ಪ ಬಿ. ಮಲ್ಲೂರು ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯ, ಬೆಳಗಾವಿಯ ಸಂಶೋಧನೆ ಹಾಗೂ ಅಡಿಪಾಯದ ಮುಖ್ಯಸ್ಥಸಂತೋಷಇಟ್ಟಿಗಿಕಾರ್ಯಕ್ರಮದಸಂಯೋಜನಾಧಿಕಾರಿಗಳಾಗಿದ್ದಾರೆ.

# ಹಿರೇಮಲ್ಲನಹೊಳೆ ವ್ಯಾಪ್ತಿಯಲ್ಲಿ ನೀರಾವರಿ ಪಂಪ್‌ಸೆಟ್‌ಗಳಿಗೆ ನಾಳೆ ವಿದ್ಯುತ್ ವ್ಯತ್ಯಯ

ದಾವಣಗೆರೆ, ನ. 16- ನಾಡಿದ್ದು ದಿನಾಂಕ 18 ರ ಶನಿವಾರ ಬೆಳಿಗ್ಗೆ 10 ರಿಂದ ಸಂಜೆ 6ರವರೆಗೆ ಹಿರೇಮಲ್ಲನಹೊಳೆ ವಿ.ವಿ ಕೇಂದ್ರದ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಗ್ರಾಮಗಳ ಎನ್.ಜೆ.ವೈ ಮಾರ್ಗಗಳು ಮತ್ತು ನೀರಾವರಿ ಪಂಪ್‌ಸೆಟ್ ಮಾರ್ಗಗಳಿಗೆ ವಿದ್ಯುತ್ ವ್ಯತ್ಯಯವಾಗಲಿದೆ.

# ಪಾರಂಪರಿಕ ವೈದ್ಯ ಪದ್ಧತಿ ಮನುಕುಲಕ್ಕೆ ದಾರಿದೀಪ



## ಧನ್ವಂತರಿ ಜಯಂತ್ಯುತ್ಸವದಲ್ಲಿ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ

ದಾವಣಗೆರೆ,ನ. 16- ಧನ್ವಂತರಿ ಆರಂಭಿಸಿದ ಸನಾತನ ಪಾರಂಪರಿಕ ವೈದ್ಯ ಪದ್ಧತಿಯು ಮನುಕುಲಕ್ಕೆ ದಾರಿದೀಪವಾಗಿದ್ದು, ಈ ಪದ್ಧತಿಯನ್ನು ಉಳಿಸಿ, ಬೆಳೆಸುವ ಅಗತ್ಯವಿದೆ ಎಂದು ಹೆಬ್ಬಾಳು ವಿರಕ್ತಮಠದ ಶ್ರೀ ಮಹಾಂತ ರುದ್ರೇಶ್ವರ ಸ್ವಾಮೀಜಿ ಹೇಳಿದರು.

ನಗರದ ಹದಡಿ ರಸ್ತೆಯ ಹಳೆಯ ವಾಣಿ ರೈಸ್ ಮಿಲ್ ಎದುರಿಗಿನ ಕಿಸಾನ್ ವರ್ಲ್ಡ್ ಸಭಾಂಗಣದಲ್ಲಿ ಪಾರಂಪರಿಕ ವೈದ್ಯ ಪರಿಷತ್-ಕರ್ನಾಟಕ ಹಾಗೂ ಪಾರಂಪರಿಕ ವೈದ್ಯ ಪರಿಷತ್ (ದಾವಣಗೆರೆ) ಇವರ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಧನ್ವಂತರಿ ಜಯಂತ್ಯುತ್ಸವ ಹಾಗೂ ರಕ್ತಹೀನತೆಗೆ ಉಚಿತ ಚಿಕಿತ್ಸಾ ಶಿಬಿರದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮನುಕುಲಕ್ಕೆ ಏನಾದರೂ ಕೊಡುಗೆ ನೀಡಬೇಕೆಂಬ ಉದ್ದೇಶದಿಂದ ಧನ್ವಂತರಿ ಋಷಿ ಉದಯವಾದ. ಮನುಕುಲಕ್ಕೆ, ಜೀವ ಜಂತುಗಳಿಗೆ ಔಷಧಿ ನೀಡುವ ಪರಂಪರೆ ದಾರಿದೀಪವಾಗಿದೆ ಎಂದರು. ಬಾಯಿಂದ ಬಾಯಿಗೆ ಈ ಧನ್ವಂತರಿ ಚಿಕಿತ್ಸಾ ಪದ್ಧತಿಯು ರೂಢಿಗತವಾಗಿ ಬಂದಿದ್ದು, ಮನೆ ಮನೆಯಲ್ಲೂ ಮನೆ ಮದ್ದು ನೀಡುವ ಪದ್ಧತಿ ಜಾರಿಯಲ್ಲಿದೆ. ಅನೇಕ ಗಿಡಮೂಲಿಕೆಗಳಿಂದ ವಿವಿಧ ಕಾಯಿಲೆಗಳಿಗೆ ಚಿಕಿತ್ಸೆ ನೀಡಲಾಗುತ್ತಿದೆ ಎಂದು ಹೇಳಿದರು.

ಗಿಡ ಮೂಲಿಕೆಗಳಿ ರೋಗ ನಿವಾರಣೆ ಮಾಡುವ ಅಗಾಧ ಶಕ್ತಿ ಇದೆ. ಮುಂದಿನ ಪೀಳಿಗೆಗೆ ಪಾರಂಪರಿಕ ವೈದ್ಯ ಪದ್ಧತಿಯನ್ನು ಪರಿಚಯಿಸುವ ಅವಶ್ಯವಿದೆ. ಪಾರಂಪರಿಕ ವೈದ್ಯರು ಪ್ರಯೋಗ ಶೀಲರಾಗಬೇಕಿದೆ ಎಂದರು.

ನಮ್ಮ ಆರೋಗ್ಯ ನಮ್ಮ ಕೈಯ್ಯಲ್ಲಿಯೇ ಇದೆ. ಗಿಡಮೂಲಿಕೆಗಳನ್ನು ಬಳಸಿ ಸ್ವಸ್ಥವಾಗಿರುವುದನ್ನು ರೂಢಿ ಮಾಡಿ ಕೊಳ್ಳಬೇಕು. ದೇಸೀ ಪದ್ಧತಿಯ ಆಹಾರ, ಗೋವುಗಳ ರಕ್ಷಣೆ ಮುಖ್ಯ' ಎಂದು ಶ್ರೀಗಳು ಹೇಳಿದರು.

ಮಹಾನಗರ ಪಾಲಿಕೆ ಮಾಜಿ ಮಹಾಪೌರರೂ, ಹಾಲಿ ಸದಸ್ಯರಾದ ಎಸ್.ಟಿ. ವೀರೇಶ್ ಮಾತನಾಡಿ, ಭಾರತೀಯ ಪರಂಪರೆಯಲ್ಲಿ ಪಾರಂಪರಿಕ ವೈದ್ಯರ ಕೊಡುಗೆ ಅನನ್ಯವಾದುದು ಎಂದು ಹೇಳಿದರು.

ನರೇಂದ್ರ ಮೋದಿ ಭಾರತದ ಪ್ರಧಾನಿಯಾದ ಮೇಲೆ, ಸನಾತನ ಪಾರಂಪರಿಕ ವೈದ್ಯ ಪದ್ಧತಿ, ಯೋಗ ಮುಂತಾದ ಆಯುರ್ವೇದ ಪದ್ಧತಿಗಳಿಗೆ ಹೆಚ್ಚು ಮಹತ್ವ ಬಂದಿದ್ದು, ಮುಂದಿನ ಪೀಳಿಗೆಗೆ ಪರಿಚಯಿಸುವ ಮೂಲಕ ಉಳಿಸಿ, ಬೆಳೆಸಬೇಕಾಗಿದೆ ಎಂದು ತಿಳಿಸಿದರು. ಪಾರಂಪರಿಕ ವೈದ್ಯ ಪರಿಷತ್ ಮಾಜಿ ಅಧ್ಯಕ್ಷ ತರಿಕೆರೆಯ ಬೈರಲಿಂಗಪ್ಪ ಮಾಕನಹಳ್ಳಿ ಮಾತನಾಡಿದರು.

ದಾವಣಗೆರೆ ತಾಲ್ಲೂಕು ಪಾರಂಪರಿಕ ವೈದ್ಯ ಪರಿಷತ್ ಅಧ್ಯಕ್ಷರಾದ ಶಿವಲಿಂಗಮ್ಮ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಚನ್ನಗಿರಿ ಘಟಕದ ಅಧ್ಯಕ್ಷೆ ವಸಂತಮ್ಮ, ಚಿತ್ರದುರ್ಗ ಜಿಲ್ಲಾ ಸಂಚಾಲಕ ವೈದ್ಯ ವೀರಣ್ಣ, ಜಿಲ್ಲಾ ಸಂಚಾಲಕರಾದ ಪುಷ್ಪಾ, ತಾಲ್ಲೂಕು ಘಟಕದ ಅಧ್ಯಕ್ಷ ಶ್ರೀಮತಿ ಶಿವಲಿಂಗಮ್ಮ, ಚನ್ನಗಿರಿಯ ಅಧ್ಯಕ್ಷ ಶ್ರೀಮತಿ ವಸಂತಮ್ಮ ಉಪಸ್ಥಿತರಿದ್ದರು.

ಪಾರಂಪರಿಕ ವೈದ್ಯ ಪರಿಷತ್ ನಿಕಟಪೂರ್ವ ಕಾರ್ಯದರ್ಶಿ ಬಿ.ಎಂ. ಶಿವಮೂರ್ತಿ ಅವರು ತಮ್ಮ ಪ್ರಾಸ್ತಾವಿಕ ಭಾಷಣದಲ್ಲಿ ಆರೋಗ್ಯದ ಮೂಲ ಆಹಾರ ಪದ್ಧತಿ. ಬೇರೆಯವರನ್ನು ಅನುಕರಿಸುವುದು ಬೇಡ, ನಮ್ಮ ದೇಹದ ಪ್ರಕೃತಿಯನ್ನು ಅರಿತು ಆಹಾರ ಸೇವಿಸಬೇಕು ಎಂದರು

ವಚನಾಮೃತ ಬಳಗದ ಸೌಮ್ಯ, ಮಧುಮತಿ ಮತ್ತು ರಾಜಶ್ರೀಯವರು ವಚನಗಳನ್ನು ಹಾಡಿದರು. ಪರಿಷತ್ತಿನ ನಿಕಟಪೂರ್ವ ರಾಜ್ಯಾಧ್ಯಕ್ಷ ವೈದ್ಯಶ್ರೀ ನೇರ್ಲಿಗೆ ಗುರುಸಿದ್ದಪ್ಪ ಮಾತನಾಡಿ, ಪರಿಷತ್ತಿನಿಂದ ಧನ್ವಂತರಿ ಜಯಂತಿಯನ್ನು ತಪ್ಪದೇ ಆಚರಿಸಿಕೊಂಡು ಬರಲಾಗುತ್ತಿದೆ. ಪಾರಂಪರಿಕ ವೈದ್ಯರುಗಳು ಇನ್ನಷ್ಟು ಉತ್ಸಾಹದಿಂದ ಭಾಗವಹಿಸಿ, ಈ ಪರಂಪರೆಯನ್ನು ಮುಂದುವರೆಸಿಕೊಂಡು ಹೋಗಲು ಕರೆ ನೀಡಿದರು. ಮಮತಾ ನಾಗರಾಜ್ ನಿರೂಪಿಸಿದರು. ಲತಾ ಕೆ.ಪಿ. ವಂದಿಸಿದರು. ನಿರ್ಮಲ ನಿರೂಪಿಸಿದರು. ಪೂಜೆಯ ನಂತರ ಧನ್ವಂತರಿ ಜಯಂತಿಯ ಅಂಗವಾಗಿ ರಕ್ತಹೀನತೆಗೆ ವೈದ್ಯೆ ಮಮತಾ ನಾಗರಾಜ್ ಔಷಧಿ ವಿತರಿಸಿದರು.

# ಹಿರಿಯರ ಕಟ್ಟುಪಾಡುಗಳೇ ಕಾನೂನುಗಳ ಮೂಲ

## ಕಾನೂನು ನೆರವು ಕಾರ್ಯಕ್ರಮ ಉದ್ಘಾಟಿಸಿದ ನ್ಯಾ. ಮಹಾವೀರ ಎಂ.ಕರೆಣ್ಣವರ್



ದಾವಣಗೆರೆ, ನ. 16 - ನಮ್ಮ ಕಾನೂನುಗಳ ಮೂಲವೇ ನಮ್ಮ ಪುರಾತನ ಪುರಾಣ, ಪುಣ್ಯ ಕಥೆಗಳು. ಜೊತೆಗೆ ನಮ್ಮ ಹಿರಿಯರು ಹಾಕಿಕೊಟ್ಟ ಕಟ್ಟುಪಾಡುಗಳೇ ಇಂದು ಕಾನೂನುಗಳಾಗಿ ಮಾರ್ಪಟ್ಟಿವೆ ಎಂದು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿಗಳು ಹಾಗೂ ಹಿರಿಯ ಸಿವಿಲ್ ನ್ಯಾಯಾಧೀಶರಾದ ಮಹಾವೀರ ಎಂ.ಕರೆಣ್ಣವರ್ ಹೇಳಿದರು.

ನಗರದ ರೋಟರಿ ಬಾಲ ಭವನದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಷ್ಠಾನ, ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ ಇವರ ಸಂಯುಕ್ತ ಆಶ್ರಯದಲ್ಲಿ ಕಾನೂನು ಸೇವಾ ದಿನಾಚರಣೆ ಅಂಗವಾಗಿ ಆಯೋಜಿಸಲಾಗಿದ್ದ ಕಾನೂನು ನೆರವು ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ಅವರು ಮಾತನಾಡಿದರು.

ಬಾಲ್ಯ ವಿವಾಹ, ಅಪ್ರಾಪ್ತರ ಮೇಲೆ ಲೈಂಗಿಕ ದೌರ್ಜನ್ಯ ಸೇರಿದಂತೆ ಇನ್ನೂ ಹಲವಾರು ಪಿಡುಗುಗಳು ಇನ್ನೂ ನಮ್ಮ ಸಮಾಜದಲ್ಲಿ ಬೇರೂರಿವೆ. ಇಂಥವುಗಳನ್ನು ತೊಡೆದು ಹಾಕಬೇಕಾಗಿದೆ. ಸಮಾಜಕ್ಕೆ ಕಂಟಕವಾಗಿರುವ ಇಂತಹ ಸಾಮಾಜಿಕ ಪಿಡುಗುಗಳನ್ನು ನಿವಾರಿಸಲೆಂದು ತಜ್ಞರ ಅಭಿಪ್ರಾಯಗಳನ್ನು ಪಡೆದು ಕಾನೂನುಗಳನ್ನು ರೂಪಿಸಲಾಗುತ್ತದೆ. ಕಾನೂನುಗಳನ್ನ ಬೇಕಾಬಿಟ್ಟಿ ಮಾಡಲು ಸಾಧ್ಯವಿಲ್ಲ ಎಂದು ಹೇಳಿದರು.

ಅದರಲ್ಲೂ ಇಂದಿನ ನಮ್ಮ ಪೂರ್ಣ ಕಥೆಗಳಲ್ಲಿ ಬರುವ ಪಾತ್ರಗಳು ಇಂದಿನ ಸಮಾಜದಲ್ಲಿ ಬರುವ ಪಾತ್ರಗಳಾಗಿವೆ. ರಾಮ, ಸೀತೆ, ರಾವಣ ಎಲ್ಲವೂ ನಮ್ಮ ಸಮಾಜದಲ್ಲಿ ನಮ್ಮ ಕಾನೂನಿನಲ್ಲಿ ಬಂದು ಹೋಗುವ ಪಾತ್ರಗಳೇ ಎಂದು ಹೇಳಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಜಿಲ್ಲಾ ವಕೀಲರ ಸಂಘದ ಅಧ್ಯಕ್ಷ ಎಲ್. ಎಚ್.ಅರುಣ್ ಕುಮಾರ್ ಮಾತನಾಡಿ, ದೇಶದಲ್ಲಿ ಬಹುತೇಕ ಅದರಲ್ಲೂ ಯುವ ಜನತೆ, ವಿದ್ಯಾರ್ಥಿಗಳು ಕಾನೂನಿನ ಬಗ್ಗೆ ಸರಿಯಾದ ಮಾಹಿತಿ ಪಡೆದಿರುವುದಿಲ್ಲ. ಇದರಿಂದಾಗಿ ಅವರು ಕೆಲವೊಮ್ಮೆ ಸಂಕಷ್ಟಗಳಿಗೆ ಸಿಲುಕುತ್ತಾರೆ. ಆದರೆ ಆ ವೇಳೆ ನಮಗೆ ಕಾನೂನು ಗೊತ್ತಿಲ್ಲ ಎಂದು ಹೇಳಲು ಸಾಧ್ಯವಿಲ್ಲ. ಸಂವಿಧಾನದ ಅರಿವು ಬೆಳೆಸಿಕೊಳ್ಳುವುದು ಎಲ್ಲರ ಕರ್ತವ್ಯವೂ ಕೂಡ ಎಂದು ಹೇಳಿದರು.

ನಮ್ಮ ಸಂವಿಧಾನವೇ ಎಲ್ಲಾ ಕಾನೂನುಗಳ ತಾಯಿ. ಸಂವಿಧಾನದ ಪ್ರಕಾರ ಸಹಬಾಳ್ವೆ ನಡೆಸಬೇಕಾಗಿದೆ. ಆ ಮೂಲಕ ಸಮಾಜವನ್ನು ಮುಖ್ಯವಾಹಿನಿಗೆ ತರುವ ಕೆಲಸ ಮಾಡಬೇಕಾಗಿದೆ. ಸಂವಿಧಾನದ ತತ್ವಗಳನ್ನು ತಿಳಿದುಕೊಳ್ಳಬೇಕಾಗಿದೆ. ಶಿಕ್ಷಣದಿಂದ ಮಾತ್ರ ದೇಶ ಉದ್ಧಾರವಾಗಲು ಸಾಧ್ಯ. ಶಿಕ್ಷಣದಿಂದ ನಮಗೆ ಕಾನೂನು, ಸಂವಿಧಾನದ ಅರಿವು, ದೇಶದ ಬಗ್ಗೆ ನಾವು ತಿಳಿದುಕೊಳ್ಳುತ್ತೇವೆ ಎಂದು ಹೇಳಿದರು

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶ್ರೀ ಮಹರ್ಷಿ ವಾಲ್ಮೀಕಿ ಪ್ರತಿಷ್ಠಾನದ ಜಿಲ್ಲಾಧ್ಯಕ್ಷ ಹುಚ್ಚವ್ವನಹಳ್ಳಿ ಮಂಜುನಾಥ್ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಜಿಲ್ಲಾ ವಕೀಲರ ಸಂಘದ ಕಾರ್ಯದರ್ಶಿ ಎಸ್.ಬಸವರಾಜ್, ಸಹ ಕಾರ್ಯದರ್ಶಿ ಎ.ಎಸ್.ಮಂಜುನಾಥ್, ಸಂಪನ್ಮೂಲ ವ್ಯಕ್ತಿ ಎಂ.ಎನ್.ಆಂಜನೇಯ, ಸೀತಮ್ಮ ಕಾಲೇಜಿನ ಪ್ರಾಚಾರ್ಯ ಬಿ.ಪಾಲಾಕ್ಷಿ, ಉಪನ್ಯಾಸಕ ಕುಸುಗಟ್ಟೆ, ಸಲಹಾ ಸಮಿತಿ ಸದಸ್ಯ ಕುಬೇರಪ್ಪ ಸೇರಿದಂತೆ, ಇತರರು ಇದ್ದರು.

# ಐದು ವರ್ಷಗಳಲ್ಲಿ 3 ಸಾವಿರ ಹೊಸ ರೈಲು

ನವದೆಹಲಿ, ನ. 16 – ಮುಂದಿನ ಐದು ವರ್ಷಗಳಲ್ಲಿ 3 ಸಾವಿರ ಹೊಸ ರೈಲುಗಳನ್ನು ಆರಂಭಿಸುವ ಗುರಿ ಇದೆ. ಇದರಿಂದಾಗಿ ರೈಲ್ವೆಯ ಪ್ರಯಾಣಿಕರ ಸಾಮರ್ಥ್ಯ ಈಗಿರುವ 800 ಕೋಟಿಯಿಂದ ಸಾವಿರ ಕೋಟಿಗೆ ತಲುಪಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ತಿಳಿಸಿದ್ದಾರೆ.

ಪ್ರಯಾಣ ಸಮಯ ಇಳಿಸುವುದೂ ಸಹ ಸಚಿವಾಲಯದ ಮತ್ತೊಂದು ಗುರಿಯಾಗಿದೆ ಎಂದವರು ಹೇಳಿದ್ದಾರೆ.

ಪ್ರಸಕ್ತ ರೈಲ್ವೆಯಲ್ಲಿ ವರ್ಷಕ್ಕೆ 800 ಕೋಟಿ ಜನ ಪ್ರಯಾಣಿಸುತ್ತಿದ್ದಾರೆ. ಇದನ್ನು ಮುಂದಿನ ನಾಲ್ಕೈದು ವರ್ಷಗಳಲ್ಲಿ 1,000 ಕೋಟಿಗೆ ತಲುಪಿಸಲು ಉದ್ದೇಶಿಸಲಾಗಿದೆ ಎಂದು ಪತ್ರಕರ್ತರೊಂದಿಗೆ ಮಾತನಾಡಿದ ಸಚಿವರು ಹೇಳಿದ್ದಾರೆ. ಪ್ರತಿ ವರ್ಷ 5 ಸಾವಿರ ಹೊಸ ಬೋಗಿಗಳನ್ನು ಉತ್ಪಾದಿಸಲಾಗುತ್ತಿದೆ. ಇದರಿಂದಾಗಿ ರೈಲ್ವೆ ಪ್ರತಿ ವರ್ಷ 250 ಹೊಸ ರೈಲುಗಳಿಗೆ ಚಾಲನೆ ನೀಡಬಹುದು. ಇದರ ಜೊತೆಗೆ ಮುಂದಿನ ವರ್ಷಗಳಲ್ಲಿ 400-450 ವಂದೇ ಭಾರತ್ ರೈಲುಗಳೂ ಸೇರ್ಪಡೆಯಾಗಲಿವೆ ಎಂದು ರೈಲ್ವೆ ಮೂಲಗಳು ತಿಳಿಸಿವೆ.

ಪ್ರಯಾಣ ಸಮಯ ಇಳಿಕೆ ಮಾಡುವುದು ಮತ್ತೊಂದು ಗುರಿಯಾಗಿದೆ. ರೈಲುಗಳ ವೇಗ ಹೆಚ್ಚಿಸಲು ಹಾಗೂ ರೈಲ್ವೆ ಜಾಲ ವಿಸ್ತರಿಸಲು ಕಾರ್ಯನಿರ್ವಹಿಸಲಾಗುತ್ತಿದೆ ಎಂದು ಸಚಿವ ವೈಷ್ಣವ್ ಹೇಳಿದ್ದಾರೆ.

ದೂರ ಸಂಚಾರದ ಮಾರ್ಗಗಳಲ್ಲಿ ನಿಲ್ದಾಣಗಳ ಬಳಿ ರೈಲುಗಳು ನಿಲ್ಲುವಾಗ ವೇಗ ಕುಂಠಿತವಾಗುತ್ತದೆ. ರೈಲುಗಳು ನಿಲುಗಡೆ ಹಾಗೂ ಮರು ಚಾಲನೆ ವೇಗ ಹೆಚ್ಚಿಸಬೇಕಿದೆ. ಈ ದಿಸೆಯಲ್ಲಿ ವಂದೇ ಭಾರತ್ ಉಪಯುಕ್ತವಾಗಿವೆ. ಉಳಿದ ರೈಲುಗಳ ನಿಲುಗಡೆ ಹಾಗೂ ಚಾಲನೆ ವೇಗ ಸುಧಾರಿಸಲು ಕ್ರಮ ತೆಗೆದುಕೊಳ್ಳಲಾಗುವುದು ಎಂದವರು ತಿಳಿಸಿದರು.

ಈಗಿರುವ ವ್ಯವಸ್ಥೆಯಲ್ಲಿ ಹಲವು ಬೋಗಿಗಳನ್ನು ಜೋಡಣೆ ಮಾಡಿ ರೈಲು ರೂಪಿಸಲಾಗುತ್ತಿದೆ. ಇದರ ಬದಲು, 22 ಬೋಗಿಗಳು ಕಾರ್ಖಾನೆಯಿಂದಲೇ ಜೋಡಣೆಯಾಗಿ ಬರುವ ವ್ಯವಸ್ಥೆ ರೂಪಿಸಲಾಗುವುದು. ನೂತನ ವ್ಯವಸ್ಥೆಯಲ್ಲಿ ನಮ್ಮ ಕಾರ್ಖಾನೆಗಳಿಂದ ಬೋಗಿಗಳ ಬದಲು ರೈಲುಗಳೇ ಹೊರ ಬರಲಿವೆ. ಇವು ಹೆಚ್ಚಿನ ಸುರಕ್ಷತೆ ಹೊಂದಿರುತ್ತವೆ ಹಾಗೂ ಹಲವಾರು ಅನುಕೂಲತೆ ಪಡೆದಿರುತ್ತವೆ ಎಂದು ವೈಷ್ಣವ್ ವಿವರಿಸಿದರು.

ಪ್ರತಿ ವರ್ಷ 5 ಸಾವಿರ ಕಿ.ಮೀ.ಗಳ ಹಳಿ ಅಳವಡಿಸಲಾಗುತ್ತಿದೆ. ಇದೂ ಸಹ ರೈಲ್ವೆ ಸಾಮರ್ಥ್ಯ ಹೆಚ್ಚಿಸುತ್ತಿದೆ. ಸಾವಿರಕ್ಕೂ ಹೆಚ್ಚು ಫ್ಲೈಓವರ್ ಹಾಗೂ ಅಂಡರ್‌ಪಾಸ್‌ಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗಿದೆ. ಕಳೆದ ವರ್ಷ 1,002 ಫ್ಲೈಓವರ್ ಹಾಗೂ ಅಂಡರ್‌ಪಾಸ್ ನಿರ್ಮಿಸಿದ್ದೇವೆ. ಈ ವರ್ಷ 1,200ರ ಗುರಿ ಇದೆ ಎಂದವರು ಇದೇ ಸಂದರ್ಭದಲ್ಲಿ ತಿಳಿಸಿದರು.

# ಹೊನ್ನಾಳಿಯಲ್ಲಿ ಇಂದಿನಿಂದ ಪುರುಷರ ವಾಲಿಬಾಲ್ ಪಂದ್ಯಾವಳಿ

ಹೊನ್ನಾಳಿ, ನ. 16 - ಸರ್ಕಾರಿ ಪ್ರಥಮ ದರ್ಜೆ ಕಾಲೇಜ್‌ನಲ್ಲಿ ನಾಳೆ ದಿನಾಂಕ 17ರ ಶುಕ್ರವಾರದಿಂದ ಎರಡು ದಿನಗಳವರೆಗೆ ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ಕಾಲೇಜುಗಳ ಪುರುಷರ ವಾಲಿಬಾಲ್ ಪಂದ್ಯಾವಳಿಗಳು ನಡೆಯಲಿವೆ ಎಂದು ಕಾಲೇಜಿನ ಪ್ರಾಚಾರ್ಯ ಬಿ.ಜಿ. ಧನಂಜಯ ತಿಳಿಸಿರುವರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ದಾವಣಗೆರೆ ವಿಶ್ವವಿದ್ಯಾನಿಲಯದ ಅಂತರ ಕಾಲೇಜ್‌ಗಳ 25 ತಂಡಗಳು ಕ್ರೀಡಾಕೂಟಕ್ಕೆ ನೋಂದಣಿಗೊಂಡಿದ್ದು. ಇನ್ನು 10 ತಂಡಗಳು ನೋಂದಣಿಗೊಳ್ಳುವ ನಿರೀಕ್ಷೆಯಲ್ಲಿದ್ದು. 40 ಜನ ದೈಹಿಕ ಶಿಕ್ಷಕರು ತೀರ್ಪುಗಾರರಾಗಿ ಭಾಗವಹಿಸಲಿದ್ದಾರೆ.

ಕ್ರೀಡಾಕೂಟವನ್ನು ಶಾಸಕ ಶಾಂತನಗೌಡ ಉದ್ಘಾಟಿಸಲಿದ್ದು, ದೈಹಿಕ ಶಿ. ನಿರ್ದೇಶಕ ವೆಂಕಟೇಶ, ಅಂತರಾಷ್ಟ್ರೀಯ ವಾಲಿಬಾಲ್ ಆಟಗಾರ ಇಮ್ತಿಯಾಜ್ ಕ್ರೀಡಾಧಿಕಾರಿ ವೀರಪ್ಪ, ಸಹಪ್ರಾಧ್ಯಾಪಕ ಡಿ.ಸಿ. ಪಾಟೀಲ, ಹರೀಶ್ ಉಪಸ್ಥಿತರಿರುವರೆಂದರು. ಪತ್ರಿಕಾಗೋಷ್ಠಿಯಲ್ಲಿ ಮಂಜುನಾಥ ಗುರು, ಡಿ.ಸಿ. ಪಾಟೀಲ, ಪಿ.ಎಸ್. ಹರೀಶ್, ಕೊಟ್ರೇಶ್, ಅಮೂಲ್ಯ, ಗೀತಾ ಉಪಸ್ಥಿತರಿದ್ದರು.

# ನೋಡಿದ್ದೆಲ್ಲ ಲಂಚದ ವ್ಯವಹಾರದಂತೆ ಕಾಣುತ್ತಿದೆ

## ಕುಮಾರಸ್ವಾಮಿಗೆ ಸಿದ್ದರಾಮಯ್ಯ ತರಾಟೆ



ಬೆಂಗಳೂರು, ನ. 16 - ಅಧಿಕಾರ ಇದ್ದಾಗ ಲಂಚ-ಕಮೀಷನ್ ವ್ಯವಹಾರದಲ್ಲೇ ಮೂರು ಹೊತ್ತು ಮುಳುಗೇಳುತ್ತಿದ್ದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಕಾಮಾಲೆ ಕಣ್ಣಿಗೆ ನೋಡಿದ್ದು-ಕೇಳಿದ್ದೆಲ್ಲದರಲ್ಲಿಯೂ ಲಂಚದ ವ್ಯವಹಾರಗಳೇ ಕಾಣಿಸುತ್ತಿವೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಟುವಾಗಿ ಟೀಕಿಸಿದ್ದಾರೆ.

ವರುಣ ಕ್ಷೇತ್ರದ ಶಾಲೆಗಳ ಅಭಿವೃದ್ಧಿಗೆ ಸಂಬಂಧಿಸಿದಂತೆ ಸಾರ್ವಜನಿಕವಾಗಿ ನಡೆದಿರುವ ನನ್ನ ಮತ್ತು ನನ್ನ ಮಗನ ನಡುವಿನ ಫೋನ್ ಸಂಭಾಷಣೆಗೆ ವರ್ಗಾವಣೆಯಲ್ಲಿ ವಸೂಲಿಯ ಕತೆ ಕಟ್ಟಿ ಕುಮಾರಸ್ವಾಮಿ ಕುಣಿದಾಡುತ್ತಿದ್ದಾರೆ ಎಂದವರು ಹೇಳಿದ್ದಾರೆ.

ಕುಮಾರಸ್ವಾಮಿ ಅವರ ಈ ಕ್ಷುಲ್ಲಕ ನಡವಳಿಕೆ ಬಗ್ಗೆ ನಾನು ಕನಿಕರವನ್ನಷ್ಟೇ ವ್ಯಕ್ತಪಡಿಸಬಲ್ಲೆ. ವರುಣ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರು ಮತ್ತು ಕೆಡಿಪಿ ಸದಸ್ಯರಾಗಿರುವ ಮಾಜಿ ಶಾಸಕ ಡಾ.ಯತೀಂದ್ರ ಅವರು ಆ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುತ್ತಿದ್ದಾರೆ. ಸಿಎಸ್‌ಆರ್ ಹಣವನ್ನು ಬಳಸಿಕೊಂಡು ಕ್ಷೇತ್ರದಲ್ಲಿರುವ ಸರ್ಕಾರಿ ಶಾಲೆಗಳ ಸುಧಾರಣೆಗೆ ತೊಡಗಿದ್ದಾರೆ ಎಂದು ಹೇಳಿದ್ದಾರೆ.

ಇದಕ್ಕೆ ಸಂಬಂಧಿಸಿದಂತೆ ಅವರು ಫಲಾನುಭವಿ ಶಾಲೆಗಳ ಪಟ್ಟಿ ಬಗ್ಗೆ ನನ್ನ ಜೊತೆ ಮಾತನಾಡಿದ್ದರು. ಕ್ಷೇತ್ರದ ಜನರ ಎದುರಿನಲ್ಲಿಯೇ ನಡೆದಿರುವ ಈ ಸಂಭಾಷಣೆಯನ್ನು ವರ್ಗಾವಣೆಗಾಗಿ ವಸೂಲಿ ಎಂಬ ಅರ್ಥ ಬರುವ ಹಾಗೆ ತಿರುಚಿರುವ ಕುಮಾರಸ್ವಾಮಿ ಅವರು, ತಮ್ಮ ವಿಕೃತ ಮನಸ್ಥಿತಿಯನ್ನು ಪ್ರದರ್ಶಿಸಿದ್ದಾರೆ.

ಕುಮಾರಸ್ವಾಮಿ ಅವರು ರಾಜಕೀಯಕ್ಕೆ ಪ್ರವೇಶ ಮಾಡಿದ ದಿನದಿಂದ ನಿರಂತರವಾಗಿ ಕಪೋಲ ಕಲ್ಪಿತ ಆರೋಪಗಳ ಮೂಲಕ ನನ್ನ ವಿರುದ್ಧ ಸೇಡು ತೀರಿಸಿಕೊಳ್ಳುವಂತೆ ಬಾಯಿಗೆ ಬಂದಂತೆ ಮಾತನಾಡುತ್ತಾ ಬರುತ್ತಿದ್ದುದನ್ನು ರಾಜ್ಯದ ಜನ ಕಂಡಿದ್ದಾರೆ ಎಂದವರು ಹೇಳಿದ್ದಾರೆ.

# ಆರಂಭಿಕ ಆರ್ಭಟದಿಂದ ಆಸೀಸ್‌ಗೆ ಜಯಮಾಲೆ

## ಕೈ ತಪ್ಪಿದ ಕ್ಯಾಚ್‌ಗಳಿಂದ ದಕ್ಷಿಣ ಆಫ್ರಿಕಾಗೆ ಕಹಿ ಸೋಲು



ಕೊಲ್ಕೊತಾ, ನ. 16 – ದಕ್ಷಿಣ ಆಫ್ರಿಕಾ ವಿರುದ್ಧ ಕಠಿಣ ಹೋರಾಟದ ಮೂರು ವಿಕೆಟ್ ಜಯ ಗಳಿಸಿರುವ ಆಸ್ಟ್ರೇಲಿಯಾ, ವಿಶ್ವಕಪ್ ಅಂತಿಮ ಘಟಕ್ಕೆ ತಲುಪಿದೆ. ಕ್ರಿಕೆಟ್ ವಿಶ್ವಕಪ್‌ಗಾಗಿ ಭಾರತ ಹಾಗೂ ಆಸ್ಟ್ರೇಲಿಯಾ ಭಾನುವಾರ ಸೆಣಸಾಟ ನಡೆಸಲಿವೆ.

ಐದು ಬಾರಿ ಚಾಂಪಿಯನ್ ಆಗಿರುವ ಆಸ್ಟ್ರೇಲಿಯಾ, ಎಂಟನೇ ಬಾರಿ ಅಂತಿಮ ಹಂತಕ್ಕೆ ತಲುಪಿದೆ. ದಕ್ಷಿಣ ಆಫ್ರಿಕಾ ಪರವಾಗಿ ಡೇವಿಡ್ ಮಿಲ್ಲರ್ ಅವರು 101 ರನ್ ಗಳಿಸಿದರು. ದಕ್ಷಿಣ ಆಫ್ರಿಕಾ ಕೇವಲ 24 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿದ್ದು ಮುಳುವಾಯಿತು. ನಂತರಲ್ಲಿ ತಂಡ ಕೇವಲ 212 ರನ್ ಗಳಿಸಲು ಮಾತ್ರ ಸಾಧ್ಯವಾಯಿತು.

ಅತ್ಯಲ್ಪ ಮೊತ್ತ ಗಳಿಸಿದರೂ, ದಕ್ಷಿಣ ಆಫ್ರಿಕಾದ ಬೌಲರ್‌ಗಳು ದಿಟ್ಟ ಹೋರಾಟ ತೋರಿದರು. ಇದರಿಂದಾಗಿ ಆಸ್ಟ್ರೇಲಿಯಾ ಗೆಲುವಿಗಾಗಿ 47.2 ಓವರ್‌ಗಳವರೆಗೂ ಹೋರಾಟ ನಡೆಸಬೇಕಾಯಿತು.

ಐ.ಸಿ.ಸಿ. ಚಾಂಪಿಯನ್‌ಗಳಾಗಲು ಸಾಧ್ಯವಾಗದೇ 'ಚೋಕರ್ಸ್' ಎಂಬ ಹಣೆಪಟ್ಟಿ ಹೊತ್ತುಕೊಂಡಿರುವ ದಕ್ಷಿಣ ಆಫ್ರಿಕಾ, ಈ ಬಾರಿಯ ಸೆಮಿಫೈನಲ್‌ನಲ್ಲಿ ಗೆಲುವು ಸಾಧಿಸುವ ಹುಮ್ಮಸ್ಸಿನಲ್ಲಿತ್ತು. ಆದರೆ, ಆರಂಭದಲ್ಲೇ ಬ್ಯಾಟ್ಸ್‌ಮನ್‌ಗಳು ಮುಗ್ಗರಿಸಿದರು. ಐದು ಕಠಿಣ ಕ್ಯಾಚ್‌ಗಳನ್ನು ಕೈ ಚೆಲ್ಲಿದ್ದು ಬೌಲಿಂಗ್ ವೇಳೆ ಮುಳುವಾಯಿತು.

ಆಸ್ಟ್ರೇಲಿಯಾದ ನಾಯಕ ಪ್ಯಾಟ್ ಕಮ್ಮಿನ್ಸ್ (29 ಎಸೆತಗಳಲ್ಲಿ 14) ಹಾಗೂ ಮೈಕೆಲ್ ಸ್ಟಾರ್ಕ್ (38 ಎಸೆತಗಳಲ್ಲಿ 16) ಅಂತಿಮ ಹಂತದಲ್ಲಿ ಆತಂಕದ ಕ್ಷಣಗಳ ನಡುವೆಯೇ ಬ್ಯಾಟಿಂಗ್ ಮಾಡಿ ಗೆಲುವಿನ ದಾರಿ ಕಂಡುಕೊಂಡರು.

ಬ್ಯಾಟಿಂಗ್ ಹಾಗೂ ಬೌಲಿಂಗ್‌ಗಳೆರಡರಲ್ಲೂ ಆಸ್ಟ್ರೇಲಿಯಾ ಅಬ್ಬರದ ಆರಂಭ ಕಂಡಿತು. ಅಂತಿಮವಾಗಿ ಇದೇ ಗೆಲುವಿನಲ್ಲಿ ನಿರ್ಣಾಯಕವೂ ಆಯಿತು. ಮೊದಲು ಬೌಲಿಂಗ್ ಮಾಡಿದ ಆಸ್ಟ್ರೇಲಿಯಾ, 24 ರನ್‌ಗಳಿಗೆ ನಾಲ್ಕು ವಿಕೆಟ್ ಉರುಳಿಸಿತ್ತು. ನಂತರ ಟ್ರಾವಿಸ್ ಹೆಡ್ (48 ಎಸೆತಗಳಲ್ಲಿ (62) ಹಾಗೂ ಡೇವಿಡ್ ವಾರ್ನರ್ (18 ಎಸೆತಗಳಲ್ಲಿ 29) ಸ್ಫೋಟಕ ಆರಂಭ ಒದಗಿಸಿದರು. ಮೊದಲ ವಿಕೆಟ್ ಉರುಳುವಷ್ಟರಲ್ಲಿ ಆಸ್ಟ್ರೇಲಿಯ 6.1 ಓವರ್‌ಗಳಲ್ಲೇ 60 ರನ್ ಬಾರಿಸಿತ್ತು.

ದಕ್ಷಿಣ ಆಫ್ರಿಕಾದ ಸ್ಪಿನ್ನರ್‌ಗಳು ದಾಳಿಗೆ ಇಳಿಯುವಷ್ಟರಲ್ಲಿ, ಪಂದ್ಯ ಅರ್ಧ ಕೈ ಬಿಟ್ಟಿತ್ತು. ಏಡನ್ ಮರ್ಕರಮ್ (1/23) ಹಾಗೂ ಕೇಶವ್ ಮಹಾರಾಜ್ (1/24) ವಾರ್ನರ್ ಮತ್ತು ಟ್ರಾವಿಸ್ ವಿಕೆಟ್ ಉರುಳಿಸಿ ಪಂದ್ಯದ ಗತಿ ಬದಲಿಸಿದರು.

ಸ್ಪಿನ್ನರ್ ತಬ್ರೇಜ್ ಶಮ್ಸಿ (2/42) ಅವರು ಮಾರನ್ಸ್ ಲಬುಶನೆ (18) ಹಾಗೂ ಗ್ಲೆನ್ ಮ್ಯಾಕ್ಸ್‌ವೆಲ್ (1) ವಿಕೆಟ್ ಉರುಳಿಸಿದರು. ಆ ವೇಳೆಗೆ ಆಸ್ಟ್ರೇಲಿಯಾ 137 ರನ್ ಗಳಿಸುವಷ್ಟರಲ್ಲಿ ಐದು ವಿಕೆಟ್ ಕಳೆದುಕೊಂಡಿತ್ತು. ಗೆರಾಲ್ಡ್ ಕೊಟ್ಜೀ (2/47) ಅವಳಿ ವಿಕೆಟ್ ಉರುಳಿಸಿ ಪಂದ್ಯ ಮತ್ತಷ್ಟು ರೋಚಕವಾಗುವಂತೆ ಮಾಡಿದರು.

ಅಂತಿಮವಾಗಿ ಕಮ್ಮಿನ್ಸ್ ಹಾಗೂ ಸ್ಟಾರ್ಕ್ ತಮ್ಮ ಅನುಭವ ಬಳಸಿ ಆಸ್ಟ್ರೇಲಿಯಾ ಅನ್ನು ಗೆಲುವಿನ ದಡ ಸೇರಿಸಿದರು.


## ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಅಮಿಟೆಡ್, ದಾವಣಗೆರೆ

ಆಡಳಿತ ಕಚೇರಿ, ಹರ್ಡೇಕರ್ ಮಂಜಪ್ಪ ರಸ್ತೆ, ದಾವಣಗೆರೆ

### ಸ್ಥಿರ ಸೊತ್ತುಗಳ ಬಹಿರಂಗ ಹರಾಜು ಪ್ರಕಟಣೆ

ಬಾಪೂಜಿ ಕೋ-ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ ಇವರು ಪಡೆದುಕೊಂಡಿರುವ ಈ ಕೆಳಗಿನ ಡಿಕ್ರಿ ಅಮಲ್ಜಾರಿ ಕ್ರಮದಲ್ಲಿ ಬ್ಯಾಂಕಿಗೆ ಜಪ್ತಿ/ಆಧಾರ ಮಾಡಲ್ಪಟ್ಟಿರುವ ಸ್ಥಿರ ಸೊತ್ತನ್ನು ಸಹಕಾರ ಸಂಘಗಳ ಜಂಟಿ ನಿಬಂಧಕರು,(ನಿ.411) ದಾವಾ ಪಂಚಾಯ್ತಿ, ಕರ್ನಾಟಕ ರಾಜ್ಯ ಸರ್ಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ., ಬೆಂಗಳೂರು ಇವರ ಘನ ನ್ಯಾಯಾಲಯದ ಆದೇಶ ಸಂಖ್ಯೆ ಜೆಆರ್‌ಡಿ/ಯುಬಿಎಫ್/2322/2007–08ರ ಮೇರೆಗೆ ಈ ಕೆಳಗೆ ಕಾಣಿಸಿರುವ ಸ್ಥಿರಾಸ್ತಿಯನ್ನು ಭಡ ಸವಾಲು ಮೂಲಕ ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ ನಿಯಮ 441 ಇವರ ಷರತ್ತಿಗೊಳಪಟ್ಟು ಹರಾಜು ಮಾಡಲಾಗುವುದು.

| ಕ್ರ. ಸಂ. | ಬಾಕಿದಾರರ ಹೆಸರು ಮತ್ತು ವಿಳಾಸ | ಸದರಿ ಅಮಲ್ಜಾರಿ ಕ್ರಸಂ. ಮತ್ತು ಇ.ಪಿ. ಖಾತೆಯಿಂದ ಬರಬೇಕಾದ ಬಾಕಿ ಮೊತ್ತ | ಬಹಿರಂಗ ಹರಾಜು ಮಾಡಲ್ಪಡುವ ಸ್ಥಿರ ಸೊತ್ತುಗಳ ವಿವರ | ಬಹಿರಂಗ ಹರಾಜು ನಡೆಯುವ ಸ್ಥಳ, ದಿನಾಂಕ ಮತ್ತು ಸಮಯ | ಪಾವತಿಸಬೇಕಾದ ಮುಂಗಡ ರೇವಣಿ |
|---|---|---|---|---|---|
| 1 | ಮೆ॥ ಮಹೇಶ್ ಬೀಡಿ ವರ್ಕ್ಸ್, ಮಾಲೀಕರು 1) ಮುಷ್ತಾಕ್ ಅಹಮದ್ 2) ಷಫಿ ಅಹಮದ್ 3) ಮೋಹಿನುದ್ದೀನ್ ವಿಳಾಸ ಡೋರ್ ನಂ.1013, ಸಾಜಿದಾ, ಬೇತೂರು ರಸ್ತೆ, ದಾವಣಗೆರೆ | ಇ.ಪಿ. ಸಂ.80/2009–10. ರೂ. 41,76,573–00 (ರೂಪಾಯಿ ನವತ್ತೊಂದು ಲಕ್ಷದ ಎಪ್ಪತ್ತಾರು ಸಾವಿರದ ಐದು ನೂರ ಎಪ್ಪತ್ಮೂರು ಮಾತ್ರ) (ದಿನಾಂಕ : 25–10–2023ಕ್ಕೆ ಇದ್ದಂತೆ + ಮುಂದುವರೆದ ಬಡ್ಡಿ ಹಾಗೂ ಇತರೆ ಖರ್ಚು). | ದಾವಣಗೆರೆ ನಗರ, 3ನೇ ವಾರ್ಡ್, 4ನೇ ಡಿವಿಜನ್, ಅಮರಪ್ಪನ ತೋಟ, ಆನೆಕೊಂಡ, ಇಮಾಂ ನಗರ, ನುರಾನಿ ಮಸೀದಿ ಹತ್ತಿರ, ಮನೆ ನಂ.550/7ಬಿ ಇದರಲ್ಲಿರುವ ಕಟ್ಟಡ ಅಂದಾಜು ಅಳತೆ 30x43 ಅಡಿಗಳು. (ಒಟ್ಟು ಅಳತೆ 1290 ಚ. ಅಡಿಗಳು) | ದಿನಾಂಕ 22–11–2023 ನೇ ಬುಧವಾರ ಮಧ್ಯಾಹ್ನ 12–00 ಘಂಟೆಗೆ, ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಹದಡಿ ರಸ್ತೆ ಶಾಖೆ, ದಾವಣಗೆರೆ. | 50,000=00 |

**ಹರಾಜಿನ ಷರತ್ತುಗಳು :–** (1) ಹರಾಜಿನಲ್ಲಿ ಭಾಗವಹಿಸುವವರು ಹರಾಜು ಸ್ಥಳದಲ್ಲಿ ಮುಂಗಡ ಠೇವಣಿಯನ್ನು ಡಿ.ಡಿ./ನಗದು ಮುಖಾಂತರ ಪಾವತಿಸಬೇಕು (ಪ್ರಧಾನ ವ್ಯವಸ್ಥಾಪಕರು ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ಇವರ ಹೆಸರಿಗೆ) ಇದನ್ನು ಹರಾಜಿನ ಸಮಯಕ್ಕೆ ಅರ್ಧ ಗಂಟೆಗೆ ಮುಂಚಿತವಾಗಿ ಪಾವತಿಸಿ ತಮ್ಮ ವೈಯಕ್ತಿಕ ಮಾಹಿತಿ (ಆಧಾರ ಕಾರ್ಡ್ ಹಾಗೂ ಪಾನ್ ಕಾರ್ಡ್ ಪ್ರತಿಯೊಂದಿಗೆ) ಸಲ್ಲಿಸಿ ಬಿಡ್ದುದಾರರೆಂದು ನೋಂದಾಯಿಸಿಕೊಳ್ಳಬೇಕು. (2) ಸವಾಲಿನಲ್ಲಿ ಭಾಗವಹಿಸಲು ಇಚ್ಛಿಸುವವರು ಸದರಿ ನಿಯಮಾವಳಿಗೆ ಒಳಪಟ್ಟಿರತಕ್ಕದ್ದು. (3) ಹರಾಜಿಗೆ ಮುನ್ನ ಬ್ಯಾಂಕಿಗೆ ಬರಬೇಕಾದ ಹಣ ಮರುಪಾವತಿಯಾದಲ್ಲಿ ಸದರಿಯವರ ಸ್ವತ್ತನ್ನು ಹರಾಜು ಮಾಡಲಾಗುವುದಿಲ್ಲ. (4) ನಿಗದಿಪಡಿಸಿದ ಸಮಯದ ನಂತರ ಬಂದ ಠೇವಣಿಗಳನ್ನು ಸ್ವೀಕರಿಸುವುದಿಲ್ಲ. (5) ಅಧಿಕೃತ ಸವಾಲ್ ಮಾಡಿ ಸ್ಥಿರಾಸ್ತಿಯನ್ನು ಕೊಳ್ಳುವವರು ಮಾರಾಟಾಧಿಕಾರಿಯವರು ಹರಾಜು ಒಪ್ಪಿದ ತಕ್ಷಣ ಹರಾಜು ಮೊಬಲಗಿನ ಶೇಕಡ 15ರಷ್ಟು ಮೊತ್ತವನ್ನು ಕೂಡಲೇ ಪಾವತಿ ಮಾಡತಕ್ಕದ್ದು. ಉಳಿದ ಹಣವನ್ನು ಮತ್ತು ಸ್ಟಾಂಪ್‌ಪೇಪರ್ ಮೊಬಲಗನ್ನು 45 ದಿನಗಳೊಳಗಾಗಿ ಪಾವತಿ ಮಾಡತಕ್ಕದ್ದು. ತಪ್ಪಿದಲ್ಲಿ ಪಾವತಿ ಮಾಡಿರುವ ಹಣವನ್ನು ಮುಟ್ಟುಗೋಲು ಮಾಡಿಕೊಳ್ಳಲಾಗುವುದು. (6) ಸವಾಲುದಾರರು ಹರಾಜನ್ನು ಪ್ರಾರಂಭಿಸುವುದಕ್ಕೆ ಮುನ್ನವೇ ಕಟ್ಟಡ/ಸ್ವತ್ತನ್ನು ಪರಿಶೀಲಿಸಿ ಹರಾಜಿನಲ್ಲಿ ಭಾಗವಹಿಸತಕ್ಕದ್ದು. (7) ಒಂದು ವೇಳೆ ಸುಸ್ತಿ ಸಾಲಗಾರರು 45 ದಿನಗಳೊಳಗಾಗಿ ಇತರೆ ಎಲ್ಲಾ ಖರ್ಚುಗಳೊಂದಿಗೆ ಸಂಪೂರ್ಣ ಹಣ ಪಾವತಿ ಮಾಡಿದಾಗ ಹರಾಜಿನಲ್ಲಿ ಒಪ್ಪಿಕೊಂಡ ಖರೀದಿದಾರರಿಗೆ ಶೇಕಡ 5ರಂತೆ ಮಾರಾಟ ಮಾಡಿದ ಹಣಕ್ಕೆ ಸಮಾಧಾನಾರ್ಥವಾಗಿ ಪರಿಹಾರವನ್ನು ಕರ್ನಾಟಕ ಸಹಕಾರಿ ನಿಯಮ 60, ನಿಯಮ 38(4)(1)ರ ಪ್ರಕಾರ ಸುಸ್ತಿಸಾಲಗಾರರಿಂದ ಕೊಡಿಸಲಾಗುವುದು. (8) ಮೇಲೆ ಕಾಣಿಸಿದಂತೆ ಸ್ಥಿರಾಸ್ತಿ ಹರಾಜಿನ ಹಣವನ್ನು ನಿಗದಿಪಡಿಸಿದ ಸಮಯಕ್ಕೆ ಸರಿಯಾಗಿ ಕಟ್ಟಲು ತಪ್ಪಿದಲ್ಲಿ ಹರಾಜನ್ನು ರದ್ದುಪಡಿಸಿ ಕಟ್ಟಿರುವ ಹಣವನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುವುದು ಮತ್ತು ಬಿಡ್ದುದಾರರಿಗೆ ಇದರ ಮೇಲೆ ಯಾವುದೇ ಹಕ್ಕು ಇರುವುದಿಲ್ಲ. (9) ಎಲ್ಲಾ ವಿಧವಾದ ಸ್ಟಾಂಪ್ ಡ್ಯೂಟಿ, ತೆರಿಗೆ, ಕಾನೂನು ಖರ್ಚು, ರಿಜಿಸ್ಟ್ರೇಷನ್ ಫೀ, ಬಾಕಿ ಇರುವ ವಿದ್ಯುತ್ ಬಿಲ್, ದೂರವಾಣಿ ಬಿಲ್, ಕಂದಾಯ ಮತ್ತು ನೀರಿನ ಕಂದಾಯ, ಇತರೆ ಖರ್ಚುಗಳನ್ನು ಸಹ ಖರೀದಿದಾರರೇ ಭರಿಸತಕ್ಕದ್ದು. (10) ಸ್ಥಿರಾಸ್ತಿಯು ಹರಾಜು ನಡೆಯುವ ದಿನ ಯಾವ ರೀತಿ ಇರುತ್ತದೆಯೋ ಮತ್ತು ಹೇಗಿರುತ್ತದೆಯೋ ಹಾಗೆಯೇ ಇರುವ ಸ್ಥಿತಿಯಲ್ಲಿ ಮಾರಾಟ ಮಾಡಲಾಗುವುದು. (11) **ಯಾವುದೇ ಕಾರಣ ನೀಡದೇ ಹರಾಜನ್ನು ಒಪ್ಪುವ ಅಥವಾ ತಿರಸ್ಕರಿಸುವ ಅಧಿಕಾರ ಮಾರಾಟಾಧಿಕಾರಿಗಳ ಅಧೀನಕ್ಕೆ ಒಳಪಟ್ಟಿರುತ್ತದೆ.** (12) ಮೇಲ್ಕಾಣಿಸಿದ ಸ್ಥಿರಾಸ್ತಿಯನ್ನು ಪರಿಶೀಲಿಸಲು ಹಾಗೂ ಹೆಚ್ಚಿನ ಮಾಹಿತಿಗಾಗಿ ಬ್ಯಾಂಕಿನ ಮಾರಾಟಾಧಿಕಾರಿ/ಪ್ರಧಾನ ವ್ಯವಸ್ಥಾಪಕರನ್ನು ಈ ಜಾಹೀರಾತು ಬಂದ ದಿನಾಂಕದಿಂದ ಹರಾಜಿನ ದಿನಾಂಕದವರೆಗೆ ಬೆಳಿಗ್ಗೆ 11–00 ಘಂಟೆಯಿಂದ ಸಂಜೆ 5–00 ಘಂಟೆಯೊಳಗೆ ಸಂಪರ್ಕಿಸಿ ಪರಿಶೀಲಿಸಬಹುದು. (13) ಯಾವುದೇ ತಕರಾರಿದ್ದಲ್ಲಿ ಸಹಕಾರ ಸಂಘಗಳ ಕಾಯಿದೆ, ನಿಯಮಗಳ ಪ್ರಕಾರ ಇತ್ಯರ್ಥಗೊಳಿಸಲಾಗುವುದು.

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ವಸೂಲಾತಿ ಅಧಿಕಾರಿ,
ದಾವಣಗೆರೆ ಉಪ ವಿಭಾಗ, ದಾವಣಗೆರೆ ಇವರ ಆದೇಶದ ಮೇರೆಗೆ

ದಿನಾಂಕ : 16–11–2023
ಸ್ಥಳ : ದಾವಣಗೆರೆ

ಸಹಿ/–
**ಬಸವರಾಜ ಎಂ.**
ಪ್ರಧಾನ ವ್ಯವಸ್ಥಾಪಕರು

ಸಹಿ/–
ಜ್ಯೋತಿ ಮಾಳಾಪುರ, ಸಹಕಾರ ಅಭಿವೃದ್ಧಿ ಅಧಿಕಾರಿ ಹಾಗೂ ಮಾರಾಟಾಧಿಕಾರಿ, (ನಿ.441)
ಬಾಪೂಜಿ ಕೋ–ಆಪರೇಟಿವ್ ಬ್ಯಾಂಕ್ ಲಿ., ದಾವಣಗೆರೆ

# ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಹೆಚ್ಚಿಸಲು ಕಸಾಪ ಪ್ರೇರಕವಾಗಲಿ

## ಜಗಳೂರಿನ ಕಾರ್ಯಕ್ರಮದಲ್ಲಿ ಬಿಆರ್‌ಸಿ ಡಿ.ಡಿ. ಹಾಲಪ್ಪ ಆಶಯ



ಜಗಳೂರು, ನ.16- ಶಾಲಾ-ಕಾಲೇಜು ಅಂಗಳದಲ್ಲಿ ನಡೆಯುವ ಕನ್ನಡ ಸಾಹಿತ್ಯ ಪರಿಷತ್ತಿನ ವಿವಿಧ ಕಾರ್ಯಕ್ರಮಗಳು ವಿದ್ಯಾರ್ಥಿಗಳಲ್ಲಿ ಸಾಹಿತ್ಯಾಸಕ್ತಿ ಹೆಚ್ಚಿಸುವಲ್ಲಿ ಪ್ರೇರಕವಾಗಲಿ ಎಂದು ಬಿಆರ್‌ಸಿ ಡಿ.ಡಿ. ಹಾಲಪ್ಪ ತಿಳಿಸಿದರು.

ಪಟ್ಟಣದ ಅಂಬೇಡ್ಕರ್ ಶಾಲಾ ಆವರಣದಲ್ಲಿ ಕನ್ನಡ ಸಾಹಿತ್ಯ ಪರಿಷತ್ ಸಹಯೋಗದಲ್ಲಿ ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಕನ್ನಡ ಅತ್ಯಂತ ಶ್ರೀಮಂತ ಭಾಷೆಯಾಗಿದೆ. ಆದರೆ ಇಂದಿನ ವಿದ್ಯಾರ್ಥಿಗಳು ಮೊಬೈಲ್‌ನಲ್ಲಿ ಸರಳ, ಸಂಜ್ಞೆ, ಮೆಸೇಜ್‌ಗಳಲ್ಲಿ ತಲ್ಲೀನರಾಗಿದ್ದು ಕನ್ನಡ ಭಾಷೆಯ ಬರವಣಿಗೆ ಕೌಶಲ್ಯ, ಸಾಹಿತ್ಯಾಸಕ್ತಿ ಕುಂಠಿತವಾಗುತ್ತಿದೆ ಎಂದು ವಿಷಾದಿಸಿದರು.

ನಿವೃತ್ತ ಶಿಕ್ಷಕ ಕೆ.ವಿ.ರಾಘವೇಂದ್ರ, ಕವಿ ಕುಮಾರವ್ಯಾಸನ ಕುರಿತು ಉಪನ್ಯಾಸ ನೀಡಿ, ವ್ಯಾಸ ಮತ್ತು ವಾಲ್ಮೀಕಿ ಮಹರ್ಷಿಗಳು ಜೀವಂತವಾಗಿದ್ದ ಸಂದರ್ಭದಲ್ಲಿ ರಚಿಸಿದ ರಾಮಾಯಣ ಹಾಗೂ ಮಹಾಭಾರತ ಮಹಾನ್ ಕಾವ್ಯಗಳು ಯಾವುದೇ ದಂತಕಥೆಗಳಲ್ಲ, ನೈಜ ಘಟನೆಗಳ ಇತಿಹಾಸಗಳಾಗಿವೆ. ನೈತಿಕ, ಐತಿಹಾಸಿಕ, ಧಾರ್ಮಿಕ, ಸಾಂಸ್ಕೃತಿಕ ಮಹತ್ವಗಳಿವೆ. ಆದ್ದರಿಂದಲೇ ಪ್ರತಿಯೊಬ್ಬರನ್ನೂ ಸೆಳೆಯುತ್ತವೆ ಎಂದು ಬಣ್ಣಿಸಿದರು.

6 ಶತಮಾನಗಳ ಹಿಂದೆ ಕವಿ ಕುಮಾರವ್ಯಾಸನ ಗದುಗಿನ ಭಾರತ ಎಂದು ಕರೆಯಲ್ಪಡುವ ಕರ್ನಾಟಕ ಭಾರತ ಕಥಾಮಂಜರಿ ಕಾವ್ಯ ಇಂದಿಗೂ ಶ್ರಾವಣ ಮಾಸದಲ್ಲಿ ಪುರಾಣವಾಗಿ ಜನಸಾಮಾನ್ಯರ ಮಾನಸದಲ್ಲಿ ಉಳಿದಿದೆ. ಅಲ್ಲದೆ ಸಾಂಸ್ಕೃತಿಕ, ಧಾರ್ಮಿಕ ಅಸ್ಮಿತೆ ಕಾಪಾಡಿಕೊಂಡಿದೆ ಎಂದು ತಿಳಿಸಿದರು.

ಕಸಾಪ ತಾಲ್ಲೂಕು ಅಧ್ಯಕ್ಷೆ ಸುಜಾತಮ್ಮ ಪ್ರಾಸ್ತಾವಿಕವಾಗಿ ಮಾತನಾಡಿ, ಶಾಲಾ-ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವ 22 ಶಾಲಾ-ಕಾಲೇಜುಗಳಲ್ಲಿ ವಿವಿಧ ವಿಷಯಗಳೊಂದಿಗೆ ಉಪನ್ಯಾಸ ಮಾಲಿಕೆಗಳ ಅಭಿಯಾನ ನಡೆಯಲಿದ್ದು, ವಿದ್ಯಾರ್ಥಿ ಸಮೂಹ ಇದರ ಸದುಪಯೋಗ ಪಡೆದುಕೊಳ್ಳಬೇಕು ಎಂದು ಮನವಿ ಮಾಡಿದರು.

ಹಿರಿಯ ಸಾಹಿತಿ ಎನ್.ಟಿ.ಎರ್ರಿಸ್ವಾಮಿ ಮಾತನಾಡಿ, ಡಾ. ಬಿ.ಆರ್.ಅಂಬೇಡ್ಕರ್ ಅವರ ಶಿಕ್ಷಣದ ಪರಿಕಲ್ಪನೆ ಇಂದಿಗೂ ಆದರ್ಶ. ವಿದ್ಯಾರ್ಥಿಗಳು ಪಠ್ಯಪುಸ್ತಕದ ಜೊತೆ ಪಠ್ಯೇತರ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಬೇಕಿದೆ. ಸಾಹಿತ್ಯ ಲೋಕ ಶಿಕ್ಷಣದ ಒಂದು ಭಾಗವಾಗಿದ್ದು, ಸಾಹಿತ್ಯದ ಪ್ರಕಾರಗಳು ಬದುಕಿನ ಶೈಲಿಯ ಪ್ರತಿಬಿಂಬಗಳು ಎಂದು ತಿಳಿಸಿದರು.

ಸಮಾರಂಭದಲ್ಲಿ ತಾಲ್ಲೂಕು ದೈಹಿಕ ಶಿಕ್ಷಣ ಪರಿವೀಕ್ಷಕ ಸುರೇಶ್ ರೆಡ್ಡಿ, ಮುಖ್ಯಶಿಕ್ಷಕ ಬಸವರಾಜ್, ಸಾಹಿತ್ಯ ಪರಿಷತ್ ಪದಾಧಿಕಾರಿಗಳಾದ ಗೀತಾ ಮಂಜು, ಪಿ.ಎಸ್.ಅರವಿಂದನ್, ಎ.ಡಿ. ನಾಗಲಿಂಗಪ್ಪ, ಮಾರಪ್ಪ, ಡಿ.ಸಿ. ಮಲ್ಲಿಕಾರ್ಜುನ್, ಎಂ.ರಾಜಪ್ಪ, ಧನ್ಯಕುಮಾರ್, ಚಂಪಾವತಿ, ರೇವತಿ, ಮಾದಿಹಳ್ಳಿ ಮಂಜುನಾಥ್ ಮುಂತಾದವರು ಇದ್ದರು.

# 37ನೇ ರಾಷ್ಟ್ರೀಯ ಕ್ರೀಡಾಕೂಟ ಶೋಹೇಬ್‌ಗೆ ಚಿನ್ನ-ಆಯಿಷಾಗೆ ಬೆಳ್ಳಿ



ಹರಿಹರ, ನ.16- ಭಾರತೀಯ ಒಲಂಪಿಕ್ ಸಂಸ್ಥೆ ಅಡಿಯಲ್ಲಿ ಜರುಗಿದ 37ನೇ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಭಾಗವಹಿಸಿದ್ದ ನಗರದ ಸ್ಕ್ಯಾಯ್ ಕ್ರೀಡಾಪಟುಗಳಾದ ಸೈಯದ್ ಶೋಹೇಬ್ ಚಿನ್ನದ ಪದಕ ಮತ್ತು ಆಯಿಷಾ ಪರ್ವಿನ್ ಬೆಳ್ಳಿ ಪದಕ ಪಡೆದಿರುತ್ತಾರೆ. ಈ ಕ್ರೀಡಾಪಟುಗಳನ್ನು ಜಿಲ್ಲಾಧಿಕಾರಿ ಡಾ. ಎಂ.ವಿ ವೆಂಕಟೇಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ತರಬೇತುದಾರ ಮೊಹಮ್ಮದ್ ಅಲಿ ಮತ್ತು ಸ್ಕ್ಯಾಯ್ ರಾಜ್ಯ ಸಂಸ್ಥೆ ಅಧ್ಯಕ್ಷರವಿಕುಮಾರ್ ಜಿ.ಬಿ, ಕೋಶಾಧ್ಯಕ್ಷ ಗಿರೀಶ್ ಕೆ.ಬಿ ಉಪಸ್ಥಿತರಿದ್ದರು.

# ವರ್ಗಾವಣೆಯಲ್ಲಿ ಯತೀಂದ್ರ ಹಸ್ತಕ್ಷೇಪ

**(1ನೇ ಪುಟದಿಂದ)** ಕರೆ ಮಾಡಿದ್ದು ಯಾರು, ಹೇಳಿ ಅಪ್ಪ ಎಂದಿದ್ದು ಯಾರಿಗೆ, ವಿವೇಕಾನಂದ ಯಾರು, ಮಹದೇವನಿಗೆ ಫೋನ್ ಕೊಡಿ ಅಂತ ಹೇಳಿದ್ದು ಯಾಕೆ, ನಾಲ್ಕೈದು ಲಿಸ್ಟ್ ಯಾವುದು ಎಂದು ಕುಮಾರಸ್ವಾಮಿ ಪ್ರಶ್ನಿಸಿದರಲ್ಲದೆ, ಇದ್ಯಾವ ಚೀಫ್ ಮಿನಿಸ್ಟರ್, ಸೂಪರ್ ಚೀಫ್ ಮಿನಿಸ್ಟರ್ ಎಂದು ಖಾರವಾಗಿ ಕೇಳಿದರು.

ಯತೀಂದ್ರ ಅವರು, ನಾನು ಹೇಳಿದ ನಾಲ್ಕೈದು ಬಿಟ್ಟು ಬೇರೆ ಮಾಡಬೇಡ ಅಂದಿದ್ದು ಯಾಕೆ, ಇದು ವರ್ಗಾವಣೆ ದಂಧೆ ಹೊರತುಪಡಿಸಿ, ಬೇರೆ ಯಾವ ವಿಷಯಕ್ಕೆ ಸಂಬಂಧಿಸಿದ್ದು, ಈ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಯಬೇಕು. ಅಪ್ಪ, ಮಗನ ನಡುವೆ ನಡೆದ ಫೋನ್ ಚರ್ಚೆ ವ್ಯವಹಾರ ಜನರಿಗೆ ಗೊತ್ತಾಗಬೇಕು ಎಂದು ಮಾಜಿ ಮುಖ್ಯಮಂತ್ರಿ ಒತ್ತಾಯ ಮಾಡಿದರು. ಇಷ್ಟಕ್ಕೂ ಆ ಮಹದೇವು ಯಾರು, ಆತನಿಗೂ ಮುಖ್ಯಮಂತ್ರಿ ಕುಟುಂಬಕ್ಕೂ ಏನು ಸಂಬಂಧ, ಕಲೆಕ್ಷನ್ ಮಾಡುವುದಕ್ಕೆ ಆ ಗಿರಾಕಿಯನ್ನು ಮುಖ್ಯಮಂತ್ರಿ ಕಚೇರಿಯಲ್ಲಿ ಇಟ್ಟುಕೊಂಡಿದ್ದಾರೆಯೇ? ಎಂದು ಅವರು ಖಾರವಾಗಿ ಪ್ರಶ್ನಿಸಿದರು.

ಒಬ್ಬ ಶಾಸಕ ಪತ್ರ ತೆಗೆದುಕೊಂಡು ಹೋದಾಗ, 'ಬರೀ ಕಾಗದ ತಗೊಂಡು ಬಂದರೆ ಆಯಿತಾ 30 ಲಕ್ಷ ರೂಪಾಯಿ ಹಣ ಕೊಡಬೇಕು' ಎಂದು ಬಹಿರಂಗವಾಗಿ ಡಿಮಾಂಡ್ ಮಾಡಿದ್ದ ವ್ಯಕ್ತಿ ಈತ. ಈ ವ್ಯಕ್ತಿಯ ಬಗ್ಗೆ ಹಿಂದೆಯೇ ನಾನು ಹೇಳಿದ್ದೇನೆ. ಸಿಎಂ ಕಚೇರಿಯಲ್ಲಿ ವೈಎಸ್‌ಟಿ ಕಲೆಕ್ಷನ್ ಆಗುತ್ತಿದೆ ಎಂದು ಹೇಳಿದಾಗ ನನ್ನ ಬಗ್ಗೆ ಲಘುವಾಗಿ ಮಾತಾನಾಡಿದ್ದರು ಎಂದು ಕುಮಾರಸ್ವಾಮಿ ಆಕ್ರೋಶ ವ್ಯಕ್ತಪಡಿಸಿದರು.

ಅಂದು ಯಡಿಯೂರಪ್ಪ, ವಿಜಯೇಂದ್ರ ಬಗ್ಗೆ ಆರೋಪ ಮಾಡಿದ್ದ ಸಿದ್ದರಾಮಯ್ಯ ಅವರು, ತಮ್ಮ ಮಗನನ್ನು ಇಟ್ಟುಕೊಂಡು ಮಾಡುತ್ತಿರುವುದೇನು? ತಂದೆ ಎನ್ನುವ ಸಂಬಂಧ ಮನೆಯಲ್ಲಿ. ಹೊರಗೆ ಅಲ್ಲ. ಮೊದಲು ಅಪ್ಪಾ ಎನ್ನುತ್ತಾ, ಫೋನ್ ಕೊಡಿ ಆ ಮಹದೇವುಗೆ ಎಂದು ರಾಜ್ಯದ ಸಿಎಂಗೇ ತಾಕೀತು ಮಾಡುವ ಅಹಂಕಾರಕ್ಕೆ ಏನು ಹೇಳುವುದು ಎಂದು ಕುಮಾರಸ್ವಾಮಿ ಅವರು ಕಿಡಿಕಾರಿದರು.

# ಮಹನೀಯರ ವಿಷಯಗಳನ್ನು ಪಠ್ಯದಿಂದ ಕೈಬಿಡಬಾರದು

## ಹೊನ್ನಾಳಿ ಶಾಸಕ ಶಾಂತನಗೌಡ



ಹೊನ್ನಾಳಿ, ನ.16- ಚಿತ್ರದುರ್ಗದ ಮದಕರಿ ನಾಯಕರ ಆಳ್ವಿಕೆಯಲ್ಲಿ ಕೋಟೆ ಕಾವಲು ಕಾಯುವ ವೀರ ಯೋಧನ ಮಡದಿಯಾಗಿ, ವೈರಿ ಪಡೆ ಕೋಟೆಯೊಳಗೆ ನುಸುಳುವುದನ್ನು ಕಂಡು ತಾನು ಒನಕೆಯನ್ನೇ ಆಯುಧವನ್ನಾಗಿಸಿಕೊಂಡು ವೈರಿ ಪಡೆಯ ಸೈನಿಕರ ರುಂಡಗಳನ್ನು ಚಂಡಾಡಿ, ವೀರ ಮಹಿಳೆ ಎನ್ನಿಸಿಕೊಳ್ಳುವ ಜೊತೆಗೆ ಭೋಜನಕ್ಕೆ ಕುಳಿತಿದ್ದ ಪತಿಗೆ ತೊಂದರೆ ಕೊಡದೇ ಪತಿ ಧರ್ಮ ಪರಿಪಾಲಿಸಿ ವೀರ ಮತ್ತು ಸಾತ್ವಿಕ ಮಹಿಳೆಯಾಗಿ ವೀರ ವನಿತೆ ಒನಕೆ ಓಬವ್ವ ನಾಡಿನ ಜನತೆ ಸದಾ ಸ್ಮರಿಸುವಂತಾಗಿದ್ದಾಳೆ ಎಂದು ಶಾಸಕ ಡಿ.ಜಿ.ಶಾಂತನಗೌಡ ಹೇಳಿದರು.

ತಾಲ್ಲೂಕು ಕಚೇರಿ ಸಭಾಂಗಣದಲ್ಲಿ ಶನಿವಾರ ಆಯೋಜಿಸಲಾಗಿದ್ದ ವೀರ ವನಿತೆ ಒನಕೆ ಓಬವ್ವ ಜಯಂತಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಪಠ್ಯಪುಸ್ತಕಗಳಲ್ಲೂ ಕೂಡ ಇಂತಹ ಮಹನೀಯರ ಪಾಠಗಳನ್ನು ಹೆಚ್ಚು ಹೆಚ್ಚು ಸೇರಿಸಬೇಕು. ಈ ಬಗ್ಗೆ ತಾನೂ ಕೂಡ ಸರ್ಕಾರದ ಗಮನಕ್ಕೆ ತರುತ್ತೇನೆ. ಕೆಲವೊಂದು ಮಹನೀಯರ ವಿಷಯಗಳನ್ನು ಪಠ್ಯ ಪುಸ್ತಕದಿಂದ ಕೈಬಿಡಲಾಗುತ್ತಿರುವುದು ತಪ್ಪು. ಪ್ರೌಢಶಾಲೆಯ ಹಂತದವರೆಗೂ ವಿದ್ಯಾರ್ಥಿಗಳಿಗೆ ಜಯಂತಿ ಆಚರಿಸುವ ಮಹನೀಯರ ಇತಿಹಾಸ ತಿಳಿಸುವುದು ಅವಶ್ಯಕವೆಂದರು.

ಸಭೆಯಲ್ಲಿ ಉಪವಿಭಾಗಾಧಿಕಾರಿ ಹುಲ್ಲುಮನಿ ತಿಮ್ಮಣ್ಣ, ತಹಶೀಲ್ದಾರ್ ಪಟ್ಟರಾಜಗೌಡ ಮಾತನಾಡಿದರು. ಬಿಆರ್‌ಸಿ ತಿಪ್ಪೇಶಪ್ಪ ಉಪನ್ಯಾಸ ನೀಡಿದರು.

ಚಲುವಾದಿ ಮಹಾಸಭಾ ಹೊನ್ನಾಳಿ ತಾಲ್ಲೂಕು ಅಧ್ಯಕ್ಷ ಬೆನಕನಹಳ್ಳಿ ನವೀನ್, ನ್ಯಾಮತಿ ತಾಲ್ಲೂಕು ಅಧ್ಯಕ್ಷ ಕುರುವ ಮಂಜುನಾಥ್, ಚಲುವಾದಿ ಸಮಾಜದ ಮುಖಂಡರಾದ ಕುಂಬಳೂರು ಹಾಲೇಶಪ್ಪ, ಮಾಸಡಿ ನಾಗರಾಜ್, ಮಹೇಶ್ವರಪ್ಪ, ಮಾದೇನಹಳ್ಳಿ ನಾಗರಾಜ್, ತಕ್ಕನಹಳ್ಳಿ ರಂಗನಾಥ್, ಲಿಂಗಾಪುರ ಲೋಹಿತ್, ತಾ.ಪಂ. ಇಓ ರಾಘವೇಂದ್ರ, ಕೃಷಿ ಇಲಾಖೆಯ ಪ್ರತಿಮಾ, ತೋಟಗಾರಿಕೆ ರೇಖಾ, ಗ್ರೇಡ್-2 ತಹಶೀಲ್ದಾರ್ ಸುರೇಶ್, ಚಲುವಾದಿ ಸಮಾಜದ ಅನೇಕ ಮುಖಂಡರು ಇದ್ದರು.

# ವರ್ಗಾವಣೆ ಮಾಡಿಸಿಕೊಂಡರೆ ತಪ್ಪಲ್ಲ

**(1ನೇ ಪುಟದಿಂದ)** ಎನ್ನುವ ಅಧಿಕಾರಿಗೆ ಶಾಲೆಗಳನ್ನು ಗುರುತಿಸುವ ಜವಾಬ್ದಾರಿ ನೀಡಿದ್ದಾರೆ.

ಯಾರೋ ಒಂದಷ್ಟು ಶಾಲೆಗಳ ಹೆಸರನ್ನು ಬದಲಾಯಿಸಿದ ಕಾರಣ, ಸ್ಥಳೀಯರು ದೂರು ನೀಡಿದ್ದರು. ಅದಕ್ಕೆ ಯತೀಂದ್ರ ಅವರು ಇಂತಿಷ್ಟು ಹಳ್ಳಿಗಳ ಶಾಲೆಗಳಿಗೆ ಸೌಲಭ್ಯ ನೀಡುತ್ತೇವೆ ಎಂದು ಮಾತುಕೊಟ್ಟಿದ್ದು, ಅದರಂತೆ ಜನ ಸಂಪರ್ಕ ಸಭೆಯಲ್ಲಿಯೇ ಕರೆ ಮಾಡಿ ಮಾತನಾಡಿದ್ದಾರೆ. ಆಶ್ರಯ ಸಮಿತಿ ಅಧ್ಯಕ್ಷರಿಗೆ ಫಲಾನುಭವಿಗಳನ್ನು ಆಯ್ಕೆ ಮಾಡುವ ಅಧಿಕಾರವಿರುತ್ತದೆ ಎಂದವರು ಹೇಳಿದರು.

ನಾನು ಅನೇಕ ಕೆಲಸಗಳನ್ನು ನನ್ನ ಕ್ಷೇತ್ರಗಳಲ್ಲಿ ಮಾಡಲು ಆಗುವುದಿಲ್ಲ, ಅವುಗಳನ್ನು ನನ್ನ ಸಹೋದರ, ಸಂಸದ ಸುರೇಶ್ ನೋಡಿಕೊಳ್ಳುತ್ತಾರೆ. ನಮ್ಮ ಕ್ಷೇತ್ರದ ಜನ, ಮನೆ, ಹಸು, ಕುರಿ ಬೇಕು ಎಂದು ಮನವಿ ಸಲ್ಲಿಸಿರುತ್ತಾರೆ. ಆ ಅರ್ಜಿಗಳನ್ನು ನೋಡಿ ಸಹಿ ಹಾಕಿ ಕಳಿಸುತ್ತೇನೆ. ನನ್ನ ಕ್ಷೇತ್ರಗಳ ಕೆಲಸಗಳನ್ನು ಹೀಗೆಯೇ ಮಾಡುವುದು ಎಂದೂ ಅವರು ಹೇಳಿದ್ದಾರೆ.

# ಜನಪರ ಕೆಲಸ ಮಾಡಿ

**(1ನೇ ಪುಟದಿಂದ)** ಬಡವರ ಪರವಾಗಿ ಇರುವುದು ನಮ್ಮ ಪಕ್ಷ. ಪಕ್ಷದ ಹಿರಿಯರು ನನಗೆ ಹೆಚ್ಚಿನ ಜವಾಬ್ದಾರಿ ನೀಡಿದ್ದಾರೆ. ನನ್ನ ಮುಂದಿನ ಯಶಸ್ಸಿಗೆ ಶ್ರೀಗಳ ಆಶೀರ್ವಾದ ಮುಖ್ಯ ಎಂದರು.

ಮಾಜಿ ಶಾಸಕರಾದ ಎಂ.ಪಿ ರೇಣುಕಾಚಾರ್ಯ, ತಿಪ್ಪಾರೆಡ್ಡಿ, ಮಾಜಿ ಸಂಸದರಾದ ನಾರಾಯಣಸ್ವಾಮಿ, ಜನಾರ್ದನ ಸ್ವಾಮಿ, ವಿಧಾನ ಪರಿಷತ್ ಸದಸ್ಯ ಕೆ.ಎಸ್.ನವೀನ್, ಅನಿತ್‌ಕುಮಾರ್, ಜಿಲ್ಲಾ ಯುವ ಮೋರ್ಚಾ ಅಧ್ಯಕ್ಷ ಶೈಲೇಶ್‌ಕುಮಾರ್, ಮುಖಂಡರಾದ ಜಿ.ಬಿ.ತೀರ್ಥಪ್ಪ, ಕೆ.ಎನ್. ಬಿ.ಮೋಹನ್, ಸಂದೀಪ್ ಹಂಚಿನಮನೆ, ಬಸವರಾಜ್, ಪಂಚಾಕ್ಷರಿ, ತುರ್ಮ್ಕೋಸ್ ಶಿವಕುಮಾರ್, ಭರಮಸಾಗರ ಎಸ್.ಐ.ರವಿನಾಯ್ಕ್ ಇತರರು ಈ ಸಂದರ್ಭದಲ್ಲಿದ್ದರು.

# ಮುರುಘಾ ಶರಣರ ಬಿಡುಗಡೆ

**(1ನೇ ಪುಟದಿಂದ)** ಒಡನಾಡಿ ನೀಡಿದ ದೂರು ಆಧರಿಸಿ ಶರಣರು ಮತ್ತಿತರರ ವಿರುದ್ಧ ಪೋಕ್ಸೋ ಪ್ರಕರಣ ದಾಖಲಿಸಲಾಗಿತ್ತು. ಮಠದ ಶಾಲೆ ಹಾಗೂ ಹಾಸ್ಟೆಲ್‌ನಲ್ಲಿದ್ದ ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಪ್ರಕರಣ ದಾಖಲಿಸಲಾಗಿತ್ತು. ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾತಿ ನಿಂದನೆ ದೂರನ್ನೂ ದಾಖಲಿಸಲಾಗಿತ್ತು.

ನಂತರದಲ್ಲಿ ಆರೋಪಿಗಳನ್ನು ಬಂಧಿಸಿ ಕಸ್ಟಡಿಯಲ್ಲಿಡಲಾಗಿತ್ತು. ಎರಡು ತಿಂಗಳ ನಂತರ ಇನ್ನಿಬ್ಬರು ವಿದ್ಯಾರ್ಥಿನಿಯರು ನೀಡಿದ ದೂರು ಆಧರಿಸಿ ಮತ್ತೊಂದು ಪ್ರಕರಣ ದಾಖಲಿಸಲಾಗಿತ್ತು.

# ಸಂಘಟಿತ ಅಪರಾಧ ವ್ಯಾಪ್ತಿಗೆ

**(1ನೇ ಪುಟದಿಂದ)** ಗುರುತಿಸಲಾಗಿದೆ. ಗ್ಯಾಂಗ್, ಮಾಫಿಯಾ, ಅಪರಾಧ ಗುಂಪು, ಅಪರಾಧ ತಂಡಗಳು ಹಾಗೂ ಗಂಭೀರ ಅಪರಾಧಗಳಂತಹ ಪದಗಳನ್ನು ವ್ಯಾಖ್ಯಾನಿಸಬೇಕು. ಸ್ಪಷ್ಟ ವ್ಯಾಖ್ಯಾನ ಇಲ್ಲದಿದ್ದರೆ ಅನಿಶ್ಚಿತತೆ ಉಂಟಾಗುತ್ತದೆ ಎಂದು ಸಮಿತಿ ಶಿಫಾರಸ್ಸಿನಲ್ಲಿ ತಿಳಿಸಿದೆ.

# ಅಡಮಾನ ರಹಿತ ಸಾಲಗಳಿಗೆ ಕಡಿವಾಣ

**(1ನೇ ಪುಟದಿಂದ)** ಎನ್.ಬಿ.ಎಫ್.ಸಿ.ಗಳಿಗೆ ರಿಸರ್ವ್ ಬ್ಯಾಂಕ್ ತಿಳಿಸಿದೆ.

ಆದರೆ, ಈ ನಿರ್ಬಂಧ ಗೃಹ ಸಾಲ, ಶಿಕ್ಷಣ ಸಾಲ, ವಾಹನ ಸಾಲ ಹಾಗೂ ಬಂಗಾರದ ಸಾಲಗಳಿಗೆ ಅನ್ವಯವಾಗುವುದಿಲ್ಲ.

ಗ್ರಾಹಕರ ಸಾಲ ವಲಯದಲ್ಲಿ ಬೆಳವಣಿಗೆ ಹೆಚ್ಚಾಗಿರುವುದರ ಬಗ್ಗೆ ರಿಸರ್ವ್ ಬ್ಯಾಂಕ್ ಗವರ್ನರ್ ಶಕ್ತಿಕಾಂತ ದಾಸ್ ಈ ಹಿಂದೆ ಆಕ್ಷೇಪಿಸಿದ್ದರು.

# ರಾಣೇಬೆನ್ನೂರು - ಶಿಕಾರಿಪುರ ರೈಲು ಮಾರ್ಗದ ಕೆಲಸ ಆರಂಭ

**(1ನೇ ಪುಟದಿಂದ)** ಸೇರಿದಂತೆ ತಲಾ ಒಂದೂಕಾಲು ಲಕ್ಷ ಹಣ ಅವರ ಬ್ಯಾಂಕ್ ಖಾತೆಗಳಿಗೆ ಜಮೆ ಆಗಲಿದೆ ಎಂದು ರಾಘವೇಂದ್ರ ಹೇಳಿ, ಸರ್ಕಾರ ಹಾಗೂ ಭಕ್ತರ ದೇಣಿಗೆಯಿಂದ ನಿರ್ಮಾಣಗೊಂಡ ಈ ಮಠ ಸಮಗ್ರ ಅಭಿವೃದ್ಧಿಯಾಗಲಿ ಎಂದರು.

ಹಳ್ಳಿಗೆ ಏಕರಾತ್ರಿ, ಪಟ್ಟಣಕ್ಕೆ ಪಂಚರಾತ್ರಿ ಸಂಚರಿಸಿ ಭಕ್ತರ ಬದುಕಿಗೆ ಮಾರ್ಗದರ್ಶನ ನೀಡುತ್ತಾ ಅವರನ್ನ ಸನ್ಮಾರ್ಗದಲ್ಲಿ ನಡೆಸಿ, ಆರೋಗ್ಯಕರ ಸಮಾಜ ನೀಡುವಲ್ಲಿ ಮಠಗಳು ಅನಾದಿ ಕಾಲದಿಂದಲೂ ಶ್ರಮಿಸುತ್ತಿವೆ. ಈ ದಿಶೆಯಲ್ಲಿ ದಿಂಡದಹಳ್ಳಿಯ ಶಿವಾನಂದ ಶ್ರೀಗಳ ಶ್ರಮ ಅಪಾರವಾದುದು ಎಂದು ಸಮಾರಂಭದ ಸಾನ್ನಿಧ್ಯ ವಹಿಸಿದ್ದ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ನುಡಿದರು.



ಶ್ರೀ ಮರುಳಸಿದ್ದೇಶ್ವರ, ಶ್ರೀ ನಾಗದೇವತೆ, ಶ್ರೀ ನವದುರ್ಗೆಯರು, ಶ್ರೀ ವೀರಭದ್ರೇಶ್ವರ, ಶ್ರೀ ವಿನಾಯಕ ಹಾಗೂ ನವಗ್ರಹ ಮೂರ್ತಿಗಳ ಪ್ರತಿಷ್ಠಾಪನೆಯಾಗಿದ್ದು ಭಕ್ತರು ತಮಗಿಷ್ಟವಾದ ದೇವರ ಆರಾಧನೆ ಮಾಡಿ, ತಮ್ಮ ಬದುಕು ಹಸನಾಗಿಸಿಕೊಳ್ಳಬಹುದು ಎಂದು ಮಠದ ಪೀಠಾಧಿಪತಿ ಪಶುಪತಿ ಶಿವಾನಂದ ಶ್ರೀಗಳು ಹೇಳಿದರು.

ಶನೇಶ್ಚರ ಮಠದ ಶಿವಯೋಗಿ ಶ್ರೀಗಳು, ರಟ್ಟಿಹಳ್ಳಿ ಕಬ್ಬಿಣಕಂತಿ ಮಠದ ಶಿವಲಿಂಗ ಶಿವಾಚಾರ್ಯ ಶ್ರೀಗಳು, ನಾಗವಂದ ಶಿವಯೋಗಿ ಶ್ರೀಗಳು, ಮಣಕೂರ ಮಲ್ಲಿಕಾರ್ಜುನ ಶ್ರೀಗಳು, ಮುಖಂಡರುಗಳಾದ ಕೆ.ಶಿವಲಿಂಗಪ್ಪ, ಎಸ್.ಎಸ್. ರಾಮಲಿಂಗಣ್ಣನವರ, ಸಂತೋಷ ಪಾಟೀಲ, ಸಿದ್ದಪ್ಪ ಚಿಕ್ಕಬಿದರಿ, ಪ್ರಭು ಕರ್ಜಗಿಮಠ, ಬಿ. ಎನ್.ಪಾಟೀಲ, ರಾಜು ಮೋಟಗಿ ಮತ್ತಿತರರಿದ್ದರು.

# ಸ್ಪೇನ್ ಸರ್ಕಾರ ರಚಿಸಲಿರುವ ಸ್ಯಾಂಚೆಜ್

ನವದೆಹಲಿ, ನ. 16 – ಸ್ಪೇನ್‌ನ ಹಂಗಾಮಿ ಪ್ರಧಾನ ಮಂತ್ರಿ ಪೆಡ್ರೋ ಸ್ಯಾಂಚೆಜ್ ಅವರು ನೂತನ ಸರ್ಕಾರ ರಚಿಸಬೇಕೆಂದು ಬಹುಮತದ ಶಾಸಕರು ಬೆಂಬಲ ನೀಡಿದ್ದಾರೆ. ಸಂಸತ್ತಿನಲ್ಲಿ ನಡೆದ ಮತದಾನದಲ್ಲಿ ಸಮಾಜವಾದಿ ನಾಯಕ ಸ್ಯಾಂಚೆಜ್ ಅವರು ಬೆಂಬಲ ಗಳಿಸಿದ್ದಾರೆ.

ಶಾಸನ ಸಭೆಯ 350 ಶಾಸಕರ ಪೈಕಿ 179 ಶಾಸಕರು ಸ್ಯಾಂಚೆಜ್ ಬೆಂಬಲಿಸಿದ್ದಾರೆ.

ಪ್ರಧಾನಿ ಹುದ್ದೆಗೆ ಬರುವ ಸಲುವಾಗಿ ಪ್ರತ್ಯೇಕತಾವಾದಿಗಳಾದ ಕ್ಯಾಟಲೊನಿಯಾ ಗುಂಪಿಗೆ ಕ್ಷಮಾದಾನ ನೀಡಲು ಸ್ಯಾಂಚೆಜ್ ನಿರ್ಧರಿಸಿದ್ದರು. ಇದು ಸಾಕಷ್ಟು ಚರ್ಚೆಗೂ ಕಾರಣವಾಗಿತ್ತು.


**ಉದ್ಯೋಗಾವಕಾಶ**
ನಮ್ಮ ಸಂಸ್ಥೆಯಿಂದ ಯುವತಿಯರಿಗೆ & ಮಹಿಳೆಯರಿಗೆ ಪ್ರಾಯೋಗಿಕ ತರಬೇತಿಯನ್ನು ನೀಡಿ ಹೆಸರಾಂತ ಕಂಪನಿಯಾದ ಸಂಜೀವಿನಿ ಹೆಲ್ತ್‌ಕೇರ್ ಸಂಸ್ಥೆಯಲ್ಲಿ ಉದ್ಯೋಗಾವಕಾಶ ನೀಡಲಾಗುತ್ತದೆ. ಸಂಬಳ, ಉಚಿತ ಊಟ, ವಸತಿಯೊಂದಿಗೆ 15000 ರಿಂದ 30,000, ವಿದ್ಯಾರ್ಹತೆ : 7ನೇ, 10ನೇ, ಪಿಯುಸಿ, ಡಿಗ್ರಿ, ಜಿಎನ್ಎಂ., ಎಎನ್ಎಂ
91486 83185, 95355 32369

**ಸೈಟುಗಳು ಮಾರಾಟಕ್ಕಿವೆ**
ಹೊಸ ಕುಂದುವಾಡ ಹತ್ತಿರ ಸುಶಿ ಹೋಟೆಲ್ ಹಿಂಭಾಗ, ಹೊಸ ಬಡಾವಣೆಯಲ್ಲಿ 30x50 ಪಶ್ಚಿಮ-ದಕ್ಷಿಣ ಕಾರ್ನರ್, 30x50 ಪಶ್ಚಿಮ, 30x50 ಉತ್ತರ.
ಮಧ್ಯವರ್ತಿಗಳಿಗೆ ಅವಕಾಶವಿಲ್ಲ
97436 61236, 99010 41155

**ಕೆಲಸಕ್ಕೆ ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕಂಪ್ಯೂಟರ್ ಬಿಲ್ಲಿಂಗ್ ಮಾಡಲು ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಪರ್ಕಿಸಿ :
90367 34919

**ಸೈಟುಗಳು ಮಾರಾಟಕ್ಕಿವೆ**
ಶಿವ-ಪಾರ್ವತಿ ಬಡಾವಣೆಯಲ್ಲಿ 35x60 ಪೂರ್ವ-ಉತ್ತರ ಕಾರ್ನರ್, 30x50 ಪೂರ್ವ, 30x47 ಪೂರ್ವ, ವಿನಾಯಕ ಬಡಾವಣೆಯಲ್ಲಿ LIC ಕಾಲೋನಿಯಲ್ಲಿ 40x60 ಪೂರ್ವ, 30x50 ಪೂರ್ವ, 50x40 ಪಶ್ಚಿಮ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಬೇಕಾಗಿದ್ದಾರೆ**
ಕೆಲಸಕ್ಕೆ ಸಪ್ಲೈಯರ್ ಕ್ಲೀನರ್ ಬೇಕಾಗಿದ್ದಾರೆ.
9986117995

**ಸೈಟುಗಳು ಮತ್ತು ಮನೆಗಳು ಮಾರಾಟಕ್ಕಿವೆ**
ಡಾಲರ್ಸ್ ಕಾಲೋನಿಯಲ್ಲಿ ಬಂಗಲೆ ಇದೆ, 50x70 ಪಶ್ಚಿಮ ಮತ್ತು ದಕ್ಷಿಣ ಕಾರ್ನರ್ ರಶ್ಮಿ ಸ್ಕೂಲ್ ಹಿಂಭಾಗ 30x60 ಪೂರ್ವ, ಎಂ.ಸಿ.ಸಿ. 'ಎ' ಬ್ಲಾಕ್ 44x60.
ಯಲ್ಲೋಜಿರಾವ್ S ಏಜೆಂಟರು
97418 11694

**ಬೇಕಾಗಿದ್ದಾರೆ**
ಬೆಳ್ಳಿ ಬಂಗಾರದ ಅಂಗಡಿಗೆ ಸೇಲ್ಸ್‌ಮ್ಯಾನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಅನುಭವವುಳ್ಳವರಿಗೆ ಆದ್ಯತೆ
98444 44772

**2 ಬೆಡ್ ರೂಮ್ ಮನೆ ಲೀಸ್‌ಗೆ ಇದೆ**
ರಂಗನಾಥ ಬಡಾವಣೆ ಹದಡಿ ರಸ್ತೆಗೆ ಹತ್ತಿರದ ಮನೆ ನಂ.775/2 ಬೋರ್ ವೆಲ್ ಮತ್ತು ಕಾರ್ಪೋರೇಷನ್ ನೀರಿನ ಸೌಕರ್ಯದ ಉತ್ತರ ದಿಕ್ಕಿನ ವಾಸ್ತು ಮನೆ, ಮೊದಲನೆ ಮಹಡಿ ಇದೆ. ಸಂಪರ್ಕಿಸಿ :
91085 42929

**ಬೇಕಾಗಿದ್ದಾರೆ**
ದಾವಣಗೆರೆ ಬಾರ್ & ರೆಸ್ಟೋರೆಂಟ್‌ನಲ್ಲಿ
* ಸಪ್ಲೈಯರ್
* ಆಲ್‌ರೌಂಡ್ ಕುಕ್
* ಕಂಪ್ಯೂಟರ್ ಬಿಲ್ಲಿಂಗ್ ಆಪರೇಟರ್
ಕೆಲಸ ಮಾಡಲು ಬೇಕಾಗಿದ್ದಾರೆ.
80889 56656

**ಸೈಟ್ ಮಾರಾಟಕ್ಕಿದೆ**
ಪೂರ್ವ/ಪಶ್ಚಿಮ, 40x32 ಶಿವ ಪಾರ್ವತಿ ಬಡಾವಣೆ, ಶಾಮನೂರು.
Price - 4000 / sq.ft
81236 83761

**HOUSE FOR RENT**
1BHK, 2BHK, 3BHK Vidyanagar, LIC Colony, S.S. Layout.
Dakshith Iynhalli
77955 06795

**ಸೈಟು ಮಾರಾಟಕ್ಕಿದೆ**
ಕೆ.ಬಿ ಬಡಾವಣೆಯಲ್ಲಿ ನಾಯ್ಡು ಹೋಟೆಲ್ ಹತ್ತಿರ, 19x85 South, Rate : 6000/-
Dakshith Iynhalli
77955 06795

**BUSINESS**
PART TIME BUSINESS OPPORTUNITY & DISTRIBUTORS REQUIRED
CONTACT :
78294 11805

**ಮನೆಗಳು ಬಾಡಿಗೆಗೆ ಇವೆ**
ಸಿಂಗಲ್ ಬೆಡ್ ರೂಂ ಮತ್ತು ಡಬಲ್ ಬೆಡ್ ರೂಂ ಮನೆಗಳು, 24 ಗಂಟೆ ಬೋರ್‌ವೆಲ್ ಮತ್ತು ಕಾರ್ಪೊರೇಷನ್ ನೀರಿನ ಸೌಲಭ್ಯವುಳ್ಳ ಮನೆಗಳು ಇವೆ. ವಿಳಾಸ : ಶಿವಕುಮಾರಸ್ವಾಮಿ ಬಡಾವಣೆ, 1ನೇ ಹಂತ, ಕೆಎಸ್ಎಸ್ ಕಾಲೇಜು ಹತ್ತಿರ, ದಾವಣಗೆರೆ - 577005. ಸಂಪರ್ಕಿಸಿ :
87928 59141, 70198 75783

**ಬೇಕಾಗಿದ್ದಾರೆ**
ಎಂಇಎಸ್ ಶಿಕ್ಷಣ ಸಂಸ್ಥೆಗೆ ನುರಿತ ಆಯಾ ಕೆಲಸಕ್ಕೆ ಬೇಕಾಗಿದ್ದಾರೆ.
ಸಂಪರ್ಕಿಸಿ : ಎಂಇಎಸ್ ಕಾನ್ವೆಂಟ್ ಆಂಜನೇಯ ಬಡಾವಣೆ, 9ನೇ ಕ್ರಾಸ್, ದಾವಣಗೆರೆ.
98804 36414, 98800 30171

**ಸೆಕ್ಯೂರಿಟಿ ಗಾರ್ಡ್ ಬೇಕಾಗಿದ್ದಾರೆ**
ಊಟ, ವಸತಿಯ ಸೌಲಭ್ಯವಿದೆ
ಸಂಬಳ-8000-13000
PH : +9188845 95873
97311 55583

**ಸೇಲ್ಸ್ ಪ್ರಮೋಟರ್ಸ್ ಬೇಕಾಗಿದ್ದಾರೆ**
V! Vodafone Ideaಗೆ ಸೇಲ್ಸ್ ಪ್ರಮೋಟರ್ಸ್ ಬೇಕಾಗಿದ್ದಾರೆ. ಆಕರ್ಷಕ ಸಂಬಳ + ಇನ್‌ಸೆಂಟೀವ್ಸ್ + ESI, PF ಸೌಲಭ್ಯ ಇರುತ್ತದೆ.
ಸಂಪರ್ಕಿಸಿ. ಸಂಜನ ಎಂಟರ್ ಪ್ರೈಸಸ್ V! ಡಿಸ್ಟ್ರಿಬ್ಯೂಟರ್ಸ್
91410 05356, 98449 15768

**ತೊಗಟವೀರ ಹಾಸ್ಟೆಲ್ ಬಾಡಿಗೆಗೆ ಇದೆ**
Ground Floor : 3204 Sqft.
First Floor : 5260 Sqft.
Second Floor : 5260 Sqft.
Contact : 83108 95113
94483 38550

**ಬೇಕಾಗಿದ್ದಾರೆ**
ಸಿದ್ದವೀರಪ್ಪ ಬಡಾವಣೆ ಮೂರನೇ ಕ್ರಾಸ್ ವಾಸಿವಾಗಿರುವ ಮನೆಯಲ್ಲಿ ಸಸ್ಯಹಾರಿ ಅಡುಗೆ ಮಾಡುವ ಆಯಾ ಬೇಕಾಗಿದ್ದಾರೆ ಕೂಡಲೇ ಸಂಪರ್ಕಿಸಿ
98804 36414, 98451 40948

**ತಕ್ಷಣ ಬೇಕಾಗಿದ್ದಾರೆ**
ಅನುಭವವುಳ್ಳ ಬೆಣ್ಣೆ ದೋಸೆ ಭಟ್ಟರು ಬೆಂಗಳೂರಿನಲ್ಲಿ ಕೆಲಸ ಮಾಡಲು ತಕ್ಷಣ ಬೇಕಾಗಿದ್ದಾರೆ. ಅನುಭವಕ್ಕೆ ತಕ್ಕ ವೇತನ ಹಾಗೂ ಉಚಿತ ವಸತಿ ಸೌಲಭ್ಯ ನೀಡಲಾಗುವುದು. ಸಂಪರ್ಕಿಸಿ.
86609 35720

**ಮನೆಯ ರೀ ಪೇಂಟಿಂಗ್**
ಹಳೆಯ ಮತ್ತು ಹೊಸದಾದ ಮನೆ, ಆಫೀಸ್, ಗೋಡೌನ್, ಫ್ಯಾಕ್ಟರಿಗಳಿಗೆ ಕಡಿಮೆ ಖರ್ಚಿನಲ್ಲಿ ಒಳ್ಳೆಯ ಪೇಂಟಿಂಗ್ ಮಾಡಿಸಿಕೊಡಲಾಗುವುದು.
ಸಂಪರ್ಕಿಸಿ: 72046 33302

**ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ.
10,000 ರಿಂದ 15,000 ಸಾವಿರ ಸಂಬಳ.
91106 21233

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ - ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಬೇಕಾಗಿದ್ದಾರೆ**
ನಮ್ಮ ಸಂಸ್ಥೆಯ ತಯಾರಿಕಾ ವಿಭಾಗದಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿ ಬೇಕಾಗಿದ್ದಾರೆ.
ವಿದ್ಯಾಭ್ಯಾಸ : ಎಸ್.ಎಸ್.ಎಲ್.ಸಿ.
ವಯಸ್ಸು : 25 ರಿಂದ 40ರ ಒಳಗೆ.
ಕೆಲಸದ ಸಮಯ : ಬೆ. 10 ರಿಂದ ಸಂ. 8.30
ಪರಿಮಳ ಕಾಫಿ ಕಂಪನಿ, ಮಂಡಿಪೇಟೆ, ದಾವಣಗೆರೆ
94482 72734

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳು ಬೇಕಾಗಿದ್ದಾರೆ. ಸಂಬಳದೊಂದಿಗೆ, ಊಟ-ವಸತಿ ಸೌಲಭ್ಯವುಂಟು. ಸಂಪರ್ಕಿಸಿ :
90367 34919

**WANTED**
Fresher's & Learner's Required for Auditor Office
Contact :
77607 40760

**WANTED**
X-Ray Techninician (Part Time)
CONTACT :
SHILPA DIAGNOSTICS PVT LTD., MCC B BLOCK, NEAR SWIMMING POOL, DAVANGERE.
98440 65638

**2 BHK ಮನೆ ಲೀಸ್‌ಗೆ ಇದೆ**
ಶಿವಕುಮಾರಸ್ವಾಮಿ ಬಡಾವಣೆಯಲ್ಲಿ ಡಾಬಾ ಸ್ಟಾಪ್, ದಾವಣಗೆರೆ. ಬೋರ್‌ವೆಲ್ ನೀರಿನ ವ್ಯವಸ್ಥೆ ಇದೆ.
72042 66144

**ಬಿಲ್ಡಿಂಗ್ ಬಾಡಿಗೆಗಿದೆ**
ದಾವಣಗೆರೆ ಸ್ಟೇಡಿಯಂ ರೋಡ್ ಹತ್ತಿರ, 500 ಚ.ಅ. ಅಳತೆಯ ನೆಲಮಹಡಿ, 1ನೇ ಮಹಡಿ, 2ನೇ ಮಹಡಿ ಬಿಲ್ಡಿಂಗ್ ಬಾಡಿಗೆಗಿದೆ
94482 72734

**ರಕ್ತ ದಾನ ಶ್ರೇಷ್ಠ ದಾನ**

**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**
ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.

ದಾವಣಗೆರೆ : 2 & 3 ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಐ‌ಯ್. ದೊಡ್ಡಮನಿ (G.R.No.8969)
ಡಮ್ಮಣಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710

**ಹುಡುಗರು ಬೇಕಾಗಿದ್ದಾರೆ**
ಟಾಟಾ ಪವರ್ ಸೋಲಾರ್ ಮಾರ್ಕೆಟಿಂಗ್ ಮಾಡಲು ಪಿಯುಸಿ ಮುಗಿಸಿದ ಹುಡುಗರು ಬೇಕಾಗಿದ್ದಾರೆ.
M/S ಬಸವಶ್ರೀ ಸೋಲಾರ್ ಟೆಕ್ನಾಲಜೀಸ್ ನಂ. 43H, ಎಸ್.ಜೆ.ಜೆ.ಎಂ. ಕಾಂಪ್ಲೆಕ್ಸ್, ಜಯದೇವ ಸರ್ಕಲ್, ಹದಡಿ ರಸ್ತೆ, ದಾವಣಗೆರೆ.
99001 42052
ಸಮಯ : ಮಧ್ಯಾಹ್ನ 1 ರಿಂದ 5ರವರೆಗೆ

**ಬೇಕಾಗಿದ್ದಾರೆ**
ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್, 6ನೇ ಕ್ರಾಸ್, ಕೊಂಡಜ್ಜಿ ರಸ್ತೆಯಲ್ಲಿರುವ ನಂದಗೋಕುಲ ಆಂಗ್ಲ ಮಾಧ್ಯಮ ಶಾಲೆಗೆ ಜವಾನರು (ಮಹಿಳೆ) ಬೇಕಾಗಿದ್ದಾರೆ. ಪಿ.ಎಫ್. ಮತ್ತು ESI ಸೌಲಭ್ಯವಿದೆ. ಆಯ್ಕೆಯಾದ ಅಭ್ಯರ್ಥಿಯ ಒಂದು ಮಗುವಿಗೆ ವಿದ್ಯಾಭ್ಯಾಸ ಸೌಲಭ್ಯವಿರುತ್ತದೆ.
99640 17729

**ಮನೆ ಮಾರಾಟಕ್ಕಿದೆ**
ದಾವಣಗೆರೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಶ್ರೀ ಸಿದ್ದವೀರಪ್ಪ ಬಡಾವಣೆ, 8ನೇ ಕ್ರಾಸ್‌ನಲ್ಲಿರುವ #2001ರಲ್ಲಿ 30x46 ಅಳತೆಯಲ್ಲಿರುವ ಮನೆಗಳು ಮಾರಾಟಕ್ಕಿರುತ್ತವೆ. ಸಂಪರ್ಕಿಸಿ :
ಶ್ರೀ ಜಿ.ಹೆಚ್. ಮಂಜುನಾಥ್
88849 62111

**ಶಿಕ್ಷಕರು ಬೇಕಾಗಿದ್ದಾರೆ**
ದಾವಣಗೆರೆಯ ಹಳೆಯ ಭಾಗದಲ್ಲಿರುವ ಪ್ರತಿಷ್ಠಿತ ಶಾಲೆಗೆ ಅರ್ಹತೆ ಇರುವ ಹಾಗೂ ನುರಿತ ಶಿಕ್ಷಕರು ಬೇಕಾಗಿದ್ದಾರೆ.
1) ಪ್ರಾಥಮಿಕ ಶಾಲಾ ಶಿಕ್ಷಕರು (ಕನ್ನಡ) - ಬಿ.ಎ,ಡಿ.ಇಡಿ
2) ಕ್ರಾಫ್ಟ್ ಶಿಕ್ಷಕರು - ಬಿಎಫ್‌ಎ/ಎಂಎಫ್‌ಎ
3) ದೈಹಿಕ ಶಿಕ್ಷಕರು - ಬಿಪಿ.ಇಡಿ. ಆಸಕ್ತರು ಸಂಪರ್ಕಿಸಿ :
98440 22959, 99640 23607
99021 50005, 08192 277799

**ಕೆಲಸಕ್ಕೆ ಬೇಕಾಗಿದ್ದಾರೆ**
Tally ಅನುಭವ ಇರುವ ಹುಡುಗಿಯರು ಮತ್ತು ಆಫೀಸ್ ಕೆಲಸಕ್ಕೆ ಹುಡುಗರು ಬೇಕಾಗಿದ್ದಾರೆ
ಕಿಸಾನ್ ವರ್ಲ್ಡ್
ವಾಣಿ ರೈಸ್ ಮಿಲ್ ಎದುರು, ಹದಡಿ ರೋಡ್, ದಾವಣಗೆರೆ.
97433 83672

**ಕಂಪ್ಯೂಟರ್ ಆಪರೇಟರ್ ಬೇಕಾಗಿದ್ದಾರೆ**
Tally ಬಲ್ಲವರಿಗೆ ಆದ್ಯತೆ.
ರಾಮಧೂತ ಎಂಟರ್ ಪ್ರೈಸಸ್
97388 27452
74110 25934

**ಬೇಕಾಗಿದ್ದಾರೆ**
ಮಹಿಳೆಯರು ಬಟ್ಟೆ ಅಂಗಡಿಯಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. ವಯಸ್ಸು 25 ರಿಂದ 35 ವರ್ಷದವರು.
ಮೆರಾಕಿ ಬುಟಿಕ್, 4ನೇ ಮೇನ್ ರೋಡ್, ವಿದ್ಯಾನಗರ, ದಾವಣಗೆರೆ.
97425 35932

**ಮನೆ ಟ್ಯೂಷನ್**
ನಾವು ನಿಮ್ಮ ಮನೆಯಲ್ಲೇ ನಿಮ್ಮ ಮಕ್ಕಳಿಗೆ ಟ್ಯೂಷನ್ ಮಾಡುತ್ತೇವೆ. 1 ರಿಂದ ಎಸ್.ಎಸ್.ಎಲ್.ಸಿ. ವರೆಗೆ
95356 11761

**Admission Open For ಬಿಎಸ್ಸಿ ನರ್ಸಿಂಗ್**
TMAE SOCIETY'S
SCS INSTITUTE OF NURSING SCIENCES
ಹರಪನಹಳ್ಳಿ-583131
ಕೆಲವೇ ಸೀಟುಗಳು ಮಾತ್ರ
9448080626, 9902378278
College : 9448026786, 9380131323

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7 ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

**ಮನೆ ಮಾರಾಟಕ್ಕಿದೆ**
ಎಸ್.ಎಸ್. ಬಡಾವಣೆ ಬಿ ಬ್ಲಾಕ್ ಡೋರ್ ನಂ. 2048/18, 4ನೇ ಮೇನ್, 14ನೇ ಕ್ರಾಸ್ 30x40 ಅಳತೆಯ ಗ್ರೌಂಡ್ ಫ್ಲೋರ್ ಹಾಗೂ ಮೊದಲನೇ ಮಹಡಿ ಇರುವ ಮುನ್ಸಿಪಲ್ ಹಾಗೂ ಬೋರ್ ನೀರಿನ ಸೌಕರ್ಯವಿರುವ ಸುಸಜ್ಜಿತವಾದ ಮನೆ ಮಾರಾಟಕ್ಕಿದೆ. ಸಂಪರ್ಕಿಸಿ :
96114 81408

**ಸೈಟುಗಳು ಮಾರಾಟಕ್ಕಿವೆ**
ಹರಪನಹಳ್ಳಿಯಲ್ಲಿ ಕಡಿಮೆ ಬೆಲೆಗೆ ಸೈಟುಗಳು ಮಾರಾಟಕ್ಕಿವೆ
94838 62779

**ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗು ಕಾಫಿ ಮಾಡುವವರು ಬೇಕಾಗಿದ್ದಾರೆ.
ಸ್ಥಳ: 1946 ಪ್ರಕಾಶ್ ಕಾಫಿ ವರ್ಕ್ಸ್ ಮಾಮಾಸ್ ಜಾಯಿಂಟ್ ರೋಡ್ ಮತ್ತು ಪ್ರಕಾಶ್ ಕಾಫಿ ವರ್ಕ್ಸ್ ವಿಜಯಲಕ್ಷ್ಮಿ ರಸ್ತೆ
99004 38052, 97401 53513

**ಬೆಂಗಳೂರಿನಲ್ಲಿ ಹೌಸ್‌ಕೀಪಿಂಗ್ ಕೆಲಸಕ್ಕೆ ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಹೌಸ್ ಕೀಪಿಂಗ್ ನೆಲ, ಪಾತ್ರೆ, ಬಟ್ಟೆ ಕ್ಲೀನಿಂಗ್ ಹುಡುಗರು, 10 ಗಂಟೆ ಕೆಲಸ ಸಂಬಳ 10,500/- ಓವರ್ ಟೈಂ ಕೆಲಸಕ್ಕೆ ಹೆಚ್ಚಿಗೆ ಹಣ, ಊಟ, ವಸತಿ ಉಚಿತ, ವಯಸ್ಸು 18 ರಿಂದ 30,
ರಮೇಶ್, 97400 98047

## ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಆಗ್ರಹ ಸಹಿ ಸಂಗ್ರಹ ಅಭಿಯಾನಕ್ಕೆ ಚಾಲನೆ

ದಾವಣಗೆರೆ, ನ.16- ರಾಜ್ಯದಲ್ಲಿ ರಾಷ್ಟ್ರೀಯ ಶಿಕ್ಷಣ ನೀತಿ ಜಾರಿಗೆ ಆಗ್ರಹಿಸಿ ಬಿಜೆಪಿ ಶಿಕ್ಷಣ ಸಂಸ್ಥೆ, ಸಾರ್ವಜನಿಕ ಸಂಘ-ಸಂಸ್ಥೆಗಳ ಸಹಯೋಗದಲ್ಲಿ ಸಹಿ ಸಂಗ್ರಹ ಅಭಿಯಾನವನ್ನು ಇಂದು ಆರಂಭಿಸಿದ್ದು ಇದೇ ದಿನಾಂಕ 30 ರವರೆಗೆ ಹಮ್ಮಿಕೊಳ್ಳಲಾಗಿದೆ ಎಂದು ವಿಧಾನ ಪರಿಷತ್ ಮಾಜಿ ಮುಖ್ಯ ಸಚೇತಕ ಡಾ. ಎ.ಹೆಚ್. ಶಿವಯೋಗಿಸ್ವಾಮಿ ಸುದ್ದಿ ಗೋಷ್ಠಿಯಲ್ಲಿ ತಿಳಿಸಿದರು.


> ರಾಜ್ಯದಲ್ಲಿ ಬಿ.ವೈ. ವಿಜಯೇಂದ್ರ ಬಿಜೆಪಿಯ ನೂತನ ಸಾರಥ್ಯ ವಹಿಸಿಕೊಂಡಿದ್ದು, ಅವರ ಮುಖಂಡತ್ವದಲ್ಲಿ ಪಕ್ಷ ಸಂಘಟನೆ ಬಲಿಷ್ಠವಾಗಲಿದೆ. ಪಕ್ಷದಲ್ಲಿ ಸಣ್ಣಪುಟ್ಟ ಅಸಮಾಧಾನಗಳಿಗೆ ತೆರೆ ಎಳೆಯಲಾಗುವುದು ಎಂದು ಬಿಜೆಪಿ ಜಿಲ್ಲಾಧ್ಯಕ್ಷ ವೀರೇಶ್ ಹನಗವಾಡಿ ಹೇಳಿದರು.
>
> ಲೋಕಸಭೆ ಚುನಾವಣೆಯಲ್ಲಿ ಅಧಿಕ ಸ್ಥಾನಗಳನ್ನು ಗೆಲ್ಲುವ ಮೂಲಕ ಮತ್ತೊಮ್ಮೆ ನರೇಂದ್ರ ಮೋದಿಯವರನ್ನು ಪ್ರಧಾನಿಯನ್ನಾಗಿ ಮಾಡುವುದು ಪಕ್ಷದ ಗುರಿಯಾಗಿದೆ ಎಂದರು.
>
> ಪಕ್ಷದಲ್ಲಿನ ಭಿನ್ನಾಭಿಪ್ರಾಯಗಳನ್ನು ಬದಿಗೊತ್ತಿ ಪಕ್ಷ ಸಂಘಟನೆ ಕಡೆ ಹೆಚ್ಚು ಒತ್ತು ನೀಡಿ, ಕರ್ನಾಟಕದಲ್ಲಿ 28 ಸ್ಥಾನಗಳನ್ನು ಗೆಲ್ಲುವುದು ನಮ್ಮ ಗುರಿಯಾಗಿದೆ ಎಂದು ಹೇಳಿದರು.

ಯಾವುದೇ ಒಂದು ರಾಷ್ಟ್ರ ಸ್ವಾತಂತ್ರ್ಯ ಪಡೆದ ನಂತರ ಶಿಕ್ಷಣ ನೀತಿ ರೂಪಿಸುವುದು ಸಹಜ. ಆದರೆ ನಮ್ಮ ದೇಶದಲ್ಲಿ ಇಂದಿರಾಗಾಂಧಿ ಮತ್ತು ರಾಜೀವ್‌ಗಾಂಧಿ ಅವರ ಆಡಳಿತದ ಅವಧಿಯಲ್ಲಿ ಶಿಕ್ಷಣ ನೀತಿ ಅನುಷ್ಠಾನಗೊಳಿಸಲಾಗಿತ್ತು. ಆಗ ವಿರೋಧಿಸದವರು ಈಗ ರಾಜ್ಯದಲ್ಲಿ ವಿರೋಧಿಸುತ್ತಿರುವುದು ಏಕೆ ? ಎಂದು ಪ್ರಶ್ನಿಸಿದರು.

ಸಾಕಷ್ಟು ಅಧ್ಯಯನ ಮಾಡಿದ ನಂತರವೇ ಕೇಂದ್ರ ಸರ್ಕಾರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಜಾರಿಗೆ ತಂದಿದ್ದು, ಅದರಲ್ಲೂ ಕರ್ನಾಟಕದಲ್ಲಿ ಬಸವರಾಜ ಬೊಮ್ಮಾಯಿ ಅವರ ಆಡಳಿತದಲ್ಲಿ ಈ ನೀತಿಯನ್ನು ಜಾರಿಗೊಳಿಸಿದ್ದರು. ಉತ್ತಮ ಅಂಶಗಳನ್ನು ಒಳಗೊಂಡಿರುವ ಎನ್‌ಇಪಿಯನ್ನು ರಾಜಕೀಯ ಕಾರಣಕ್ಕಾಗಿ ತಿರಸ್ಕರಿಸಿರುವುದು ಸರಿಯಲ್ಲ ಎಂದರು. ರಾಜ್ಯದ ಕಾಂಗ್ರೆಸ್ ಸರ್ಕಾರ ಎಸ್‌ಇಪಿ (ರಾಜ್ಯ ಶಿಕ್ಷಣ ನೀತಿ) ಜಾರಿಗೆ ತರುವುದಾಗಿ ಹೇಳಿದೆಯಾದರೂ ಇನ್ನೂ ಅನುಷ್ಠಾನಗೊಳಿಸಿಲ್ಲ. ತರುವುದಾದರೆ, ತಜ್ಞರ ತಂಡವನ್ನು ರಚಿಸಿ, ಅದರ ಸಾಧಕ, ಬಾಧಕಗಳ ಬಗ್ಗೆ ಚರ್ಚಿಸಲಿ ಎಂದು ಹೇಳಿದರು. ಪ್ರಜೆಗಳ ತೀರ್ಮಾನವೇ ಅಂತಿಮವಾಗಿದ್ದು, ಈ ಕುರಿತು ಪ್ರಜೆಗಳ ಬಳಿಗೆ ಹೋಗಿ ಸಹಿ ಸಂಗ್ರಹ ಅಭಿಯಾನ ನಡೆಸಲಾಗುತ್ತಿದ್ದು, ಬೂತ್ ಮಟ್ಟದಿಂದ ವಾರ್ಡ್ ಮಟ್ಟದವರೆಗೆ ಜಾಗೃತಿ ಮೂಡಿಸಲಾಗುವುದು ಎಂದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಬಿ.ಎಸ್. ಜಗದೀಶ್, ಮುಖಂಡರಾದ ಮಂಜಾನಾಯ್ಕ, ಶಿವರಾಜ್ ಪಾಟೀಲ್, ಸುರೇಶ್, ದುರುಗೇಶ್, ಹೆಚ್.ಪಿ. ವಿಶ್ವಾಸ್ ಉಪಸ್ಥಿತರಿದ್ದರು.

## ನಗರದಲ್ಲಿ ಇಂದಿನಿಂದ ಸತ್ಯಸಾಯಿ ಬಾಬಾರವರ 98ನೇ ಜನ್ಮ ದಿನೋತ್ಸವ



ಈಶ್ವರಮ್ಮ ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ಆಶ್ರಯದಲ್ಲಿ ಶ್ರೀ ಸತ್ಯಸಾಯಿ ಬಾಬಾರವರ 98ನೇ ಜನ್ಮ ದಿನೋತ್ಸವದ ಅಂಗವಾಗಿ ವಿಶೇಷ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂದು ಬೆಳಿಗ್ಗೆ 11 ಗಂಟೆಗೆ ಗೋ-ಶಾಲೆ ಗೋವುಗಳಿಗೆ ಹುಲ್ಲು ಮತ್ತು ಪಶು ಆಹಾರ ವಿತರಣೆ, ನಾಳೆ ಶನಿವಾರ ಬೆಳಿಗ್ಗೆ 11 ಗಂಟೆಗೆ 'ಆಶ್ರಯ' - ಹಿರಿಯ ವನಿತೆಯರ ಆನಂದ ಧಾಮದಲ್ಲಿ ಅಗತ್ಯ ವಸ್ತುಗಳು ಮತ್ತು ಪ್ರಸಾದ ವಿತರಣೆ. ಅದೇ ದಿನ ಮಧ್ಯಾಹ್ನ 12 ಕ್ಕೆ 'ಪ್ರೇಮಾಲಯ' ನಿರಾಶ್ರಿತ ವಿದ್ಯಾರ್ಥಿಗಳಿಗೆ ಕಲಿಕಾ ಉಪಕರಣ ವಿತರಣೆ. ಸೇವಾ ಕಾರ್ಯಗಳ ನಿರ್ವಹಣೆಯನ್ನು ಶ್ರೀಮತಿ ರಂಜನಿ, ರವಿ ಕೆ., ನಾಗರಾಜ್ ಉತ್ತಂಗಿ, ಪ್ರಸನ್ನ ಎಂ. ನಿರ್ವಹಿಸುವರು.

## ಚಿಕಿತ್ಸೆಗೆ ಪರದಾಡುತ್ತಿದ್ದ ಪೋಷಕರಿಗೆ ನೆರವಾದ ಶಾಸಕ ಬಸವಂತಪ್ಪ



ದಾವಣಗೆರೆ, ನ. 16- ಎರಡು ವರ್ಷದ ಮಗುವಿನ ಮೇಲೆ ಸುಡುವ ಬಿಸಿ ನೀರು ಬಿದ್ದು ಗಂಭೀರವಾಗಿ ಗಾಯಗೊಂಡು ಸಾರ್ವಜನಿಕ ಚಿಗಟೇರಿ ಜಿಲ್ಲಾ ಆಸ್ಪತ್ರೆಯಲ್ಲಿ ಸೂಕ್ತ ಚಿಕಿತ್ಸೆ ಸಿಗದೆ ಪರದಾಡುತ್ತಿದ್ದ ಪೋಷಕರಿಗೆ ಮಾಯಕೊಂಡ ಶಾಸಕ ಕೆ.ಎಸ್.ಬಸವಂತಪ್ಪ ಆಸರೆಯಾಗಿದ್ದಾರೆ.

ಮಾಯಕೊಂಡ ಕ್ಷೇತ್ರ ವ್ಯಾಪ್ತಿಯ ಕೋಲ್ಕುಂಟೆ ಗ್ರಾಮದ ಬಸವರಾಜ್ ಮತ್ತು ಅಂಜಿನಮ್ಮ ದಂಪತಿಯ ಪುತ್ರ ಮೈಲಾರಿ (2) ಗಂಭೀರವಾಗಿ ಗಾಯಗೊಂಡು ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾನೆ.

ನಿನ್ನೆ ಸಂಜೆ ಮಗುವಿನ ಪೋಷಕರು ದೀಪಾವಳಿ ಹಬ್ಬದ ಹಿನ್ನೆಲೆಯಲ್ಲಿ ಸ್ನಾನ ಮಾಡಲು ಬಿಸಿ ನೀರು ಕಾಯಿಸಿ ಇಟ್ಟಿದ್ದರು. ಈ ಸಂದರ್ಭದಲ್ಲಿ ಮಗು ಸುಡುವ ಬಿಸಿ ನೀರಿನ ಪಾತ್ರೆಯಲ್ಲಿ ಬಿದ್ದು ಈ ಘಟನೆ ನಡೆದಿದೆ. ಕೂಡಲೇ ಪೋಷಕರು ಜಿಲ್ಲಾ ಚಿಗಟೇರಿ ಸಾರ್ವಜನಿಕ ಆಸ್ಪತ್ರೆಗೆ ಬಂದಿದ್ದಾರೆ. ಮಗುವಿಗೆ ಚಿಕಿತ್ಸೆ ಕೊಡಲು ಸೌಲಭ್ಯ ಇಲ್ಲ. ಹೀಗಾಗಿ ಖಾಸಗಿ ಆಸ್ಪತ್ರೆಗೆ ದಾಖಲಿಸುವಂತೆ ವೈದ್ಯರು ಸೂಚಿಸಿದ್ದಾರೆ.

ಅಲ್ಲಿಂದ ಖಾಸಗಿ ಆಸ್ಪತ್ರೆಗೆ ದಾಖಲಿಸಲು ಹೋದಾಗ ಲಕ್ಷಾಂತರ ರೂ. ಖರ್ಚು ಆಗುತ್ತದೆ ಎಂದು ಹೇಳಿದ್ದಾರೆ. ಇದರಿಂದ ವಿಚಲಿತರಾದ ಪೋಷಕರು, ದಿಕ್ಕು ತೋಚದೇ ಅಂದು ರಾತ್ರಿ 10.40ರ ಸುಮಾರಿನಲ್ಲಿ ಶಾಸಕ ಬಸವಂತಪ್ಪ ಅವರನ್ನು ಸಂಪರ್ಕಿಸಿ, ನಡೆದ ಘಟನೆ ಬಗ್ಗೆ ಮಾಹಿತಿ ನೀಡಿದ್ದಾರೆ.

ಜಿಲ್ಲಾಸ್ಪತ್ರೆಗೆ ದೌಡಾಯಿಸಿದ ಶಾಸಕರು, ಮಗುವಿಗೆ ಪ್ರಾಥಮಿಕ ಚಿಕಿತ್ಸೆ ಕೊಡಿಸಿದ್ದಾರೆ. ಮಗುವಿನ ಪೋಷಕರಿಗೆ ಶಾಸಕರು 10 ಸಾವಿರ ಧನ ಸಹಾಯ ಮಾಡಿದ್ದಲ್ಲದೇ, ಬೆಂಗಳೂರಿನ ವಿಕ್ಟೋರಿಯ ಆಸ್ಪತ್ರೆಯ ವೈದ್ಯರನ್ನು ಸಂಪರ್ಕಿಸಿ, ಈ ಮಗುವಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿ, ಆಂಬ್ಯುಲೆನ್ಸ್ ಮೂಲಕ ಕಳುಹಿಸಿ ನೆರವಾಗಿದ್ದಾರೆ.

ಜಿಲ್ಲಾ ಆಸ್ಪತ್ರೆಯಲ್ಲಿ ಪಡಿತರ ಚೀಟಿ ಹೊಂದಿದ ಬಡ ಕುಟುಂಬಗಳಿಗೆ ಉಚಿತ ಚಿಕಿತ್ಸೆ ಇದೆ. ಆದರೆ ಈ ಕುಟುಂಬಕ್ಕೆ ಪಡಿತರ ಚೀಟಿ ಇಲ್ಲ. ಹೀಗಾಗಿ ಮಗುವಿನ ಚಿಕಿತ್ಸೆಗಾಗಿ ಈ ಕುಟುಂಬ ಪರದಾಡಿದೆ.

ನಂತರ ಸಿ.ಜಿ. ಆಸ್ಪತ್ರೆಯ ಜಿಲ್ಲಾ ಸರ್ಜನ್, ನಿವಾಸಿ ವೈದ್ಯಾಧಿಕಾರಿ ಸೇರಿದಂತೆ, ಆಸ್ಪತ್ರೆ ಸಿಬ್ಬಂದಿಗಳೊಂದಿಗೆ ಸಭೆ ನಡೆಸಿದ ಶಾಸಕರು, ಕೋವಿಡ್ ಸಂದರ್ಭದಲ್ಲಿ ಬಂದಾಗಿದ್ದ ಜಿಲ್ಲಾಸ್ಪತ್ರೆಯ ಸುಟ್ಟ ಗಾಯಗಳ ವಿಭಾಗವನ್ನು ಸರಿಯಾಗಿ ಉಪಯೋಗಿಸುತ್ತಿಲ್ಲ. ವೆಂಟಿಲೇಟರ್‌ಗಳು ಇಲ್ಲ, ಐಸಿಯು ವಾರ್ಡ್ ಇಲ್ಲ. ಹೀಗಾದರೆ ರೋಗಿಗಳನ್ನು ಕಾಪಾಡುವುದಾದರೂ ಹೇಗೆ? ಎಂದು ಪ್ರಶ್ನಿಸಿದರು.

ಸುಟ್ಟ ಗಾಯಗಳ ವಿಭಾಗದಲ್ಲಿ ಹೆಚ್ಚು ಸಂಖ್ಯೆಗಳ ವೆಂಟಿಲೇಟರ್, ಐಸಿ ವಾರ್ಡ್‌ಗಳ ಸೌಲಭ್ಯ ಕಲ್ಪಿಸಬೇಕು. ಬಡ ವರ್ಗದ ಯಾವುದೇ ರೋಗಿಗಳು ಆಸ್ಪತ್ರೆಗೆ ಬಂದರೆ ಅವರು ಪರದಾಡುವ ಸ್ಥಿತಿ ನಿರ್ಮಾಣವಾಗಬಾರದು. ಅವರಿಗೆ ಸೂಕ್ತ ಚಿಕಿತ್ಸೆ ನೀಡಿ ಗುಣಮುಖರನ್ನಾಗಿಸಿ ಮನೆಗೆ ಕಳುಹಿಸುವ ಕೆಲಸ ಆಗಬೇಕು. ಇನ್ಮುಂದೆ ಚಿಕಿತ್ಸೆ ಇಲ್ಲದೆ ಶಾಸಕರು, ಸಚಿವರಿಗೆ ಫೋನ್ ಮಾಡುವ ಸನ್ನಿವೇಶ ಸೃಷ್ಟಿ ಮಾಡಬಾರದು ಎಂದು ಅಧಿಕಾರಿಗಳಿಗೆ ಶಾಸಕರು ತಾಕೀತು ಮಾಡಿದರು.

## ಕಾಲಮಿತಿಯಲ್ಲಿ ಅನುದಾನ ವೆಚ್ಚಕ್ಕೆ ಸೂಚನೆ



**ಎಸ್.ಸಿ.ಪಿ, ಟಿ.ಎಸ್.ಪಿ ಪ್ರಗತಿ ಪರಿಶೀಲನಾ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ. ವೆಂಕಟೇಶ್**

ದಾವಣಗೆರೆ, ನ. 16- ಪರಿಶಿಷ್ಟ ಜಾತಿ ವಿಶೇಷ ಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ರೂಪಿಸುವ ಯೋಜನೆಗೆ ಬಿಡುಗಡೆಯಾಗುವ ಅನುದಾನವನ್ನು ಕಾಲಮಿತಿಯಲ್ಲಿ ವೆಚ್ಚ ಮಾಡಬೇಕೆಂದು ಜಿಲ್ಲಾಧಿಕಾರಿ ಡಾ. ವೆಂಕಟೇಶ್ ಎಂ.ವಿ ಸೂಚನೆ ನೀಡಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ತಮ್ಮ ಅಧ್ಯಕ್ಷತೆಯಲ್ಲಿ ಇಂದು ನಡೆದ ಎಸ್.ಸಿ.ಪಿ, ಟಿ.ಎಸ್.ಪಿ ಯೋಜನೆಯ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಮಾರ್ಚ್ ಮಾಫಿಯಾಗೆ ಆಕ್ಷೇಪ. ಕೆಲವು ಇಲಾಖೆಯವರು ವರ್ಷವಿಡಿ ಅನುದಾನ ಖರ್ಚು ಮಾಡದಿದ್ದರೂ, ಮಾರ್ಚ್‌ನಲ್ಲಿ ಶೇ. 100 ರಷ್ಟು ಸಾಧನೆ ಮಾಡುತ್ತಾರೆ. ಆದರೆ ಇದಕ್ಕೆ ಅವಕಾಶ ನೀಡದೆ, ಕೊನೆಯಲ್ಲಿ ಖರ್ಚು ಮಾಡುವ ಇಲಾಖೆ ಅಧಿಕಾರಿಗಳ ಮೇಲೆ ತೀವ್ರ ನಿಗಾ ವಹಿಸಲಾಗುತ್ತದೆ. ನೈಜ ಕಾರಣಗಳಿಲ್ಲದಿದ್ದಲ್ಲಿ ಶಿಸ್ತುಕ್ರಮ ಕೈಗೊಳ್ಳಲಾಗುತ್ತದೆ ಎಂದರು.

ಸಕಾಲದಲ್ಲಿ ವೆಚ್ಚ ಮಾಡಿ, ಈಗಾಗಲೇ ಎಲ್ಲಾ ಇಲಾಖೆಗಳ ಕ್ರಿಯಾ ಯೋಜನೆ ಅನುಮೋದನೆಯಾಗಿ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ವರ್ಷಾಂತ್ಯದಲ್ಲಿ ಚುನಾವಣೆ ಬರುವುದರಿಂದ ಟೆಂಡರ್ ಕರೆದು ಅನುಷ್ಠಾನ ಮಾಡಬೇಕು.

ಬೆಸ್ಕಾಂ ಶೂನ್ಯ ಪ್ರಗತಿ, ಆರೋಗ್ಯ ಇಲಾಖೆ ಶೇ. 87, ಆಯುಷ್ ಶೇ. 35, ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಶೇ. 64, ಜಲಸಂಪನ್ಮೂಲ ಇಲಾಖೆ ಶೇ. 46 ಸಾಧಿಸಲಾಗಿದೆ. ಸಣ್ಣ ನೀರಾವರಿ ಇಲಾಖೆಗೆ ರೂ.6 ಕೋಟಿ ಕ್ರಿಯಾಯೋಜನೆಗೆ ಅನುಮೋದನೆ ನೀಡಿದ್ದು, ಅನುದಾನ ಬರಬೇಕಿದೆ ಎಂದಾಗ ನೀರಾವರಿ ಸೌಲಭ್ಯದ ಜೊತೆಗೆ ಅವರ ಜಮೀನುಗಳಿಗೆ ಅನುಕೂಲವಾಗುವಂತೆ ಸಣ್ಣ ಸಣ್ಣ ಕೆರೆ, ಚೆಕ್ ಡ್ಯಾಂ ನಿರ್ಮಾಣವನ್ನು ಜಲಸಂಪನ್ಮೂಲ ಇಲಾಖೆಯವರು ಮುಂದಾಗಬೇಕೆಂದರು. ನೀರಾವರಿ ಕೊನೆ ಭಾಗದ ಅನೇಕ ರೈತರು ನೀರು ತಲುಪುತ್ತಿಲ್ಲ ಎಂದು ಮನವಿ ಮಾಡಿದ್ದಾರೆ.

ಖಾತರಿಯಡಿ ಕಾಲುವೆ ಸ್ವಚ್ಛತೆ, ಜಿಲ್ಲೆಯಲ್ಲಿ ಉದ್ಯೋಗ ಖಾತರಿಯಡಿ ವಾರ್ಷಿಕ 35 ಲಕ್ಷ ಮಾನವ ದಿನಗಳ ಗುರಿ ಇದ್ದು ಇದನ್ನು ಇನ್ನೂ ಹೆಚ್ಚಿಸುವ ಮೂಲಕ ಕಾಲುವೆ ಸ್ವಚ್ಛ ಮಾಡಲು ಬಳಕೆ ಮಾಡಿಕೊಳ್ಳುವ ನಿಟ್ಟಿನಲ್ಲಿ ಕ್ರಿಯಾಯೋಜನೆ ಪರಿಷ್ಕರಿಸಿ, ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಜಿ.ಪಂ. ಯೋಜನಾಧಿಕಾರಿಗಳಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಎಲ್ಲಾ ಇಲಾಖೆ ಎಸ್.ಸಿ.ಪಿ.ಯಿಂದ ಶೇ. 72 ಮತ್ತು ಟಿ.ಎಸ್.ಪಿ.ಯಲ್ಲಿ ಶೇ. 77 ಸೇರಿದಂತೆ ಜಿಲ್ಲೆಯಲ್ಲಿ ಸರಾಸರಿ ಶೇ. 74.50 ರಷ್ಟು ಪ್ರಗತಿ ದಾಖಲಾಗಿದೆ. ಇದನ್ನು ಬರುವ ಡಿಸೆಂಬರ್ ವೇಳೆಗೆ ಶೇ. 80 ಕ್ಕಿಂತಲೂ ಹೆಚ್ಚು ಸಾಧನೆ ಆಗಿರಬೇಕು ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯ ಯೋಜನಾಧಿಕಾರಿ ಮಲ್ಲನಾಯಕ್, ಸಮಾಜ ಕಲ್ಯಾಣ ಇಲಾಖೆ ಉಪನಿರ್ದೇಶಕ ಕೆ. ನಾಗರಾಜ್ ಹಾಗೂ ವಿವಿಧ ಇಲಾಖೆ ಅಧಿಕಾರಿಗಳು ಉಪಸ್ಥಿತರಿದ್ದರು.

## ನಗರದಲ್ಲಿ ಇಂದು ಚಾಲಕರಿಗೆ ಅಭಿನಂದನಾ ಕಾರ್ಯಕ್ರಮ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಜಿಲ್ಲಾ 3 ಮತ್ತು 4 ಚಕ್ರ ಗೂಡ್ಸ್ ವಾಹನ ಚಾಲಕರ ಮತ್ತು ಮಾಲೀಕರ ಸಂಘ, ವೀನಸ್ ಮಲ್ಟಿ ವೆಂಚರ್ಸ್ ಪ್ರೈ. ಲಿ. ಮತ್ತು ಕೊ. ಸೊಸೈಟಿ ಹಾಗೂ ಪ್ರೇರಣಾ ಮೋಟಾರ್ಸ್ ಇವರುಗಳ ಸಹಯೋಗದಲ್ಲಿ ಕನ್ನಡ ರಾಜ್ಯೋತ್ಸವದ ಅಂಗವಾಗಿ ದೇಶದ 3ನೇ ಬೆನ್ನೆಲುಬಾಗಿ ಶ್ರಮಿಸುತ್ತಿರುವ ಚಾಲಕರಿಗೆ ಅಭಿನಂದನಾ ಕಾರ್ಯಕ್ರಮವನ್ನು ಇಂದು ಸಂಜೆ 4 ಗಂಟೆಗೆ ಕುವೆಂಪು ಕನ್ನಡ ಭವನದಲ್ಲಿ ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮವನ್ನು ಜಿಲ್ಲಾಧಿಕಾರಿ ಡಾ.ಎಂ.ವಿ. ವೆಂಕಟೇಶ್, ಪೊಲೀಸ್ ಎಸ್ಪಿ ಉಮಾ ಪ್ರಶಾಂತ್, ಸಾರಿಗೆ ಅಧಿಕಾರಿ ಎಸ್. ಪ್ರಮುತೇಶ್, ಜಿಲ್ಲಾ ಯೋಗ ಒಕ್ಕೂಟದ ಅಧ್ಯಕ್ಷ ವಾಸುದೇವ್ ರಾಯ್ಕರ್ ಉದ್ಘಾಟಿಸುವರು. ಬಿ. ಪಳನಿಸ್ವಾಮಿ ಅಧ್ಯಕ್ಷತೆ ವಹಿಸುವರು. ಕರಿಬಸಪ್ಪ ಪ್ರಾಸ್ತಾವಿಕ ನುಡಿಗಳನ್ನಾಡುವರು. ಸುಮತಿ ಜಯಪ್ಪ ಅಭಿನಂದನಾ ನುಡಿಗಳನ್ನಾಡುವರು.

ಅತಿಥಿಗಳಾಗಿ ವಿಜಯಕುಮಾರ್, ಎ.ಬಿ. ರಾಮಚಂದ್ರಪ್ಪ, ಪ್ರಶಾಂತ್ ಕುಮಾರ್, ಎಂ. ಗದಿಗೆಪ್ಪ, ಶ್ರೀಧರ್ ನಾಯ್ಕ, ದೇವೇಂದ್ರ ಪ್ರಸಾದ್, ಸೋಮಶೇಖರ್ ರಾವ್, ಸುಂದರ್, ಕೆ.ಬಿ ಕುಮಾರ್., ಮೋಹನ್, ಹೇಮಣ್ಣ, ಮಣಿ ಸರ್ಕಾರ್, ಮೋಹನ್ ಕುಮಾರ್, ಸಿ.ಎಂ. ಸಿದ್ದಲಿಂಗಸ್ವಾಮಿ, ಶರಣಪ್ಪ ಅಂಬಾರಿ, ಶರಣಪ್ಪ, ಹೆಚ್. ಅಣ್ಣಪ್ಪಸ್ವಾಮಿ, ಕೊಟ್ರೇಶ್ ಎಸ್.ಎಂ. ಆಗಮಿಸುವರು. ಕಾರ್ಯಕ್ರಮದಲ್ಲಿ ಎ.ಬಿ. ರಾಮಚಂದ್ರಪ್ಪ ಅವರಿಂದ ವಿಶೇಷ ಉಪನ್ಯಾಸ ನಡೆಯುವುದು.

## ನಗರದಲ್ಲಿಂದು ಸೌರಶಕ್ತಿ ಬಳಕೆ ಮಾಹಿತಿ

ಕರುಣಾ ಜೀವ ಕಲ್ಯಾಣ ಟ್ರಸ್ಟ್ ಹಾಗೂ ಸೆಲ್ಕೋ ಸೋಲಾರ್ ಪ್ರೈವೇಟ್ ಲಿಮಿಟೆಡ್ ಸಂಯುಕ್ತಾಶ್ರಯದಲ್ಲಿ ಸೆಲ್ಕೋ ಸೋಲಾರ್ ಲೈಟ್ ಪ್ರೈವೇಟ್ ಲಿಮಿಟೆಡ್‌ನ ಚೀಫ್ ಮ್ಯಾನೇಜರ್ ಪಾರ್ಥಸಾರಥಿ ಹಾಗೂ ಹಿರಿಯ ವ್ಯವಸ್ಥಾಪಕ ಮಂಜುನಾಥ್ ಭಾಗವತ್ ಅವರು ಸೌರಶಕ್ತಿ ಬಳಕೆಯ ಮಾಹಿತಿ ನೀಡುವರು. ಕರುಣಾ ಜೀವ ಕಲ್ಯಾಣ ಟ್ರಸ್ಟ್‌ನಲ್ಲಿ ನಡೆಯುವ ಕಾರ್ಯ ಕ್ರಮದಲ್ಲಿ ಮಹಿಮಾ ಜೆ. ಪಟೇಲ್, ಶಿವನಕೆರೆ ಬಸವಲಿಂಗಪ್ಪ, ಉದಯ್ ಕುಮಾರ್, ಸಿ.ಜಿ. ದಿನೇಶ್, ಕುಸುಮಶೆಟ್ರು, ನವೀನ್ ಭಾಗವಹಿಸಲಿದ್ದಾರೆ.

## ಕನ್ನಡ ಭಾಷಾ ಶಿಕ್ಷಕರಿಗೆ ನಾಳೆ ಉಪನ್ಯಾಸ

ದಾವಣಗೆರೆ, ನ.16- ಜಿಲ್ಲಾ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಒಕ್ಕೂಟ ಹಾಗೂ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಇವರ ಸಹಯೋಗದಲ್ಲಿ ಜಿಲ್ಲೆಯ 'ಕನ್ನಡ ಭಾಷಾ ಶಿಕ್ಷಕರಿಗೆ ಒಂದು ದಿನದ ವಿಶೇಷ ಉಪನ್ಯಾಸ ಮತ್ತು ಭಾಷಾ ಬೋಧನಾ ಪುನಶ್ಚೇತನಾ ಕಾರ್ಯಕ್ರಮ-2023'ವನ್ನು ನಾಡಿದ್ದು ದಿನಾಂಕ 18 ರ ಶನಿವಾರ ಕುವೆಂಪು ಕನ್ನಡ ಭವನದಲ್ಲಿ ಆಯೋಜಿಸಲಾಗಿದೆ.

ಕಾರ್ಯಕ್ರಮದ ಉದ್ಘಾಟನೆಯನ್ನು ಡಾ. ಎಂ.ಜಿ. ಈಶ್ವರಪ್ಪ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ. ವಾಮದೇವಪ್ಪ ವಹಿಸುವರು.

ಖ್ಯಾತ ವಾಗ್ಮಿ ಜಿ.ಎಸ್. ನಟೇಶ್ ಅವರಿಂದ 'ಬೋಧನೆ ಒಂದು ಕೌಶಲ್ಯ' ವಿಷಯ ಕುರಿತು ಉಪನ್ಯಾಸ ನಡೆಯುವುದು. ಮುಖ್ಯ ಅತಿಥಿಗಳಾಗಿ ಜಿ. ಕೊಟ್ರೇಶ್ ಆಗಮಿಸುವರು. ಕಾರ್ಯಕ್ರಮದಲ್ಲಿ ಟಿ.ಎಂ. ಉಮಾಪತಯ್ಯ, ಸಿ. ರಾಮಮೂರ್ತಿ, ಡಾ. ಪುಷ್ಪಲತಾ, ಶೇರ್ ಅಲಿ ಉಪಸ್ಥಿತರಿರುವರು.

ಸಂಪನ್ಮೂಲ ವ್ಯಕ್ತಿಗಳಾಗಿ ಕೆ. ಎನ್ ಪಂಚಾಕ್ಷರಯ್ಯ, ವಿಜಯ್ ಸೊಲ್ಲಾಪುರ ಭಾಗವಹಿಸುವರು.

## ನಗರ, ಗ್ರಾಮಾಂತರದಲ್ಲಿ ಇಂದು ವಿದ್ಯುತ್ ವ್ಯತ್ಯಯ

ರಂಗನಾಥ ಬಡಾವಣೆ, ವಿದ್ಯಾನಗರ, ತರಳಬಾಳು ಬಡಾವಣೆ, ಗಾಂಧಿ ವೃತ್ತದಿಂದ ಈಶ್ವರ ಪಾರ್ವತಿ ದೇವಸ್ಥಾನ ಯುಬಿಡಿಟಿ ಲೇಡಿಸ್ ಹಾಸ್ಟೆಲ್, ಜಮುನಾ ವಾಣಿಜ್ಯ ಮಳಿಗೆ, ಸವಿತಾ ಹೋಟೆಲ್, ಸರಸ್ವತಿ ನಗರ, ಶಿವಕುಮಾರಸ್ವಾಮಿ ಬಡಾವಣೆ, ಶಿವಕುಮಾರಸ್ವಾಮಿ ಬಡಾವಣೆ 1 ಮತ್ತು 2ನೇ ಹಂತ, ಹದಡಿ ರಸ್ತೆ, ಸೇಂಟ್ ಜಾನ್ ಸ್ಕೂಲ್, ಐ.ಟಿ.ಐ. ಕಾಲೇಜು, ರಿಂಗ್ ರಸ್ತೆ, ಶ್ರೀನಿವಾಸ ನಗರ, ಜಯನಗರ, ಭೂಮಿಕ ನಗರ, ಕೆ.ಎಸ್.ಎಸ್ ಕಾಲೇಜ್ ಸುತ್ತ ಮುತ್ತ, ಲೋಕಿಕೆರೆ ರಸ್ತೆಯ ಇಂಡಸ್ಟ್ರಿಯಲ್ ಏರಿಯಾ, ಎಸ್.ಎಸ್. ಆಸ್ಪತ್ರೆ ಸುತ್ತ ಮುತ್ತ, ಜಿಲ್ಲಾ ಪಂಚಾಯತ್ ಆಫೀಸ್, ಸರ್ಕ್ಯೂಟ್ ಹೌಸ್, ವಿವೇಕಾನಂದ ಬಡಾವಣೆ, ಸರಸ್ವತಿ ಬಡಾವಣೆ ಎ, ಬಿ ಮತ್ತು ಸಿ ಬ್ಲಾಕ್, ಜೀವನ್ ಭೀಮಾ ನಗರ, ಚಿಕ್ಕಮ್ಮಣಿ ದೇವರಾಜ ಅರಸು ಬಡಾವಣೆ, ಜಯನಗರ ಎ ಮತ್ತು ಬಿ, ಬ್ಲಾಕ್, ಸಾಯಿಬಾಬಾ ದೇವಸ್ಥಾನ, ಲಕ್ಷ್ಮಿ ಬಡಾವಣೆ, ದೂರದರ್ಶನ ಕೇಂದ್ರ, ಮಹಾನಗರ ಪಾಲಿಕೆ ನೀರು ಸರಬರಾಜು ಘಟಕಗಳು, ಭೂಸೇನಾ ನಿಗಮ, ಸುಬ್ರಹ್ಮಣ್ಯನಗರ, ಎಸ್.ಎ.ರವೀಂದ್ರನಾಥ್ ಬಡಾವಣೆ, ಎಸ್.ಓ.ಜಿ ಕಾಲೋನಿ ಎ, ಬಿ ಮತ್ತು ಸಿ ಬ್ಲಾಕ್, ಬುದ್ಧ-ಬಸವ-ಭೀಮ ನಗರ , ಕರ್ನಾಟಕ ಬೀಜ ನಿಗಮ, ಎಲ್.ಐ.ಸಿ ಕಾಲೋನಿ, ಆಂಜನೇಯ ಬಡಾವಣೆ, ವಿನಾಯಕ ಬಡಾವಣೆ, ಶಾಮನೂರು, ಜೆ.ಹೆಚ್. ಪಟೇಲ್ ನಗರ, ಹೊಸ ಕುಂದವಾಡ, ಹಳೇ ಕುಂದವಾಡ, ಕೆ.ಎಚ್.ಬಿ. ಕಾಲೋನಿ, ಸಿ.ಎಂ.ಸಿ. ವಾಟರ್ ವರ್ಕ್ಸ್, ಪಾಮೇನಹಳ್ಳಿ, ಶಿರಮಗೊಂಡನಹಳ್ಳಿ, ಆರನೇ ಮೈಲಿ ಕಲ್ಲು, ಏಳನೇ ಮೈಲಿ ಕಲ್ಲು, ನಾಗನೂರು, ಬಿಸಲೇರಿ, ಬೆಳವನೂರು, ತುರ್ಚಗಟ್ಟ, ಜರಿಕಟ್ಟೆ, ಮುದಹದಡಿ ರೆಡ್ಡಿ ಕ್ಯಾಂಪ್, ಪುಟಗಾನಾಳು, ಶ್ರೀರಾಮ ನಗರ, ಕಾಡಜ್ಜಿ, ಬಸವಾನಾಳು, ನಾಗರಕಟ್ಟೆ ಗ್ರಾಮಗಳು ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಇಂದು ಬೆಳಿಗ್ಗೆ 10 ರಿಂದ ಸಂಜೆ 4 ರವರೆಗೆ ಹಾಗೂ ಕಾಡಜ್ಜಿ ವಿದ್ಯುತ್ ಕೇಂದ್ರದಲ್ಲಿ ಬೆಳಿಗ್ಗೆ 10 ರಿಂದ ಸಂಜೆ 5 ರವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ.

## ಜೆ.ಹೆಚ್. ಪಟೇಲ್ ಕಾಲೇಜಿನಲ್ಲಿ ಟೆಕ್ನೋವಾ 2ಕೆ23



ದಾವಣಗೆರೆ, ನ. 16- ನಗರದ ಜೆ.ಹೆಚ್. ಪಟೇಲ್ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಅಂಡ್ ಟೆಕ್ನಾಲಜಿ ಕಾಲೇಜಿನಲ್ಲಿ ಟೆಕ್ನೋವಾ 2ಕೆ23 ಟೆಕ್ನಿಕಲ್ ಫೆಸ್ಟ್, ಕರ್ನಾಟಕ ರಾಜ್ಯೋತ್ಸವ, ಘಟಿಕೋತ್ಸವ ಮತ್ತು ಚಿಗುರು ಕಾರ್ಯಕ್ರಮವನ್ನು ನಡೆಸಲಾಯಿತು.ಫೆಸ್ಟ್‌ನಲ್ಲಿ ಏರ್ಪಡಿಸಿದ್ದ ವಿವಿಧ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಪ್ರೊ. ಚಂದ್ರಕಾಂತ್, ಪ್ರೊ. ನಾಸೀರ್, ಪ್ರೊ. ರಂಜಿತ್ ಮತ್ತು ಪ್ರೊ. ಶ್ವೇತಾ ಪಾಲ್ಗೊಂಡಿದ್ದರು. ಕನ್ನಡ ರಾಜ್ಯೋತ್ಸವ, ಪದವಿ ಪ್ರದಾನ ಮತ್ತು ಚಿಗುರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ಶಹನಾಜ್ ಬೀ ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ದಿನೇಶ್ ಕೆ. ಶೆಟ್ಟಿ, ಕೆ. ಶಿವರತನ್, ಕಾಲೇಜಿನ ಆಡಳಿತ ಮಂಡಳಿಯ ಮುಸ್ತಾಫ್, ಜ್ಯೋತಿ, ಪ್ರಾಂಶುಪಾಲರಾದ ಜಿ.ಟಿ. ಅಶ್ವಿನಿ ಉಪಸ್ಥಿತರಿದ್ದರು. ಶೈಲಾ ಎನ್. ಶೆಟ್ಟಿ ಕಾರ್ಯಕ್ರಮ ನಿರೂಪಿಸಿದರು.

## ಬಿಜೆಪಿ ಅಧ್ಯಕ್ಷ ಬಿವೈವಿಗೆ ಶುಭ ಹಾರೈಸಿದ ಶ್ರೀಶೈಲ ಜಗದ್ಗುರುಗಳು




**ಹರಿಹರ**

ಹರಿಹರ, ನ.16- ಬಿ.ವೈ. ವಿಜಯೇಂದ್ರ ಅವರಿಗೆ ರಾಜ್ಯ ಬಿಜೆಪಿ ಅಧ್ಯಕ್ಷ ಸ್ಥಾನ ಲಭಿಸಿರುವುದು ವೀರಶೈವ ಸಮಾಜಕ್ಕೆ ಮತ್ತೊಮ್ಮೆ ಆದ್ಯತೆ ಸಿಕ್ಕಂತಾಗಿದ್ದು, ವಿಜಯೇಂದ್ರ ಕಾಲಕ್ಕೆ ಪಕ್ಷ ಮತ್ತಷ್ಟು ಗಟ್ಟಿಯಾಗಿ ಗತವೈಭವ ಮರುಕಳಿಸುವಂತಾಗಲಿ ಎಂದು ಹಾರೈಸುವುದಾಗಿ ಶ್ರೀಶೈಲ ಜಗದ್ಗುರು ಶ್ರೀ ಚೆನ್ನಮಲ್ಲಿಕಾರ್ಜುನ ಮಹಾಸ್ವಾಮಿಗಳು ಹೇಳಿದರು.

ನಗರದ ಎಸ್.ಜೆ.ವಿ.ಪಿ ಕಾಲೇಜು ಆವರಣದಲ್ಲಿ 5 ಕೋಟಿ ರೂ. ವೆಚ್ಚದಲ್ಲಿ ಗಾರ್ಡನ್ ಸಮುದಾಯ ಭವನ, ಅತಿಥಿ ಗೃಹ ಕೊಠಡಿ, ಪೂಜಾ ಮಂದಿರ ಹಾಗೂ ವ್ಯಾಪಾರಿ ಮಳಿಗೆಗಳ ನಿರ್ಮಾಣ ಕಾರ್ಯಕ್ಕೆ ಗುದ್ದಲಿ ಪೂಜೆ ನೆರವೇರಿಸಿದ ನಂತರ ಪತ್ರಕರ್ತರೊಂದಿಗೆ ಅವರು ಮಾತನಾಡಿದರು.

ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪನವರು ರಾಜ್ಯದಲ್ಲಿ ಹಲವಾರು ದಶಕಗಳ ಕಾಲ ಬಿಜೆಪಿ ಪಕ್ಷವನ್ನು ಬಲಿಷ್ಠವಾಗಿ ಬೆಳಸಿದ್ದರಿಂದ ಹಾಗೂ ಅವರ ಆಡಳಿತದ ಅವಧಿಯಲ್ಲಿ ಸಾಕಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಾಡಿದ್ದರ ಫಲವಾಗಿ, ಅವರ ಪುತ್ರನಿಗೆ ರಾಜ್ಯ ಅಧ್ಯಕ್ಷ ಸ್ಥಾನ ಲಭಿಸಿದೆ. ಇದರಿಂದಾಗಿ ವೀರಶೈವ ಸಮಾಜಕ್ಕೆ ಮತ್ತೊಮ್ಮೆ ಗೌರವ ಸಿಕ್ಕಂತಾಗಿದೆ ಎಂದು ಹೇಳಿದರು.

ಈ ಸಂದರ್ಭದಲ್ಲಿ ಅಂಬಿಕಾ ನಗರ ಶ್ರೀಗಳು, ಮಣಕೂರು ಶ್ರೀಗಳು, ತ್ಯಾಗರ್ತಿ ಶ್ರೀಗಳು, ಜೈನವೀರ ಶ್ರೀಗಳು, ಎಸ್.ಜೆ.ವಿ.ಪಿ. ಕಾಲೇಜ್ ಉಪಾಧ್ಯಕ್ಷ ಡಿ.ಎಂ. ಹಾಲಸ್ವಾಮಿ, ಕಾರ್ಯದರ್ಶಿ ಪ್ರಶಾಂತ್ ದುಗ್ಗತ್ತಿಮಠ, ನಿರ್ದೇಶಕರಾದ ಡಿ.ಜಿ. ಶಿವಾನಂದಪ್ಪ, ನಂದಿಗಾವಿ ತಿಪ್ಪೇಸ್ವಾಮಿ, ಎನ್. ಹೆಚ್. ಪಾಟೀಲ್, ಕಾಂಗ್ರೆಸ್ ಮುಖಂಡ ಜಿ.ಬಿ. ಹಾಲೇಶಗೌಡ್ರು ಗುತ್ತೂರು, ಪ್ರಾಂಶುಪಾಲರಾದ ಶಿವಗಂಗಮ್ಮ ರುದ್ರಮುನಿ ಸ್ವಾಮಿ ಹಾಗು ಇತರರು ಹಾಜರಿದ್ದರು.



# ವಿಹಂಗಮ ಯೋಗದಿಂದ ಸುಖ, ಶಾಂತಿ ಪ್ರಾಪ್ತಿ

## ವಿಹಂಗಮ ಯೋಗ ಸತ್ಸಂಗದಲ್ಲಿ ಸಂತ ವಿಜ್ಞಾನದೇವ್ ಜೀ ಮಹಾರಾಜ್ ಪ್ರತಿಪಾದನೆ



**ವಿಹಂಗಮ ಯೋಗ, ಧ್ಯಾನ ಪದ್ಧತಿಯಲ್ಲಿ ಪ್ರತಿ ದಿನ ಹತ್ತು ನಿಮಿಷಗಳ ನಿಯಮಿತ ಸಾಧನೆಯಿಂದ ಮನುಷ್ಯನ ಜೀವನದಲ್ಲಿ ಅಭೂತಪೂರ್ವ ಸುಖ ಮತ್ತು ಶಾಂತಿ ಪ್ರಾಪ್ತಿ**

**- ವಿಜ್ಞಾನದೇವ್ ಜೀ ಮಹಾರಾಜ್**

ದಾವಣಗೆರೆ, ನ.16- ವಿಹಂಗಮ ಯೋಗವು ಚೇತನ ವಿಜ್ಞಾನವಾಗಿದ್ದು, ಇಲ್ಲಿ ಯಾವುದೂ ಕಾಲ್ಪನಿಕವಲ್ಲ. ವಿಹಂಗಮ ಯೋಗ, ಧ್ಯಾನ ಪದ್ಧತಿಯಲ್ಲಿ ಪ್ರತಿ ದಿನ ಹತ್ತು ನಿಮಿಷಗಳ ನಿಯಮಿತ ಸಾಧನೆಯಿಂದ ಮನುಷ್ಯನ ಜೀವನದಲ್ಲಿ ಅಭೂತಪೂರ್ವ ಸುಖ ಮತ್ತು ಶಾಂತಿ ಪ್ರಾಪ್ತಿಯ ಜೊತೆಗೆ ಅನೇಕ ಲಾಭಗಳು ಉಂಟಾಗುತ್ತವೆ ಎಂದು ವಾರಣಾಸಿ (ಕಾಶಿ) ವಿಹಂಗಮ ಯೋಗ ಸಂತ ಸಮಾಜದ ಸ್ವರ್ವೇದ ಮಹಾಮಂದಿರದ ಸಂತ ಪ್ರವರ ಶ್ರೀ ವಿಜ್ಞಾನದೇವ್ ಜೀ ಮಹಾರಾಜ್ ಹೇಳಿದರು.

ನಗರದ ಡಾ. ಸದ್ಯೋಜಾತ ಶಿವಾಚಾರ್ಯ ನಿಕೇತನ ಹಿರೇಮಠದ ಆವರಣದಲ್ಲಿ ಇಂದು ಸಂಜೆ ಏರ್ಪಡಿಸಿದ್ದ ವಿಹಂಗಮ ಯೋಗ ಸತ್ಸಂಗ ಮತ್ತು ದಿವ್ಯವಾಣಿ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಅವರು ಮಾತನಾಡಿದರು.

ಸಮುದ್ರದ ಮೇಲ್ಮೈ ಅಲೆಗಳನ್ನು ನಿಧಾನವಾಗಿ ಶಾಂತ ಸ್ಥಿತಿಗೆ ತರುವಂತೆ ಧ್ಯಾನದ ಮೂಲಕ ಮನಸ್ಸನ್ನು ಶಾಂತ ಸ್ಥಿತಿಗೆ ತರಲು ಸಾಧ್ಯವಿದೆ. ಚಂಚಲ, ಚಪಲ, ಅಶಾಂತಿ, ಕೋಲಾಹಲದಿಂದ ಉಂಟಾದ ಮನಸ್ಸನ್ನು ಏಕಾಗ್ರತೆ ಮೂಲಕ ಶಾಂತ ಸ್ಥಿತಿಗೆ ತರಬೇಕಾಗಿದೆ ಎಂದರು.

ವಿಷ ಜಂತುಗಳು, ಕಾಡು ಪ್ರಾಣಿಗಳು ಬೇರೆಯವರಿಗೆ ಹೇಗೆ ತೊಂದರೆ ಮಾಡುತ್ತವೆಯೋ ಹಾಗೆಯೇ ಅಶುದ್ಧ ಮನಸ್ಸು ಅಶಾಂತಿಯನ್ನು ಉಂಟು ಮಾಡುತ್ತದೆ. ಅದನ್ನು ಶಾಂತ ಸ್ಥಿತಿಗೆ ತರಬೇಕಾದರೆ ಧ್ಯಾನದಿಂದ ಸಾಧ್ಯ ಎಂದು ಹೇಳಿದರು.

ಹಾಲಿನಲ್ಲೆ ಕೆನೆ ಹೇಗೆ ಇರುತ್ತದೆಯೋ ಅದೇ ರೀತಿ ಮಾನವನ ದೇಹದಲ್ಲಿ ದೇವರು ಅಡಗಿದ್ದು, ಅದನ್ನು ಹುಡುಕುವ ಪ್ರಯತ್ನವನ್ನು ಯೋಗ, ಧ್ಯಾನದ ಮೂಲಕ ಮಾಡಬೇಕಾಗಿದೆ ಎಂದರು.

ಅರಣ್ಯದಲ್ಲಿ ಪ್ರಾಣಿಗಳು ಹೇಗೆ ವ್ಯಾಕುಲವಾಗಿ ಓಡಾಡುತ್ತವೆಯೋ ಹಾಗೆ ವ್ಯಾಕುಲವಾಗಿರುವ ಮನಸ್ಸನ್ನು ಏಕಾಗ್ರತೆಯ ಮೂಲಕ ನಿಯಂತ್ರಣದಲ್ಲಿಡಬೇಕಾಗುತ್ತದೆ. ನಮ್ಮಲ್ಲಿ ಶಾಂತಿ ಇದ್ದರೂ ಗುಡಿ, ಗುಂಡಾರಗಳಲ್ಲಿ ಶಾಂತಿ ಹುಡುಕಲು ಹೋಗುತ್ತೇವೆ ಎಂದು ಹೇಳಿದರು.

ಬೆಳಿಗ್ಗೆ ಮತ್ತು ಸಂಜೆ ಧ್ಯಾನ ಸ್ಥಿತಿಯಲ್ಲಿ ಕುಳಿತು ಯೋಗ, ಪ್ರಾಣಾಯಾಮ ಮಾಡಿದರೆ ಶಾಂತಿ ಕಾಣಲು ಸಾಧ್ಯವಿದೆ. ಮನಸ್ಸಿನ ಅಂತರಾಳದಲ್ಲಿ ಅಧಮ್ಯ ಶಕ್ತಿ ಇದೆ ಎಂದು ತಿಳಿಸಿದರು.

ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ವಿಹಂಗಮ ಯೋಗ ಸಂಕಲ್ಪ ಯಾತ್ರೆ ಹಮ್ಮಿಕೊಂಡಿದ್ದು, ಕಾಶಿಯಲ್ಲಿ ಡಿಸೆಂಬರ್ 2ನೇ ವಾರದಲ್ಲಿ ನಡೆಯುವ ಕುಂಡಲಿನಿ ಯೋಗ ಕಾರ್ಯಕ್ರಮಕ್ಕೆ ಆಹ್ವಾನಿಸುತ್ತೇವೆ ಎಂದು ಹೇಳಿದರು.

ನಮ್ಮನ್ನು ದಾವಣಗೆರೆಗೆ ಆಹ್ವಾನ ನೀಡಿ ಕಾರ್ಯಕ್ರಮದ ಯಶಸ್ವಿಗೆ ಕಾರಣೀಕರ್ತರಾದ ಮಾಗಾನಹಳ್ಳಿ ನೀಲಮ್ಮ, ಗುಂಡಿ ಪುಷ್ಪ, ಅನುರಾಗ್ ಜೀ ಮತ್ತು ಶೈಲೇಶ್ ಮತ್ತಿತರ ಸೇವೆಯನ್ನು ಮೆಲಕು ಹಾಕಿ ಕೃತಜ್ಞತೆ ಸಲ್ಲಿಸಿದರು.

# ನಿಖರ ಚಿಂತನೆ ದಾಖಲಿಸಲು ಬರವಣಿಗೆ ಅಗತ್ಯ

## 'ಒಲೆಯೊಳಗಣ ಕಿಚ್ಚು' ಕೃತಿ ಲೋಕಾರ್ಪಣಾ ಕಾರ್ಯಕ್ರಮದಲ್ಲಿ ಸವಿತಾ ನಾಗಭೂಷಣ್



**ಪದ್ಯಗಳನ್ನು ವಿವರಿಸಲಾಗದು. ಓದಿ ಅನುಭವಿಸಬೇಕು. ಅದಕ್ಕಾಗಿ ಪುಸ್ತಕಗಳನ್ನು ಕೊಂಡು ಓದಬೇಕು. ಒಂದು ಪುಸ್ತಕ ಜೊತೆಗಿದ್ದರೆ ಒಂದು ಸಾವಿರ ಸ್ನೇಹಿತರು ಜೊತೆಗಿದ್ದಂತೆ.**

**- ಸವಿತಾ ನಾಗಭೂಷಣ್, ಕವಯತ್ರಿ**

ದಾವಣಗೆರೆ, ನ.16- ನಿಮ್ಮ ಮನಸ್ಸಿನಲ್ಲಿರುವ ನಿಖರ ಚಿಂತನೆಗಳನ್ನು ದಾಖಲಿಸಲು ಬರವಣಿಗೆ ಅಗತ್ಯವಾಗಿದೆ ಎಂದು ಶಿವಮೊಗ್ಗದ ಹಿರಿಯ ಕವಯತ್ರಿ ಶ್ರೀಮತಿ ಸವಿತಾ ನಾಗಭೂಷಣ ಹೇಳಿದರು.

ಸರಸ್ವತಿ ಪ್ರಕಾಶನ (ಮೈಸೂರು) ಹಾಗೂ ಎ.ವಿ. ಕಮಲಮ್ಮ ಮಹಿಳಾ ಪದವಿ ಕಾಲೇಜು ಸಂಯುಕ್ತಾಶ್ರಯದಲ್ಲಿ ಎವಿಕೆ ಕಾಲೇಜು ಆವರಣದಲ್ಲಿನ ಶ್ರೀಮತಿ ಪಾರ್ವತಮ್ಮ ಶಾಮನೂರು ಶಿವಶಂಕರಪ್ಪ ಸಭಾಂಗಣದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ನಿವೃತ್ತ ಆಂಗ್ಲ ಪ್ರಾಧ್ಯಾಪಕರಾದ ಡಾ.ಅನುರಾಧ ಪಿ.ಎಂ. ಅವರ 'ಒಲೆಯೊಳಗಣ ಕಿಚ್ಚು' ಕವನ ಸಂಕಲನ ಲೋಕಾರ್ಪಣೆಗೊಳಿಸಿ ಅವರು ಮಾತನಾಡಿದರು.

ಬರವಣಿಗೆ ಮೂಲಕ ನಿಖರವಾದ ಚಿಂತನೆಗಳನ್ನು ದಾಖಲಿಸಿದಾಗ ಮಾತ್ರ ನೀವು ಸ್ಪಷ್ಟವಾಗುತ್ತೀರಿ. ಕಾವ್ಯ ಮನಸ್ಸನ್ನು ವಿಸ್ತಾರಗೊಳಿಸುತ್ತದೆ. ಈ ಹಿನ್ನೆಲೆಯಲ್ಲಿ ಎಲ್ಲರೂ ಬರವಣಿಗೆ ಮೈಗೂಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕಾವ್ಯ ಸೂಕ್ಷ್ಮವಾದ ವಿಷಯ. ಇದು ನಮ್ಮೆದೆಯಲ್ಲಿರುವುದನ್ನು ಪದಗಳ ಜೊತೆ ಹೇಳುವಂತಹದ್ದು. ನಮ್ಮೆದೆಯ ಭಾವಾಭಿನಯವೇ ಕಾವ್ಯ. ಜಗತ್ತಿನ ಯಾವ ಮೂಲೆಯಲ್ಲಿ ನೋಡಿದರೂ ಎಲ್ಲಾ ಪದ್ಯಗಳೂ ಒಂದೇ ರೀತಿ ಇರುತ್ತವೆ.

ಕಾವ್ಯ ಪ್ರಕೃತಿಯಲ್ಲಿಯೇ ಇರುವುದರಿಂದ ನಮಗೆ ಇಷ್ಟವಾಗುತ್ತದೆ. ಕೋಗಿಲೆಯ ಕೂಗು, ಸಮುದ್ರದ ಮೊರೆತ, ನದಿಯ ಕಲರವದ ಚಿತ್ರ, ಸೂರ್ಯೋದಯದ ಚಿತ್ರಣ ಹೀಗೆ ಪ್ರಕೃತಿಯ ಮೂಲವನ್ನು ಅನುಕರಣೆ ಮಾಡಬಹುದಷ್ಟೇ ಎಂದರು.

ಮಹಿಳೆಯರಿಗೆ ಕಥೆ, ಕಾವ್ಯ ತುಂಬಾ ಹತ್ತಿರವಾದದ್ದು. ಪ್ರತಿ ಮಹಿಳೆಯೂ ಕಥೆಗಾರ್ತಿಯೇ. ಹನ್ನೆರಡನೇ ಶತಮಾನದಲ್ಲಿ ಅಕ್ಕಮಹಾದೇವಿ ನಂತರ ಮಹಿಳಾ ಬರಹಗಾರರ ಸಂಖ್ಯೆ ಕಡಿಮೆಯಾಗಿತ್ತು. ಆದರೆ ಪ್ರಸ್ತುತ ದಿನಗಳಲ್ಲಿ ಸಾವಿರಾರು ಮಹಿಳೆಯರು ಬರವಣಿಗೆಯಲ್ಲಿ ತೊಡಗಿಸಿಕೊಂಡಿದ್ದಾರೆ. ನೂರಕ್ಕೂ ಹೆಚ್ಚು ಜನ ಉತ್ತಮ ಬರಹಗಾರ್ತಿಯರು ಇರುವುದು ಉತ್ತಮ ಬೆಳವಣಿಗೆ ಎಂದರು. ಕುಟುಂಬ ನಿರ್ವಹಣೆ, ಅಡುಗೆ, ಮಕ್ಕಳ ಮೇಲೆ ಗಮನ ಅದರ ನಡುವೆಯೂ ಮಹಿಳೆಯರು ಬರವಣಿಗೆ ಮೇಲಿನ ಆಸಕ್ತಿಯನ್ನು ಕಾಪಿಟ್ಟುಕೊಳ್ಳಬೇಕಿದೆ ಎಂದರು.

ಬಾಪೂಜಿ ವಿದ್ಯಾಸಂಸ್ಥೆ ಶೈಕ್ಷಣಿಕ ನಿರ್ದೇಶಕ ಡಾ.ಎಂ.ಜಿ. ಈಶ್ವರಪ್ಪ ಅಧ್ಯಕ್ಷತೆ ವಹಿಸಿದ್ದರು. ಕೃತಿಕಾರರಾದ ನಿವೃತ್ತ ಆಂಗ್ಲ ಪ್ರಾಧ್ಯಾಪಕರಾದ ಡಾ.ಅನುರಾಧ ಪಿ.ಎಂ., ಎವಿಕೆ ಮಹಿಳಾ ಕಾಲೇಜು ಪ್ರಾಂಶುಪಾಲರಾದ ಕಮಲಾ ಸೊಪ್ಪಿನ್ ಉಪಸ್ಥಿತರಿದ್ದರು.

ಡಾ.ಮುರುಗೇಶ್ ಬಾಬು, ಬಿ.ಟಿ. ಜಾಹ್ನವಿ ಹಾಗೂ ಮಾನಸ ಪ್ರಾರ್ಥಿಸಿದರು. ವಿದ್ಯಾರ್ಥಿನಿ ಕು.ಸಹನಾ ಸಾವಳಗಿ ಸ್ವಾಗತಿಸಿದರು. ಚಂದನ್ ಬೆಳಗಾವಿ ನಿರೂಪಿಸಿದರು. ಸಹಾಯಕ ಪ್ರಾಧ್ಯಾಪಕ ಡಾ.ಲೋಹಿತ್ ವಂದಿಸಿದರು.

# ಯುಕೋ ಬ್ಯಾಂಕ್‌ನಿಂದ ತಪ್ಪಾಗಿ ಖಾತೆಗೆ 820 ಕೋಟಿ ರೂ. ಜಮಾ

**ಹಲವು ಖಾತೆಗಳಿಂದ 649 ಕೋಟಿ ರೂ. ವಾಪಸ್**

ನವದೆಹಲಿ, ನ. 16 – ಯುಕೋ ಬ್ಯಾಂಕ್‌ನ ಗ್ರಾಹಕರ ಕೆಲ ಖಾತೆಗಳಿಗೆ ತಪ್ಪಾಗಿ 820 ಕೋಟಿ ರೂ.ಗಳ ಜಮಾ ಮಾಡಲಾಗಿದೆ. ಈ ಹಣವನ್ನು ವಾಪಸ್ ಪಡೆಯುವ ಪ್ರಕ್ರಿಯೆ ಆರಂಭಿಸಲಾಗಿದೆ.

ಐ.ಎಂ.ಪಿ.ಎಸ್. ಮೂಲಕ ಹಣ ರವಾನಿಸುವಾಗ ತಪ್ಪಾ ಗಿದೆ. ಇದರಿಂದಾಗಿ ಕೆಲ ಖಾತೆದಾರರಿಗೆ 820 ಕೋಟಿ ರೂ. ಜಮಾ ಆಗಿದೆ. ಈ ಪೈಕಿ ಶೇ.79ರಷ್ಟು ಹಣವಾದ 649 ಕೋಟಿ ರೂ.ಗಳನ್ನು ಈಗಾಗಲೇ ವಾಪಸ್ ಪಡೆಯಲಾಗಿದೆ.

ಹಣ ಪಡೆದವರ ಬ್ಯಾಂಕ್ ಖಾತೆಗಳನ್ನು ಸ್ಥಗಿತಗೊಳಿಸಲಾಗಿದೆ ಎಂದು ಯುಕೋ ಬ್ಯಾಂಕ್ ನಿಯಂತ್ರಕರಿಗೆ ದಾಖಲಿಸಿದ ವರದಿಯಲ್ಲಿ ತಿಳಿಸಿದೆ.

ಈ ತಾಂತ್ರಿಕ ಲೋಪ ಮಾನವ ದೋಷವೇ ಅಥವಾ ಹ್ಯಾಕಿಂಗ್ ಪ್ರಯತ್ನವೇ ಎಂಬ ಬಗ್ಗೆ ಸರ್ಕಾರಿ ಸ್ವಾಮ್ಯದ ಯುಕೋ ಬ್ಯಾಂಕ್ ಯಾವುದೇ ಸ್ಪಷ್ಟನೆ ನೀಡಿಲ್ಲ. ಐ.ಎಂ.ಪಿ.ಎಸ್. ಸೇವೆಯನ್ನು ನ್ಯಾಷನಲ್ ಪೇಮೆಂಟ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ (ಎನ್.ಪಿ.ಸಿ.ಐ.) ನಿರ್ವಹಿಸುತ್ತದೆ. ಈ ಮೂಲಕ ಯಾವುದೇ ಮಧ್ಯ ಪ್ರವೇಶ ಇಲ್ಲದೇ ಎಲೆಕ್ಟ್ರಾನಿಕ್ ಸ್ವರೂಪದಲ್ಲಿ ಹಣ ರವಾನೆಯಾಗುತ್ತದೆ. ಉಳಿದ 171 ಕೋಟಿ ರೂ.ಗಳ ವಸೂಲಿಗಾಗಿ ಬ್ಯಾಂಕ್ ಕ್ರಮಗಳನ್ನು ತೆಗೆದುಕೊಳ್ಳುತ್ತದೆ. ಈ ಬಗ್ಗೆ ಕಾನೂನು ಜಾರಿ ಸಂಸ್ಥೆಗಳು ಅಗತ್ಯ ಕ್ರಮ ತೆಗೆದುಕೊಳ್ಳಲು ಮಾಹಿತಿ ನೀಡಲಾಗಿದೆ ಎಂದು ಬ್ಯಾಂಕ್ ಹೇಳಿದೆ. ನವೆಂಬರ್ 10-13ರ ನಡುವೆ ಐ.ಎಂ.ಪಿ.ಎಸ್.ನಲ್ಲಿರುವ ತಾಂತ್ರಿಕ ಲೋಪದಿಂದಾಗಿ ಯಾರಿಗೆ ಹಣ ತಲುಪಬೇಕಿತ್ತೋ, ಅವರ ಬದಲು ಬೇರೆಯವರ ಖಾತೆಗಳಿಗೆ ಹಣ ಜಮಾ ಆಗಿದೆ ಎಂದು ತಿಳಿಸಲಾಗಿದೆ.

# ನಗರದಿಂದ ಗದಗ ಸೈಕ್ಲಿಂಗ್ ಯಾತ್ರೆ



ದಾವಣಗೆರೆ ಬೈಸಿಕಲ್ ಕ್ಲಬ್' ವತಿಯಿಂದ ಸೈಕ್ಲಿಂಗ್ ಯಾತ್ರೆಯನ್ನು ಆಯೋಜಿಸಲಾಗಿದೆ. ಇಂದು ಬೆಳಿಗ್ಗೆ 3 ಗಂಟೆಗೆ ಪ್ರಾರಂಭವಾಗಲಿದೆ.

ದಾವಣಗೆರೆ ಬೈಸಿಕಲ್ ಕ್ಲಬ್'ನ 20 ಜನ ಸೈಕ್ಲಿಷ್ಟ್ ಗಳು ದಾವಣಗೆರೆಯಿಂದ ಗದಗಗೆ ಸುಮಾರು 140 ಕಿಲೋಮೀಟರ್ ಹಾದಿಯನ್ನು ಸೈಕ್ಲಿಂಗ್ ಮೂಲಕ ಕ್ರಮಿಸಲಿದ್ದಾರೆ ಎಂದು ದಾವಣಗೆರೆ ಬೈಸಿಕಲ್ ಕ್ಲಬ್ ಅಧ್ಯಕ್ಷ ರಾಜೇಂದ್ರ ಪ್ರಸಾದ್, ಕಾರ್ಯದರ್ಶಿ ಕೆ. ಎಸ್. ಮಹೇಶ್ ತಿಳಿಸಿದ್ದಾರೆ.

# ಈ ತಿಂಗಳ ಅಂತ್ಯದವರೆಗೆ ಭದ್ರಾ ನಾಲೆ ನೀರು ಮುಂದುವರಿಸಲು ಶಾಸಕ ಹರೀಶ್ ಒತ್ತಾಯ



ಮಲೇಬೆನ್ನೂರು, ನ. 16 - ಭದ್ರಾ ಜಲಾಶಯದಿಂದ ಬಲದಂಡೆ ನಾಲೆಗೆ ನವಂಬರ್ ಅಂತ್ಯದವರೆಗೆ ನೀರು ಹರಿಸುವಂತೆ ಶಾಸಕ ಬಿ.ಪಿ. ಹರೀಶ್ ಅವರು ನೀರಾವರಿ ಸಚಿವರೂ ಆದ ಡಿಸಿಎಂ ಡಿ.ಕೆ. ಶಿವಕುಮಾರ್ ಅವರನ್ನು ಒತ್ತಾಯಿಸಿದ್ದಾರೆ.

ಈ ಕುರಿತು ಪತ್ರ ಬರೆದಿರುವ ಹರೀಶ್ ಅವರು ಅಚ್ಚುಕಟ್ಟಿನ ಕೊನೆ ಭಾಗಕ್ಕೆ ತಡವಾಗಿ ನೀರು ತಲುಪಿದ್ದರಿಂದ ಭತ್ತದ ನಾಟಿ ತಡವಾಗಿದೆ. ಹಾಗಾಗಿ ಆ ರೈತರ ಭತ್ತದ ಬೆಳೆ ಈಗ ತೆನೆ ಹಚ್ಚಿದ್ದು ಇನ್ನೂ 10 ರಿಂದ 15 ದಿನ ನೀರಿನ ಅವಶ್ಯಕತೆ ಇರುವುದರಿಂದ ಬಲದಂಡೆ ನಾಲೆಯಲ್ಲಿ ನೀರನ್ನು ಈ ತಿಂಗಳ ಅಂತ್ಯದವರೆಗೆ ಮುಂದುವರೆಸುವಂತೆ ಹೇಳಿದ್ದಾರೆ.

## ಸಚಿವರ ಸೂಚನೆ : ಪಾಲಿಕೆಯಿಂದ ಜಕಾತಿ ವಸೂಲಿ ಸ್ಥಗಿತ

ದಾವಣಗೆರೆ, ನ.16- ಜಿಲ್ಲಾ ಉಸ್ತುವಾರಿ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರ ಸೂಚನೆ ಮೇರೆಗೆ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ವಸೂಲಿ ಮಾಡುತ್ತಿದ್ದ ಜಕಾತಿಯನ್ನು ಸ್ಥಗಿತ ಮಾಡುವಂತೆ ಮಹಾನಗರ ಪಾಲಿಕೆ ಆಯುಕ್ತರಾದ ರೇಣುಕಾ ಆದೇಶ ಮಾಡಿದ್ದಾರೆ.

ಸಚಿವರ ಈ ಸೂಚನೆಯಿಂದ ಬೀದಿ ಬದಿ ವ್ಯಾಪಾರ ಮಾಡುತ್ತಿದ್ದ ನೂರಾರು ಬಡವರಿಗೆ ಅನುಕೂಲವಾಗಲಿದ್ದು, ಯಾರಾದರೂ ಜಕಾತಿ ವಸೂಲಿಗೆ ಬಂದರೆ ಜಕಾತಿ ನೀಡದಂತೆ ಆಯುಕ್ತರು ತಿಳಿಸಿದ್ದಾರೆ.

## ರಾಜ್ಯ ಎನ್‌ಪಿಎಸ್ ನೌಕರರ ಸಂಘಕ್ಕೆ ಸಿದ್ದಪ್ಪ ಸಂಗಣ್ಣ ಆಯ್ಕೆ



ಹರಿಹರ, ನ.15- ರಾಜ್ಯ ಸರ್ಕಾರಿ ನೌಕರರ ಹೊಸ ಪಿಂಚಣಿ ಪದ್ಧತಿ (ಎನ್‌ಪಿಎಸ್) ಸಂಘದ ಪ್ರಧಾನ ಕಾರ್ಯದರ್ಶಿ ಆಗಿ ಗೋವಿನಹಾಳು ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಶಿಕ್ಷಕ ಸಿದ್ದಪ್ಪ ಸಂಗಣ್ಣ ಆಯ್ಕೆಯಾಗಿದ್ದಾರೆ.

## ಚೀನಾ ಗಣಿಯಲ್ಲಿ ಬೆಂಕಿ : 26 ಸಾವು

ಬೀಜಿಂಗ್, ನ. 16 – ಉತ್ತರ ಚೀನಾದ ಶಾಂಕ್ಸಿ ಪ್ರಾಂತ್ಯದಲ್ಲಿ ಕಲ್ಲಿದ್ದಲು ಗಣಿ ಕಂಪನಿಯೊಂದರ ಕಟ್ಟಡದಲ್ಲಿ ಬೆಂಕಿ ಕಾಣಿಸಿಕೊಂಡು ಕನಿಷ್ಠ 26 ಜನ ಸಾವನ್ನಪ್ಪಿದ್ದಾರೆ ಹಾಗೂ 38 ಜನ ಗಾಯಗೊಂಡಿದ್ದಾರೆ. ಲ್ಯೂಲಿಯಾಂಗ್ ನಗರದಲ್ಲಿರುವ 5 ಅಂತಸ್ತಿನ ಕಟ್ಟಡದ ಎರಡನೇ ಅಂತಸ್ತಿನಲ್ಲಿ ಬೆಂಕಿ ಕಾಣಿಸಿಕೊಂಡಿತ್ತು. ಈ ಕಟ್ಟಡ ಖಾಸಗಿ ಗಣಿ ಕಂಪನಿಯೊಂದಕ್ಕೆ ಸೇರಿದ್ದಾಗಿದೆ.

ಅಡಿಕೆ ಸಸಿಗಳು ಮಾರಾಟಕ್ಕಿವೆ
ಚಿತ್ರಹಳ್ಳಿ ಗೋಟಿನ 1.5 - 2 ವರ್ಷದ ಉತ್ತಮ ಅಡಿಕೆ ಸಸಿಗಳು ದಾವಣಗೆರೆ ಹತ್ತಿರದ ಕೈದಾಳ ತೋಟದಲ್ಲಿ ಮಾರಾಟಕ್ಕಿವೆ. ಸಂಪರ್ಕಿಸಿ
2 KG Bag - Rs. 22/-
98807 39392
98807 43838

ಹುಟ್ಟು ಹಬ್ಬದ ಶುಭಾಶಯಗಳು
ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಕರ್ನಾಟಕ ಯೂತ್ಸ್ ಅಸೋಸಿಯೇಷನ್ (ರಿ.) ಅಧ್ಯಕ್ಷರೂ, ವೀರಶೈವ ಲಿಂಗಾಯತ ಸಮಾಜದ ಮುಖಂಡರೂ ಆದ
ಶ್ರೀ ದೇವರಮನೆ ಮುರುಗೇಶ್
ಅವರಿಗೆ 43ನೇ ಹುಟ್ಟು ಹಬ್ಬದ ಶುಭಾಶಯಗಳು.
✦ ಸುರೇಶ್ ( ಗಾಂಜಿ) ದಾವಣಗೆರೆ.
✦ ಕೆ.ಜೆ. ಮುರುಗೇಶ್, ಮಾಲೀಕರು KSJ ಟ್ರೇಡರ್ಸ್ ಭರಮಸಾಗರ.
✦ ಕೆ.ಜೆ. ರುದ್ರೇಶ್, ಮಾಲೀಕರು ಶ್ರೀ ಮಹಾರುದ್ರ ಟ್ರೇಡರ್ಸ್, ಭರಮಸಾಗರ.
ಹಾಗೂ ಡಿ.ಎಂ.ಎಸ್. ಅಭಿಮಾನಿ ಬಳಗ, ದಾವಣಗೆರೆ.

ಕೆಲವೇ ಕೆಲವು ದಿನಗಳು ಮಾತ್ರ 30% OFF
ST. JOSEPH TIMES
OLD CLOCKS EXCHANGE OFFER
30% OFFER
ನಿಮ್ಮ ಹಳೆಯ ಗೋಡೆ ಗಡಿಯಾರಗನ್ನು ತೆಗೆದುಕೊಂಡು ನಾವು ನಿಮಗೆ 30% ರಿಯಾಯಿತಿ ದರದಲ್ಲಿ ಕೊಡುತ್ತೇವೆ, ಶುಭ ಸಮಾರಂಭಗಳಿಗೆ ಹೋಲ್ ಸೇಲ್ ದರದಲ್ಲಿ ಗಡಿಯಾರಗಳನ್ನು ಮಾಡಿಕೊಡಲಾಗುವುದು.
ಸಂಪರ್ಕಿಸಿ : 91081 79012

ಹುಟ್ಟು ಹಬ್ಬದ ಶುಭಾಶಯಗಳು
ಇಂದು ತಮ್ಮ ಹುಟ್ಟುಹಬ್ಬದ ಸಂಭ್ರಮದಲ್ಲಿರುವ ಕರ್ನಾಟಕ ಯೂತ್ಸ್ ಅಸೋಸಿಯೇಷನ್ (ರಿ.) ಅಧ್ಯಕ್ಷರೂ, ವೀರಶೈವ ಲಿಂಗಾಯತ ಸಮಾಜದ ಮುಖಂಡರೂ ಆತ್ಮೀಯ ಒಡನಾಡಿಗಳೂ, ನಮ್ಮ ಮಾರ್ಗದರ್ಶಕರೂ ಆದ
ಶ್ರೀ ದೇವರಮನೆ ಮುರುಗೇಶ್
ಅವರಿಗೆ 43ನೇ ಹುಟ್ಟು ಹಬ್ಬದ ಶುಭಾಶಯಗಳು.
ಎಂ.ವಿ. ಜಯಪ್ರಕಾಶ್ ಮಾಗಿ
ಅಖಿಲ ಭಾರತ ವೀರಶೈವ ಮಹಾಸಭಾದ ಜಿಲ್ಲಾ ನಿರ್ದೇಶಕರು, ಚೌಕಿಪೇಟೆ ಅಕ್ಕಿ ವರ್ತಕರ ಸಂಘದ ಅಧ್ಯಕ್ಷರು ಮತ್ತು ಹಿಂದೂ ಮಹಾಗಣಪತಿ ಟ್ರಸ್ಟಿ, ದಾವಣಗೆರೆ.
ಮಾಲೀಕರು ರೈಸ್ ಕಾರ್ನರ್ | ಹರ್ಷ ಕಮರ್ಷಿಯಲ್ಸ್ | ಜೆ.ಪಿ.ಎಂಟರ್ ಪ್ರೈಸಸ್

ನಿಮ್ಮ ಆರೋಗ್ಯಕ್ಕಾಗಿ ನಮ್ಮ ಕಾಳಜಿಯ ಕೊಡುಗೆ
ನಂಜಪ್ಪ ಹಾಸ್ಪಿಟಲ್ಸ್ ದಾವಣಗೆರೆ
50% ರಿಯಾಯಿತಿ ಹೊರ ರೋಗಿಗಳ ಸಮಾಲೋಚನೆ
10% ರಿಯಾಯಿತಿ
• ಔಷಧಿಗಳ ಮೇಲೆ
• ಒಳರೋಗಿ ದಾಖಲಾತಿಗಳ ಮೇಲೆ
25% ರಿಯಾಯಿತಿ
• ರಕ್ತ ಹಾಗೂ ಇತರೆ ಪರೀಕ್ಷೆಗಳು
20% ರಿಯಾಯಿತಿ
• ಅಲ್ಟ್ರಾಸೌಂಡ್ ಸ್ಕ್ಯಾನ್ (USG)
• ಸಿಟಿ ಸ್ಕ್ಯಾನ್
• ಎಂಡೋಸ್ಕೋಪಿ (ರೋಗನಿರ್ಣಯ ಮತ್ತು ಚಿಕಿತ್ಸೆ)
• ಬಯಾಪ್ಸಿ
• ಕ್ಯಾನ್ಸರ್ ಚಿಕಿತ್ಸೆ (ಕೀಮೋಥೆರಪಿ ಇತ್ಯಾದಿ)
• ಕ್ಯಾನ್ಸರ್ ಶಸ್ತ್ರಚಿಕಿತ್ಸೆ
• ಮೆಡಿಕಲ್ ಗ್ಯಾಸ್ಟ್ರೋಎಂಟರಾಲಜಿ
• ನರಶಾಸ್ತ್ರ
• ಸಂಧಿವಾತ
• ಲ್ಯಾಪರೊಸ್ಕೋಪಿಕ್ ಸರ್ಜರಿ
• ಮೂಳೆ ಶಸ್ತ್ರಚಿಕಿತ್ಸೆ
• ಚರ್ಮ ಹಾಗೂ ಸೌಂದರ್ಯ ಶಸ್ತ್ರ
• ಜನರಲ್ ಮೆಡಿಸಿನ್
• ವಿಕಿರಣಶಾಸ್ತ್ರ
ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ, ಕೊಡುಗೆ ಸೀಮಿತ ಅವಧಿಗೆ ಮಾನ್ಯವಾಗಿರುತ್ತದೆ*
ಮಾಗನೂರು ಬಸಪ್ಪ ರಸ್ತೆ (ಹದಡಿ ರಸ್ತೆ), ದಾವಣಗೆರೆ | 08192-260111/7022260111

ಜನ್ಮದಿನದ ಶುಭಾಶಯಗಳು



ದಿನಾಂಕ 17.11.2023 ರಂದು ತಮ್ಮ ಹುಟ್ಟು ಹಬ್ಬದ ಸಂಭ್ರಮದಲ್ಲಿರುವ ಕರ್ನಾಟಕ ಯೂತ್ಸ್ ಅಸೋಸಿಯೇಷನ್ (ರಿ.) ಅಧ್ಯಕ್ಷರೂ, ವೀರಶೈವ ಲಿಂಗಾಯತ ಸಮಾಜದ ಮುಖಂಡರೂ ಆದ
ದೇವರಮನೆ ಮುರುಗೇಶ್
ಅವರಿಗೆ 43ನೇ ವರ್ಷದ ಹುಟ್ಟು ಹಬ್ಬದ ಹಾರ್ದಿಕ ಶುಭಾಶಯಗಳು.
ಶ್ರೀ ದೇವರಮನೆ ಶಿವಕುಮಾರ್ ಸ್ನೇಹ ಬಳಗ